
ಅಖಿಲ ಭಾರತ ಪತ್ರಿಕೆ

ನವೆಂಬರ್ 2019



# ದೈವೀ ಜ್ಯೋತಿ

ಬೆಲೆ : 15/-



ಮರ್ತ್ಯ ಮಾನವನ ಚೈತನ್ಯವೆನ್ನ ಇಡಾ–ಪಿಂಗಳದ ಶ್ವಾಸ,
ಯಾರ ಭಂಗುರವು ನನ್ನ ಸ್ಮಿತದಲ್ಲಿ ಇಂಗಿತದಿ ಮನನ ಹಾಸ
ಭಾವನೆಯ–ರೂಹು ತಾನಾಗ ತಳೆದು ತೊಳತೊಳಗಿ ಬೆಳಗಿ ನಿಂದು
ಬರಿ ಬರಡು ನಿನ್ನ ವಕ್ಷದಲಿ ತಾನು ಆ ಗಳಿಕೆಯಾಗೆ ಇಂದು

ದೃಢಮುಷ್ಠಿಯಲ್ಲಿ ಹಿಡಿದಿಟ್ಟ  ನಿಬಿಡ–ಬಡ–ಲಾಭಗಳನು ತೊರೆಯೆ
ನಾಭಿಶ್ವಾಸದಲಿ ಪರಿಶಮನಗೊಳಿಸೆ  ಛೇದಿಸುವೆ ಅವುಗಳೆದೆಯ,
ಕಾಲವೆಂದಿಗೂ ಶೀಘ್ರದಲಿ ತಾನು ಸಾಂತ್ವನವ ನೀಡದಿರಲು
ನನ್ನ ಯಾತನೆಯ ತೀವ್ರಗೊಳಿಸುತಿಹೆ ರೂಪಿತಕೆ ಹೊಸತು ತರಲು.

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 9 ರೇಣು 2 ಪುಟ 591)**

**ಅಖಿಲ ಭಾರತ ಪತ್ರಿಕೆ**
**ನವೆಂಬರ್ 2019**

ಸಂಪುಟ: 29 ಸಂಚಿಕೆ: 11

**ಪರಿವಿಡಿ**

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 343.
ಫೋನ್: 94487 74920
editorabpbng@yahoo.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

# ದೈವೀ ಜ್ಯೋತಿ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಭವದ ಬಡ ಬದುಕಿನಲಿ ಅಮರತ್ವ** 5
ಅನು: ಡಾ॥ ಮಹಾದೇವ ಸಕ್ರಿ

**ಜನ್ಮದಿಂದ ಜನ್ಮಕ್ಕೆ ಯಾತ್ರಿಕ** 16
ಅನು: ಡಾ॥ ಬಿ.ಆರ್. ಭೀಡ ಮತ್ತು
ನಾಗಜ್ಯೋತಿ ಎಲಿಗಾರ

**ಚೈತ್ಯ ಪುರುಷನ ಕಾರ್ಯಗಳು** 30
ಅನು: ಶ್ರೀ ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರು** 50
ಅನು: ಪಾ.ವೆಂ. ಆಚಾರ್ಯ

**ವಾರ್ತಾಪತ್ರ** 59

## ಸಂಪಾದಕರ ಟಿಪ್ಪಣಿ

ಚೈತ್ಯ ಪುರುಷನ ಶೋಧನೆಯು ಮತ್ತು ಈ ಜೀವವನ್ನು ಅದರೊಡನೆ ಶಾಶ್ವತವಾಗಿ ಗುರುತಿಸುವುದೇ ಈ ಯೋಗದ ಉದ್ದೇಶವಾಗಿರುತ್ತದೆ. ಇದೇ ಅತ್ಯಂತ ಪ್ರಮುಖವಾಗಿರುವ ಸಂಶೋಧನೆಯ ವಿಷಯವೂ ಹೌದು. ಆದರೆ ಮೊದಲು ಈ ಪರಮ ಪವಿತ್ರವಾಗಿರುವ ಅಂಶವು ಹಾಗೂ ಅದು ನಮ್ಮಲ್ಲಿಯೇ ಇರುವ ಅಂಶವಾಗಿರುವುದನ್ನು ನಾವು ಕಡ್ಡಾಯವಾಗಿ ಅರಿತುಕೊಳ್ಳಬೇಕಾಗಿದೆ.

ಮಾನವನಲ್ಲಿ ಇರುವ ಈ ಚೈತ್ಯ ಪುರುಷನ(ಚೈತ್ಯಾತ್ಮನ) ವಿಷಯದ ಬಗೆಗೆ, ಅದು ಅತ್ಯಂತ ವಿಶೇಷ ಪಾತ್ರದಲ್ಲಿ ಇದ್ದು ಮತ್ತು ಕಾರ್ಯತತ್ಪರದಲ್ಲಿದ್ದು, ಯೋಗದ ಸಲುವಾಗಿ ಅದರ ಮಹತ್ವವನ್ನು ತಿಳಿಸುವ ವಿಷಯಕ್ಕೇ ಈ ಸಂಚಿಕೆಯು ರೂಪಿತಗೊಂಡಿರುತ್ತದೆ. (ಎಐಎನ್)

*

## ಸಂಪಾದಕೀಯ

ಚೈತನ್ಯವೆನ್ನುವದು ಮನಸ್ಸಿನ ಪ್ರತಿಮಾ ಸ್ವರೂಪದ ಅಭಿವ್ಯಕ್ತಿ. ಅಂದರೆ ಚೈತನ್ಯವು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಭೌತಿಕ ಸ್ವರೂಪವನ್ನು ತಾಳಿದಾಗ ಅದು 'ಮನಸ್ಸು' ಆಗುತ್ತದೆ. ಅಂದರೆ ಚೈತನ್ಯದ ಘನ ಸ್ವರೂಪವೇ ಮನಸ್ಸು ಎಂದಾಯಿತು. ಆದರೆ ಮನಸ್ಸು ಕರಗುತ್ತದೆ. ಏಕೆಂದರೆ ಅದರ ಸ್ವಭಾವವೇ ಸಲಿಲತೆ. ಹೀಗಾಗಿ ಘನ ಸ್ವರೂಪದಲ್ಲಿ ಭೌತಿಕ ಕಾಯದಲ್ಲಿ ಇದ್ದಾಗಲೂ ಅದು ಕರಗುತ್ತದೆ. ಅದೇ ಚೈತನ್ಯದ ಸ್ವರೂಪದಲ್ಲಿ ಅವಕಾಶದಲ್ಲಿ ಇದ್ದಾಗಲೂ ಸಲಿಲತೆಯ, ದ್ರವ್ಯತ್ವದ ಗುಣವನ್ನು ಹೊಂದಿರುತ್ತದೆ. ಇದರ ಚಲನ ಸ್ವರೂಪವೇ 'ದೇವ ಜ್ಯೋತಿ'ಯಾಗಿರುತ್ತದೆ. ಫ್ಲೇಮ್ ಎನ್ನುವದನ್ನು ಜ್ವಾಲೆ ಎನ್ನುವಂತಿಲ್ಲ.

ಮನಸ್ಸು ಶಿಲಾ ಅವಸ್ಥೆಯಿಂದ ಶಿಲ್ಪ, ಶಿಲ್ಪದಿಂದ ಆಕೃತಿ, ಆಕೃತಿಯಿಂದ ಮೂರ್ತಿ, ಮೂರ್ತಿಯಿಂದ ಸಂಕೇತ, ಸಂಕೇತದಿಂದ ಪ್ರತಿಮೆಯಾಗುತ್ತದೆ. ಈ ಪ್ರತಿಮಾ ಹಂತವು ಪರಿಪೂರ್ಣತೆಯ ಸ್ವರೂಪದ್ದು. ಇವೆಲ್ಲವೂ ಭೌತಿಕವಾಗಿ ಮಾನವನು ಅನುಭವ/ಅನುಭಾವಗೊಳಿಸಿಕೊಳ್ಳುತ್ತಿರುವ ಮನಸ್ಸಿನ ಹಂತಗಳೇ ಆಗಿವೆ.

ಸಲಿಲದ ಪ್ರವಾಹಕ್ಕೆ ಒಂದು ಭೌತಿಕ ಆಧಾರ ಬೇಕು. ಏಕೆಂದರೆ ಭೌತಿಕ ಗುಣದ ಸ್ವರೂಪವನ್ನು ಪಡೆದುಕೊಂಡಿರುತ್ತದೆ. ಆದರೆ ಲೌಕಿಕದ ಅಂಶಗಳಿಂದ ದೂರವಾಗಿದ್ದುಕೊಂಡೇ ತನಗೆ ತಾನೇ ಪ್ರಕಟಗೊಳ್ಳುವ, ಪ್ರಕಾಶನಗೊಳ್ಳುವ "ದೇವ ಜ್ಯೋತಿ" ಅವಕಾಶಲ್ಲಿಯೇ ಪ್ರವಹಿಸುತ್ತ ವ್ಯಾಪ್ತಗೊಳ್ಳುತ್ತದೆ. ಅದು ಲೌಕಿಕ ಅಂಶಗಳಿಂದ ಕೂಡಿದ್ದರೆ ಮಾತ್ರ 'ಮನಸ್ಸಿನ' ಸ್ವರೂಪ ತಾಳುತ್ತದೆ. ಇಲ್ಲದಿದ್ದಲ್ಲಿ, ಅದು ಸ್ವಯಂ ತೇಜಪೂರ್ಣವಾದ ಜ್ಯೋತಿಯೇ ಆಗಿ ನಿರಂತರವಾಗಿ ಬೆಳಗುತ್ತಿರುತ್ತದೆ.



ಭೌತಿಕದ ದೇಹದವತಾರವಿಲ್ಲಿ, ವಿಭ್ರಮೆಗೆ ಇಳಿದ ರೂಪ
ಬರಿ ಕವಚ ದೇಹ, ಆ ದಿವ್ಯ ಶಕ್ತಿ ಆಳದಲಿ ಅಡಗಿ ವಾಸ
ಪರಮಾತಿ ಪರಮ ಸಹನೆಯಾ ಸ್ಥಿತಿಯ ಹುಸಿಗುರುತನಿರಿಸಿಕೊಂಡು

ಯುಗಗಳು ಧದಿಯಾ ಮೂಲಕವೆ ಅವನ ನಾಜೂಕು ನೌಕೆ ಮುಂದು
ನಿತ್ಯ ಸ್ಥಾಯಿಯಿಹ ದೇವಜ್ಯೋತಿಯೊಳು ಚೈತನ್ಯವಿತ್ತು ಆಗ
ಪರಮ ಆಶ್ಚರ್ಯ ರೂಪದಲಿ ತಾನು ಪ್ರಜ್ವಲಿತ ಭಾಗವಾಗ
ತನ್ನ ಸೌಂದರ್ಯ ತನ್ನ ಪ್ರಭೆಯನ್ನು ತನ್ನಲ್ಲೆ ಕಂಡುಕೊಂಡ
ಆ ಕಲಾಕಾರ ನಮ್ಮ ನಶ್ವರದ ಬಡಬದುಕಿನಲ್ಲಿ ಅಮರ.

ಅದಿತಿ ರೂಪಗಳ ಆದಯತೆಯ ತೆರದಿ ಸ್ಥಾಪಿಸಿದ ಸ್ಥಪತಿಯಿವನು
ಅಪರಿಚವಿದ್ದ ಆ ಮೂಲವಾಸಿ, ದರ್ಶಿಸಲು ಬಂದ ತಾನು
ತನ್ನ ಸ್ವಂತಿಕೆಯ ಮಾಯೆಗಳಿಗೆಲ್ಲ ದೀಕ್ಷಿತನು ಗವಸನಿರಿಸೆ
ವಿಶ್ವ ಚಿಂತನವ ದೇವಕಣದಲ್ಲಿ ಹುದುಗಿಸುತ ಆಗಲವನು.

– ಪುಟ್ಟು ಕುಲಕರ್ಣಿ

[ಶ್ರೀ ಅರವಿಂದರ ಸಾವಿತ್ರಿ ಪುಟ 23]

# ಭವದ ಬಡ ಬದುಕಿನಲಿ ಅಮರತ್ವ

– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ

**ಪರಮಾತ್ಮ, ಆತ್ಮ, ಜೀವಾತ್ಮ**

ಸ್ವಯಂ, ಆತ್ಮನ್, ಅದು ತನ್ನ ಸ್ವರೂಪದಲ್ಲಿ ಸರ್ವೋತ್ಕೃಷ್ಟವಾಗಿದೆ, ಜೊತೆಗೆ ವಿಶ್ವವ್ಯಾಪಿಯಾಗಿದೆ (ಪರಮಾತ್ಮ, ಆತ್ಮ); ಅದು ಪ್ರತ್ಯೇಕವಾಗಿ ಒಂದು ಪ್ರಮುಖ ಪುರುಷನಾದಾಗ(ಸಾಕಾರಗೊಂಡಾಗ), ಅದು ಜೀವಾತ್ಮನ್ (Central Being). ಜೀವಾತ್ಮನು ವಿಶ್ವವ್ಯಾಪ್ತಿತ್ವದೊಡನೆ ತನ್ನ ಏಕತೆಯನ್ನು ಅನುಭವಿಸುತ್ತಾನೆ, ಆದರೆ ಅದೇ ಸಮಯದಲ್ಲಿ ಅವನು, ದೈವದ ಒಂದು ಭಾಗವಾಗಿ ಪ್ರಮುಖ ಪ್ರತ್ಯೇಕತೆಯನ್ನೂ ಅನುಭವಿಸುತ್ತಾನೆ.

*

**ಚೇತನ (Spirit), ಜೀವಾತ್ಮನ್ (Central Being) ಮತ್ತು ಚೈತ್ಯ ಪುರುಷ (Psychic Being)**

ಚೈತನ್ಯವು ಆತ್ಮನ್, ಬ್ರಹ್ಮನ್ ಸಾರಭೂತವಾದ ದೈವವಾಗಿದೆ.

ಒಂದು ದೈವಿಕವು ಯಾವಾಗ ತನ್ನ ಸದಾ ಅಂತರ್ಗತವಾದ ಬಹುತ್ವವನ್ನು ವ್ಯಕ್ತಪಡಿಸಿದಾಗ, ಈ ಪ್ರಧಾನವಾದ ಪುರುಷ ಅಥವಾ ಆತ್ಮನ್, ತನ್ನ ವ್ಯಕ್ತಿತ್ವಗಳ ವಿಕಾಸದ ಮತ್ತು ಇಲ್ಲಿಯ ಪ್ರಾಪಂಚಿಕ ಜೀವಗಳ ಮೇಲೆ ಊರ್ಧ್ವದಿಂದ ಪ್ರಭಾರ ಮಾಡುವ ಪ್ರಮುಖ ಪುರುಷ, ಜೀವಾತ್ಮನ್ ಆಗುತ್ತಾನೆ, ಆದರೆ ಪ್ರಾಪಂಚಿಕವಾಗಿ ಪ್ರಕಟವಾಗುವದಕ್ಕಿಂತ ಮೊದಲು ಅವನು ಸ್ವತಃ ಚಿರವಾದ ದೈವದ ಅಂಶವಾಗಿದ್ದಾನೆ – *ಪರಾಪ್ರಕೃತಿರ್ಜೀವಭೂತ.*

ಈ ಅವತರಣದ ಪ್ರಕಟವಾಗುವಿಕೆಯಲ್ಲಿ, ಅಪರಾಪ್ರಕೃತಿ, ಈ ಚಿರವಾದ ದೈವಿಕದ ಅಂಶವು ವ್ಯಕ್ತಿಗತ ವಿಕಾಸವನ್ನು ಸಮರ್ಥಿಸುತ್ತ, ಬೌದ್ಧಿಕತೆಯನ್ನು, ಪ್ರಾಣವನ್ನು ಮತ್ತು ದೈಹಿಕ ಜೀವನನನ್ನು ಬೆಂಬಲಿಸುತ್ತ ಆತ್ಮವಾಗಿ, ದೈವಾಗ್ನಿಯ ಒಂದು ಅಗ್ನಿಕಣವಾಗಿ ಗೋಚರಿಸುತ್ತದೆ. ಕಿಡಿಯು(ಸ್ಫುಲಿಂಗವು) ಅಗ್ನಿಯಾಗಿ ಬೆಳೆಯುವುದು, ಪ್ರಜ್ಞೆಯ ಅಭಿವೃದ್ಧಿಯೊಂದಿಗೆ ವಿಕಾಸವಾಗುವುದು ಚೈತ್ಯ ಪುರುಷನು. ಆದುದರಿಂದ ಚೈತ್ಯ ಪುರುಷನು ವಿಕಾಸಶೀಲ, ವಿಕಾಸಕ್ಕಿಂತ ಮುಂಚೆಯ ಜೀವಾತ್ಮನಂತೆ ಅಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/56**

ಜೀವಾತ್ಮನ್ ಮತ್ತು ಆತ್ಮ, ಇವೆರಡೂ ಬೇರೆ ರೀತಿಯಲ್ಲಿ ಆ ದೇವರ ಅಂಶಗಳಾಗಿವೆ. ವಾಸ್ತವದಲ್ಲಿ ಅವೆರಡೂ ಒಂದೇ ಅಸ್ತಿತ್ವದ ಅಂಶಗಳಾಗಿವೆ, ಆದರೆ ಅವುಗಳಲ್ಲಿ ಒಂದು ಪ್ರಕೃತಿಯ ಮೇಲೆ ವಿಕಸಿಸುತ್ತಿರುವುದಿಲ್ಲ, ಮತ್ತೊಂದು ಚೈತ್ಯ ಪುರುಷನನ್ನು ಸೃಷ್ಟಿಯಲ್ಲಿ ವಿಕಸಿಸುತ್ತದೆ.

*

**ಜೀವಾತ್ಮ**

ಸಾಮಾನ್ಯವಾಗಿ, ನಮ್ಮ ಯೋಗದಲ್ಲಿ "ಪ್ರಧಾನ ಪುರುಷ" ಎಂಬ ನುಡಿಗಟ್ಟು, ಉಳಿದೆಲ್ಲವನ್ನೂ ಸಮರ್ಥಿಸಿ (ಬೆಂಬಲಿಸಿ) ಹಾಗೂ ಹುಟ್ಟು ಮತ್ತು ಸಾವುಗಳ ಮುಖಾಂತರ ಉಳಿದುಕೊಂಡಿರುವ ನಮ್ಮಲ್ಲಿರುವ ದೈವಿಕದ ಅಂಶಕ್ಕೆ ಅನ್ವಯಿಸುತ್ತದೆ. ಈ ಪ್ರಧಾನ ಪುರುಷನಿಗೆ ಎರಡು ರೂಪಗಳಿವೆ –

ಉನ್ನತ ಸ್ವಯಂ ಜ್ಞಾನ ಬಂದಾಗ ನಾವು ಜಾಗೃತಗೊಳ್ಳುವ ನಮ್ಮ ನೈಜ ಅಸ್ತಿತ್ವ, ಅದು ಮೇಲಿರುವ ಜೀವಾತ್ಮನ್, – ಮನಸ್ಸು, ದೇಹ ಮತ್ತು ಜೀವದ ಹಿಂದೆ ನಿಂತಿರುವ, ಕೆಳಗಡೆಯ ಚೈತ್ಯ ಪುರುಷ.

ಜೀವನದಲ್ಲಿ, ಜೀವಾತ್ಮನು ಅಭಿವ್ಯಕ್ತಿಯ ಮೇಲಿದ್ದಾನೆ ಮತ್ತು ಅದರ ಅಧಿಕಾರಿಯಾಗಿರುತ್ತಾನೆ; ಚೈತ್ಯ ಪುರುಷನು ಅಭಿವ್ಯಕ್ತಿಯ ಹಿಂದೆ ನಿಂತು ಅದನ್ನು ಬೆಂಬಲಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/60–61**

**ಚೈತ್ಯ ಪುರುಷ**

ಕೆಲವು ವಸ್ತುಗಳಲ್ಲಿ ಚೈತ್ಯ ಪುರುಷನು ಅಭಿವೃದ್ಧಿ ಹೊಂದಿಲ್ಲವೆಂಬ ವಿಷಯವನ್ನು ಹೊರತು ಪಡಿಸಿದರೆ ಆತ್ಮ ಮತ್ತು ಚೈತ್ಯ ಪುರುಷ ಬಹುಮಟ್ಟಿಗೆ ಒಂದೇ ಆಗಿವೆ. ಆದಾಗ್ಯೂ, ಆತ್ಮವೆಂದು ಕರೆಯಬಹುದಾದ ದೇವರ ವಿದ್ಯುತ್ಕಣವು ಅಲ್ಲಿರುತ್ತದೆ. ಸಂಸ್ಕೃತದಲ್ಲಿ ಅತೀಂದ್ರಿಯ ಜೀವಿಯನ್ನು ಹೃದಯದಲ್ಲಿನ ಪುರುಷ ಅಥವಾ ಚೈತ್ಯ ಪುರುಷ ಎಂದು ಕರೆಯುತ್ತಾರೆ. (ವಿಕಸನದಲ್ಲಿ ಅಭಿವೃದ್ಧಿಗೊಳ್ಳುತ್ತಿರುವ ಆತ್ಮವು ಚೈತ್ಯ ಪುರುಷ)

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/82**

**ಅಂತರಾತ್ಮ**

ವೈಯಕ್ತಿಕ ವಿಕಾಸನದ ಅಂತರಾಳದ ಮೂಲತತ್ವದಲ್ಲಿ ಮತ್ತು ಪ್ರಕೃತಿಯ ಸಾಧನಾಭೂತ ಭಾಗಗಳಾದ ಮನಸ್ಸು ಹಾಗೂ ಜೀವನ ಹಾಗೂ ದೇಹವನ್ನು ಬೆಂಬಲಿಸುವ ಮುಖಾಂತರ ಅದು ಪ್ರಾಪಂಚಿಕ ಅನಾತ್ಮ ಸಾಕ್ಷಿಯಿಂದ ಅದರ ಸಮರ್ಪಕ ಇರುವಿಕೆಯಾದ ದೈವೀ ಬೆಳಕು ಹಾಗೂ ಅಮರ್ತ್ಯದ ಕಡೆಗೆ ಬೆಳೆಯಲು ಪ್ರಯತ್ನಿಸುವ ದೈವಿಕ ಅಂಶವು ಆತ್ಮವಾಗಿದ್ದು, ಅದೇ *ಅಂತರಾತ್ಮನ್ ಆಗಿದೆ.* ಅದರ ಸಾಧನಗಳ ಮಿತಿಗಳು ಅದರ ಮೇಲೆ ನಿಮ್ನ (ಅವತರಣದ) ಚಲನೆಗಳ ಸ್ವೀಕರಿಸುವಿಕೆಯನ್ನು ಹೇರುತ್ತದೆ ಮತ್ತು ಅದರ ಮುನ್ನಡೆಗೆ ಬೇಕಾದ ಸಾಧನಗಳನ್ನು ಆ ಪರ್ಯಾಯದಿಂದ ಪಡೆದುಕೊಳ್ಳುವಾಗಲೂ, ಆತ್ಮದ ಹಾಗೂ ಪ್ರಕೃತಿಯ ನಡುವಿನ ಒಪ್ಪಂದವು ಈ ಚಲನೆಯನ್ನು ಕುಂಠಿತಗೊಳಿಸುತ್ತದೆ. ಈ ವಿಕಾಸದ ಮುಖಾಂತರ ಅಭಿವೃದ್ಧಿಯಾಗುವ ಮತ್ತು ಎಲ್ಲವೂ ಅಜ್ಞಾನದಾಚೆಗಿನ ಉನ್ನತ ವಿಕಾಸಕ್ಕೆ ಅಣಿಯಾಗುವವರೆಗೆ ಜನುಮದಿಂದ ಜನ್ಮಕ್ಕೆ ಸಾಗುತ್ತಿರುವ ಚೈತ್ಯ ಪುರುಷನು ಆತ್ಮ–ಸ್ವರೂಪ ಅಥವಾ ಆತ್ಮ–ಗುಣವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/110**

**ಆತ್ಮ**

ಆತ್ಮ ಮತ್ತು ಚೈತ್ಯ ಒಂದೇ ಅಲ್ಲ – ಯಾವುದು ಎಲ್ಲವುಗಳಲ್ಲಿ ಒಂದಾಗಿದೆಯೋ, ಪ್ರಶಾಂತವಾಗಿದೆಯೋ, ವ್ಯಾಪಕವಾಗಿದೆಯೋ, ಎಂದೆಂದಿಗೂ ಶಾಂತವಾಗಿದೆಯೋ, ಯಾವಾಗಲೂ ಮುಕ್ತವಾಗಿದೆಯೋ ಅದು ಆತ್ಮ. ಆತ್ಮವನ್ನು ಮೀರದೆ ಜೀವನವನ್ನು ಅನುಭವಿಸುವ ಚೈತ್ಯನು ಆತ್ಮ ಮತ್ತು ಅದು ವಿಕಾಸವಾಗುವ ಮನಸ್ಸು, ಜೀವನ ಹಾಗೂ ದೇಹಗಳೊಂದಿಗೆ ಅಭಿವೃದ್ಧಿ ಹೊಂದುತ್ತದೆ. ಚೈತ್ಯನು ದೇಹದಂತೆ ಕಷ್ಟಪಡುವುದಿಲ್ಲ, ಅದು ನೋವು ಅಥವಾ ಸಂಕಟ ಅಥವಾ ನಿರಾಶೆ ಹೊಂದಿಲ್ಲ; ಆದರೆ ಅದು ಇವುಗಳಿಗಿಂತ ಭಿನ್ನವಾದ ದುಃಖವನ್ನು ಹೊಂದಿದೆ. ಯಾವಾಗ ವಿಷಯಗಳು (ಸಂಗತಿಗಳು) ದೈವದ ವಿರುದ್ಧ ಹೋಗುತ್ತವೆಯೋ, ಯಾವಾಗ ಅಸ್ಪಷ್ಟತೆ ಮತ್ತು ವಿಘ್ನಗಳು ಬಹಳ ಗಂಭೀರವಾಗಿರುತ್ತವೆಯೋ, ಯಾವಾಗ ಮನಸ್ಸು ಹಾಗೂ ಭೌತಿಕಗಳು ಬೇರೆ ವಿಷಯಗಳ ಬೆನ್ನು ಹತ್ತುತ್ತವೆಯೋ, ಯಾವಾಗ ಅನ್ಯಾಯ ಹಾಗೂ ಅನೃತ

ಹಾಗೂ ಅಜ್ಞಾನಗಳು ಬೆಳಕಿಗೆ ಅತಿ ಶಕ್ತಿಯುತವಾಗಿ ತೋರುತ್ತವೆಯೋ, ಆಗ ಅದು ಒಂದು ತರಹದ ಹಾತೊರೆಯುವಿಕೆಯ ನೀರವ ಮಧುರ ದುಃಖದ ಅನುಭವ ಹೊಂದುತ್ತದೆ. ಅದು ನಿರಾಶೆ ಹೊಂದುವುದಿಲ್ಲ, ಆದರೆ ಇವುಗಳೆಲ್ಲವು ಇರಲೇಬೇಕೆಂದೂ ಯೋಚಿಸುವುದಿಲ್ಲ ಮತ್ತು ಚೈತ್ಯನು ಅವುಗಳಿಗಾಗಿ ಹಂಬಲಿಸುತ್ತಿರುವಾಗ ಅನ್ಯಥಾ ಅದು ತೀರಾ ತೀಕ್ಷ್ಣವಾದಾಗ ದುಃಖಕ್ಕೆ ಸನಿಹವಾದ ಎಂತಹದ್ದೋ ಅನುಭವವನ್ನು ಅದು ಹೊಂದುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/108**

## ಚೈತ್ಯ ಮತ್ತು ಮಕ್ಕಳು

ಚೈತ್ಯ ಪುರುಷನು, ಜನರು(ವ್ಯಕ್ತಿ) ಜನಿಸುವುದಕ್ಕಿಂತ ಮುಂಚೆ, ತಮ್ಮ ತಾಯಿಯ ಗರ್ಭದಲ್ಲಿರುವುದಕ್ಕಿಂತ ಮೊದಲು ಕೂಡ ಅವರ ರಚಿಸುವಿಕೆಯನ್ನು ಗಮನಿಸುತ್ತಾನೆ. ಚೈತ್ಯ ಪುರುಷನು ಮಕ್ಕಳ ಮೊದಲ ಅಳುವಿನ ಕ್ಷಣದಲ್ಲಿ ಅವರ ಸಂಪರ್ಕಕ್ಕೆ ಬರುತ್ತಾನೆ. ಚೈತ್ಯ ಪುರುಷನು, ಜನನವಾಗುವ ಕೆಲವು ಘಂಟೆಗಳ ಮುಂಚೆ ಅಥವಾ ಕೆಲವು ದಿನಗಳ ನಂತರ, ಅಥವಾ ಕೆಲ ವಾರಗಳ ನಂತರ, ಕೆಲ ತಿಂಗಳುಗಳ ನಂತರ, ಕೆಲ ವರ್ಷಗಳ ನಂತರ ಬರುತ್ತಾನೆ ಅಥವಾ ಎಂದಿಗೂ ಬರದೇ ಇರಬಹುದು!

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/140**

ಹದಿನಾಲ್ಕನೇ ವಯಸ್ಸಿಗಿಂತ ಐದನೇ ವಯಸ್ಸಿನಲ್ಲಿ ಮತ್ತು ಇಪ್ಪತ್ತೈದನೆ ವಯಸ್ಸಿಗಿಂತ ಹದಿನಾಲ್ಕನೆ ವಯಸ್ಸಿನಲ್ಲಿ ತಮ್ಮ ಚೈತ್ಯ ಪುರುಷನ ಬಗ್ಗೆ ಅರಿವಿದ್ದ ಮಕ್ಕಳನ್ನು ನಾನು ಕಂಡಿದ್ದೇನೆ; ಮತ್ತು ಇದೆಲ್ಲದಕ್ಕಿಂತ ಮೇಲಾಗಿ ಮಕ್ಕಳು ಶಾಲೆಗೆ ಹೋಗುವ ಕ್ಷಣದಿಂದ ಅವರು ಆ ಪ್ರಕಾರದ ತೀಕ್ಷ್ಣವಾದ ಮಾನಸಿಕ ತರಬೇತಿಗೆ ಒಳಗಾಗುತ್ತಾರೆ. ಇದು, ಅವರ ಗಮನವನ್ನು ಅವರ ಅಸ್ತಿತ್ವದ ಬೌದ್ಧಿಕ ಭಾಗದ ಕಡೆ ಸೆಳೆಯಲ್ಪಡುತ್ತದೆ, ಆಗ ಅವರು ಬಹುತೇಕ ಯಾವಾಗಲೂ ಮತ್ತು ಬಹುತೇಕ ಪೂರ್ಣವಾಗಿ ಈ ಸಂಪರ್ಕವನ್ನು ಚೈತ್ಯ ಪುರುಷನಿಂದ ಕಳೆದುಕೊಳ್ಳುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/26**

ಚಿಕ್ಕ ಮಕ್ಕಳ ಕಣ್ಣುಗಳಲ್ಲಿ ಎಚ್ಚರಿಕೆಯಿಂದ ನೋಡು ಆಗ ನೀನು ಒಂದು ಪ್ರಕಾರದ ಬೆಳಕನ್ನು ಕಾಣುವಿ, ಕೆಲವರು ಅದನ್ನು ನಿರ್ಭೀತವೆಂದು ವರ್ಣಿಸುತ್ತಾರೆ – ಆಶ್ಚರ್ಯದಿಂದ ಜಗತ್ತಿನಡೆಗೆ ನೋಡುವ ಇದು ಸತ್ಯ, ವಾಸ್ತವ. ಸರಿ, ಸತ್ಯವನ್ನು ನೋಡುವ ಚೈತ್ಯನ ವಿಸ್ಮಯ ಇದು, ಇದು ವಿಸ್ಮಯದ ಅರಿವು. ಆದರೆ ಜಗತ್ತಿನಿಂದ ಅತಿ ದೂರವಿರುವುದರಿಂದ ಜಗತ್ತಿನ ಬಗ್ಗೆ ಅಷ್ಟಾಗಿ ತಿಳಿದುಕೊಂಡಿಲ್ಲ. ಇದು ಮಕ್ಕಳಲ್ಲಿ ಇದೆ. ಆದರೆ ಅವರು ಹೆಚ್ಚು ತಿಳಿದುಕೊಂಡಂತೆ, ಅವರು ಹೆಚ್ಚು ಬುದ್ಧಿಶಾಲಿಗಳಾದಂತೆ, ಹೆಚ್ಚು ಶಿಕ್ಷಿತರಾದಂತೆ ಇದು ಅಳಿಸಿ ಹೋಗುತ್ತದೆ. ಆಗ ನೀವು ಅವರ ಕಣ್ಣಗಳಲ್ಲಿ ಎಲ್ಲ ಬಗೆಯ ಸಂಗತಿಗಳನ್ನು ಕಾಣುವಿರಿ: ಯೋಚನೆಗಳು, ಅಪೇಕ್ಷೆಗಳು, ಉದ್ವೇಗಗಳು, ಕ್ರೂರತೆ – ಆದರೆ ಈ ಪ್ರಕಾರದ ಚೊಕ್ಕ ಅಲ್ಪ ಪ್ರಕಾಶ ಅಲ್ಲಿರುವುದಿಲ್ಲ. ಅಲ್ಲಿಗೆ ಹೋಗಿದ್ದು ಮನಸ್ಸು ಮತ್ತು ಚೈತ್ಯ ಬಹಳ ಹಿಂದೆ ಹೋಗಿದೆ ಎಂದು ನೀವು ನೆಚ್ಚಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/26–27**

**ದೇವತೆಗಳು ಮತ್ತು ಚೈತ್ಯ ಪುರುಷ**

ತಮ್ಮ ಸ್ವಂತ ಸ್ವಭಾವಕ್ಕನುಸಾರವಾಗಿ, ಸಹಜವಾಗಿ ಹಾಗೂ ನಿರ್ಬಂಧವಿಲ್ಲದೆ ಜೀವಿಸುವುದರಿಂದ ದೇವತೆಗಳು ದೋಷರಹಿತರು; ಅದು ಅವರ ಧರ್ಮನಿಷ್ಠ ಮಾರ್ಗ. ಆದರೆ, ಉನ್ನತ ದರ್ಶನ ಮತ್ತು ಒಂದು ಸಮಗ್ರ ದೂರದೃಷ್ಟಿ ಹೊಂದಿದ್ದ ಪುರುಷನು ಉನ್ನತ ದೃಷ್ಟಿಕೋನದಿಂದ ನೋಡಿದರೆ ಅವರಲ್ಲಿ ಮನುಷ್ಯರಿಗಿಂತ ಅತ್ಯಲ್ಪ ಸಂಖ್ಯೆಯ ವೈಶಿಷ್ಟ್ಯಗಳಿರುವುದು ಕಂಡುಬರುತ್ತದೆ. ಈ ಸನ್ನಿವೇಶದಲ್ಲಿ, ಮನುಷ್ಯರು ಅಹಂಕಾರಿಯಾಗಿಲ್ಲದಾಗ, ತಮ್ಮ ಅಹಂಭಾವವನ್ನು ಜಯಿಸಿದಾಗ ಅವರ ಪ್ರೀತಿಯ ಹಾಗೂ ಸಮರ್ಪಣೆಯ ಸಾಮರ್ಥ್ಯದಿಂದ ದೇವತೆಗಳಿಗಿಂತ ಹೆಚ್ಚಿನ – ಇನ್ನೂ ಹೆಚ್ಚಿನ ಬಲವನ್ನೂ, ಶಕ್ತಿಯನ್ನು ಹೊಂದಬಹುದೆಂಬುದು ಸಾಬೀತಾಗಿದೆ.

ನಿಶ್ಚಿತವಾಗಿಯೂ ಮನುಷ್ಯರು ದೇವತೆಗಳಿಗಿಂತ ಸರ್ವೋತ್ತಮನ ಅತಿ ಸನಿಹದಲ್ಲಿರುತ್ತಾರೆ. ಎಲ್ಲ ಅವಶ್ಯಕವಾಗದ ಷರತ್ತುಗಳನ್ನು ಪೂರೈಸಿದಾಗ, ಮನುಷ್ಯರು ಸರ್ವೋತ್ತಮನ ಸಾಮೀಪ್ಯಕ್ಕೆ ಬರುವ ಸಾಮರ್ಥ್ಯ, ಅಂತಸ್ಸತ್ವವನ್ನು ಹೊಂದಿದ್ದಾರೆ.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಆಗಸ್ಟ್ 9, 1958**

*ದೇವತೆಗಳು ಈಗಾಗಲೇ ಪೂರ್ಣ ಜಾಗೃತಿಯನ್ನು ಹೊಂದಿಲ್ಲವೇ?!*

ಇಲ್ಲ, ಅವರಿಗೆ ಜೀವನದ ಪೂರ್ಣಭಾಗ ಅಸ್ತಿತ್ವದಲ್ಲಿ ಇರದೇ ಇರುವುದರಿಂದ ಅವರು ಚೈತ್ಯ ಪುರುಷನನ್ನು ಹೊಂದಿಲ್ಲ.

ಇಲ್ಲಿ ಭಾರತದಲ್ಲಿ ಎಲ್ಲ ಸಂಪ್ರದಾಯಗಳಲ್ಲಿ (ಮತ್ತು ಬೇರೆ ದೇಶಗಳಲ್ಲಿ ಹಾಗೂ ಬೇರೆ ಧರ್ಮಗಳಲ್ಲಿ ಸಹ), ಈ ದೇವತೆಗಳು ಬಹಳ ಸಮಯ ಅಸಾಧ್ಯವಾಗಿ ವರ್ತಿಸುತ್ತಾರೆ! ಇದಕ್ಕೆ ಸರಳ ಕಾರಣವೇನೆಂದರೆ, ಅವರಲ್ಲಿ ಚೈತ್ಯ ಪುರುಷ ಇಲ್ಲದಿರುವುದು. ನಿರ್ದಿಷ್ಟವಾಗಿ ಈ ಪ್ರಾಪಂಚಿಕ ಇರುವಿಕೆಗೆ ಸೇರಿದ ಒಂದು ಸಂಗತಿಯು ಚೈತ್ಯ ಪುರುಷ;... ಸರಿಪಡಿಸುವುದು, ಮಾಡಿದ್ದನ್ನು ರದ್ದು ಮಾಡುವುದು ಅದಕ್ಕೆ ನೀಡಲಾದ ಅನುಗ್ರಹ.

*ಹೌದು, ಆದರೆ ದೇವತೆಗಳು ದೇವರ ಪ್ರಜ್ಞೆಯನ್ನು ಹೊಂದಿಲ್ಲವೆ?*

ಮುದ್ದು ಮಗುವೆ ಕೇಳು, ಅವರು ತಮ್ಮ ಸ್ವಂತ ದೈವತ್ವದ ಮತ್ತು ಅದಕ್ಕಿಂತ ಮೇಲಿನ ಎಲ್ಲದರ ಬಗ್ಗೆ ಅರಿವು ಹೊಂದಿದ್ದಾರೆ.

ಹೌದು, ಅವರು ದೇವರೊಡನೆ ಸಂಪರ್ಕ ಹೊಂದಿದ್ದಾರೆ, ಆದರೆ ಅವರು *ಶರಣಾಗತಿಯು* ಏನು ಎಂಬ ಬಗ್ಗೆ ಅಸ್ಪಷ್ಟವಾದ ಜ್ಞಾನವನ್ನೂ ಹೊಂದಿಲ್ಲವೆಂದು ನನ್ನ ಅನುಭವದಿಂದ ಗೊತ್ತು.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಆಗಸ್ಟ್ 2, 1961**

## ಚೈತ್ಯ ಭಾವ ಮತ್ತು ಅತಿಮಾನಸ ಜೀವನ

ಜೀವನದಲ್ಲಿ ಒಂದು ನಿರ್ದಿಷ್ಟ ಚೈತ್ಯ ಭಾವದಿಂದ – ಏನೋ ಒಂದು ಪ್ರತಿಬಿಂಬದಂತೆ, ವಸ್ತುವಿನಲ್ಲಿ ದೇವರ ಇರುವಿಕೆಯ ಒಂದು ಉಜ್ವಲ ಹೊಮ್ಮುವಿಕೆಯಂತೆ – ಅತಿಮಾನಸ ಪ್ರಜ್ಞೆಗೆ ಹೋಗುವುದಕ್ಕಿಂತ ಮಾನಸಿಕ ಜೀವನದಿಂದ ಅತಿಮಾನಸ ಜೀವದೆಡೆಗೆ ಹೋಗುವುದು ಬಹಳ ಕಷ್ಟದ ವಿಷಯವೆಂದೇ ಹೇಳಬಹುದು; ಸರ್ವೋತ್ತಮ ಪ್ರಾಜ್ಞ ಊಹಾಪೋಹದಿಂದ ಯಾವುದೇ ಅತಿಮಾನಸ ಕಂಪನದೆಡೆಗೆ ಹೋಗುವುದಕ್ಕಿಂತ ಚೈತ್ಯ ಭಾವದಿಂದ ಅತಿಮಾನಸ ಪ್ರಜ್ಞೆಯ ಕಡೆಗೆ ಹೋಗುವುದು ತುಂಬಾ ಸುಲಭ. ಬಹುಶಃ ಇದೇ

ಶಬ್ದ ನಮ್ಮನ್ನು ದಾರಿ ತಪ್ಪಿಸುತ್ತದೆ! ಒಂದು ಉನ್ನತ ಪ್ರಾಜ್ಞ ಮಾನಸಿಕ ಚಟುವಟಿಕೆಯ ಮುಖಾಂತರ ಅದನ್ನು ನಾವು ತಲುಪಲು ನಿರೀಕ್ಷಿಸುವುದರಿಂದ ಬಹುಶಃ ನಾವು ಅದನ್ನು 'ಅತಿಮಾನಸ' ಎಂದು ಕರೆಯುತ್ತೇವೆ. ಆದರೆ ಸತ್ಯಾಂಶ ತೀರಾ ಭಿನ್ನವಾಗಿದೆ. ಬಹಳ ಉನ್ನತವಾದ ಹಾಗೂ ಶುದ್ಧವಾದ ಹಾಗೂ ಅತ್ಯುಚ್ಚ ಚಟುವಟಿಕೆಯೊಂದಿಗೆ ನಾವು ಒಂದು ತರಹದ ತಂಪು, ಶಕ್ತಿಹೀನ ಅಮೂರ್ತತೆಯ ಕಡೆಗೆ, ಅತಿಮಾನಸ ಸತ್ಯದ ಅನುಭವದಿಂದ ಮತ್ತು ಜೀವನದಿಂದ ಬಹಳ ದೂರವಿರುವ ಒಂದು ಮಂಜಿನ ಬೆಳಕಿನ ಕಡೆಗೆ ಹೋಗುತ್ತಿರುವಂತೆ ತೋರುತ್ತದೆ. ಜಗತ್ತಿನಲ್ಲಿ ಹರಡುತ್ತಿರುವ ಹಾಗೂ ಕಾರ್ಯ ನಿರ್ವಹಿಸುತ್ತಿರುವ ಜೀವನಾಧಾರಗಳು ಒಂದು ಪ್ರೀತಿಪೂರಿತತೆಯನ್ನು, ಒಂದು ಸಾಮರ್ಥ್ಯವನ್ನು, ಎಲ್ಲ ಪ್ರಾಜ್ಞ ಚಟುವಟಿಕೆಯಲ್ಲಿ ತಂಪಾದ ಮತ್ತು ಅದರ ಪಕ್ಕದಲ್ಲಿ ಸಪ್ಪೆ ಎಂದು ತೋರುವ ಒಂದು ತೀಕ್ಷ್ಣ ಆನಂದವನ್ನು ಒಳಗೊಂಡಿರುತ್ತದೆ. ಆದುದರಿಂದ ಇವುಗಳ ಬಗ್ಗೆ ಎಷ್ಟು ಕಡಿಮೆ ಮಾತನಾಡುತ್ತೇವೆಯೋ ಅಷ್ಟು ಒಳ್ಳೆಯದು. ಎಲ್ಲ ಸಾಧ್ಯವಾದ ವಿವರಣೆಗಳಿಗಿಂತ, ಆಳವಾದ ಮತ್ತು ಸತ್ಯವಾದ ಪ್ರೀತಿಯ ಒಂದು ಒಂಟಿ ಕ್ಷಣ, ಪ್ರೇರಣೆಯು ಮತ್ತು ದೈವದ ಅನುಗ್ರಹದೊಡನೆ ಒಂದು ನಿಮಿಷದ ಆಳವಾದ ಸಂಪರ್ಕವು ನಿನ್ನನ್ನು ಧ್ಯೇಯದ ಸನಿಹಕ್ಕೆ ತರುತ್ತದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಏಪ್ರಿಲ್ 17, 1971.**

**ಚೈತ್ಯ ಪುರುಷ ಮತ್ತು ಭವಿಷ್ಯದ ಅತಿಮಾನುಷತೆ**

ಮಾನವಕುಲದ ಆರಂಭದಲ್ಲಿ, ಅಹಮಿಕೆಯು ಏಕೀಕೃತಗೊಳಿಸುವ ಮೂಲವಸ್ತುವಾಗಿತ್ತು. ಈ ಅಹಮಿಕೆಯ ಸುತ್ತ ಅಸ್ತಿತ್ವದ ವಿವಿಧ ಸ್ಥಿತಿಗಳು ರೂಪುಗೊಂಡವು. ಈ ಅತಿಮಾನುಷತೆ ಜನ್ಮ ತಾಳುವ ಸಮಯದಲ್ಲಿ, ಮಾನವನಲ್ಲಿ ದೈವತ್ವವನ್ನು ಪ್ರಕಟಪಡಿಸಲು, ದೈವದ ಕರ್ತೃತ್ವದ ಮುಖಾಂತರ ನಿಧಾನವಾಗಿ ಬೆಳೆದ ಚೈತ್ಯ ಪುರುಷನಿಗಾಗಿ ತನ್ನ ಸ್ಥಾನವನ್ನು ತ್ಯಜಿಸಿ ಮರೆಯಾಗಲೇಬೇಕು.

ದೈವವು ಮನುಷ್ಯನಲ್ಲಿ ಚೈತ್ಯ ಪ್ರಭಾವದಲ್ಲಿ ಪ್ರಕಟವಾಗುವುದರಿಂದ ಅತಿಮಾನುಷತೆಯ ಬರುವಿಕೆಗೆ ತಯಾರಾಗುತ್ತದೆ.

ಅತಿಮಾನುಷ ಪುರುಷನು ಅಮರ, ಆದುದರಿಂದ ಅದರ ಮುಖಾಂತರ ಅಮರತ್ವವು ಭೂಮಿಯ ಮೇಲೆ ಪ್ರಕಟವಾಗುತ್ತದೆ. ಆದ್ದರಿಂದ ಸದ್ಯಕ್ಕೆ ಮುಖ್ಯವಾದ ಸಂಗತಿ ಏನೆಂದರೆ, ಚೈತ್ಯ ಪುರುಷನನ್ನು ಕಂಡುಕೊಳ್ಳುವುದು, ಅದರೊಂದಿಗೆ ಒಂದಾಗುವುದು ಮತ್ತು ಅದು ಅಹಮಿಕೆಯನ್ನು ಬದಲಿಸಲು ಅನುಮತಿಸುವುದು.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಫೆಬ್ರವರಿ 8, 1972**

ಅಹಮಿಕೆಯು ಒಂದು ಅಡಚಣೆ. ಅಹಮಿಕೆಯು ಮಾನವ ಕುಲವನ್ನು ನಿರ್ಮಿಸಲು ಅವಶ್ಯಕವಾಗಿತ್ತು. ಆದರೆ ಈಗ ನಾವು ಅತಿಮಾನುಷತೆಗಾಗಿ, ಒಂದು ಮೇಲಿನ – ಮಾನವತೆಗಾಗಿ ಮಾರ್ಗವನ್ನು ಸಿದ್ಧಪಡಿಸಿಕೊಳ್ಳುತ್ತಿದ್ದೇವೆ. ಅಹಮಿಕೆಯ ಕಾರ್ಯ ಈಗ ಮುಗಿದಿದೆ – ಅದು ತನ್ನ ಕಾರ್ಯವನ್ನು ಚೆನ್ನಾಗಿ ಮಾಡಿದೆ, ಈಗ ಅದು ಅದೃಶ್ಯವಾಗಬೇಕು. ಮನುಷ್ಯನಲ್ಲಿ ದೇವರ ಪ್ರತಿನಿಧಿಯಾದ ಚೈತ್ಯ ಪುರುಷನು ಹಾಗೆಯೇ ಮುಂದುವರೆಯುತ್ತಾ ಮುಂದಿನ ವಂಶಗಳಲ್ಲಿ ವರ್ಗಾಯಿಸಬೇಕು. ಆದ್ದರಿಂದ ನಾವು ನಮ್ಮ ಎಲ್ಲ ಅಸ್ತಿತ್ವವನ್ನು ಚೈತ್ಯನ ಸುತ್ತ ಒಟ್ಟುಗೂಡಿಸುವುದನ್ನು ಕಲಿತುಕೊಳ್ಳಲೇಬೇಕು. ಉನ್ನತ–ಮಾನವ ಕುಲಕ್ಕೆ ಸಾಗಬಯಸುವವರು ಅವರು ತಮ್ಮ ಅಹಮಿಕೆಯನ್ನು ತ್ಯಜಿಸಬೇಕು ಮತ್ತು ತಮ್ಮನ್ನು ತಾವು ಚೈತ್ಯ ಪುರುಷನ ಸುತ್ತ ಕೇಂದ್ರಿಕರಿಸಿಕೊಳ್ಳಬೇಕು.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಏಪ್ರಿಲ್ 13, 1972**

## ಪಶುಗಳು ಮತ್ತು ಚೈತ್ಯ

ಕೆಲವು ಸಲ ಒಂದು ಅತಿ ತೀಕ್ಷ್ಣವಾದ ಚೈತ್ಯನು ಪಶುಗಳಲ್ಲಿರುತ್ತಾನೆ. ಸ್ವಾಭಾವಿಕವಾಗಿ, ಒಂದು ಪ್ರಾಣಿಗಿಂತ ಒಂದು ಮಗುವಿನಲ್ಲಿ ಚೈತ್ಯ ಪುರುಷನು ಒಂದು ಸ್ವಲ್ಪ ಹೆಚ್ಚು ರೂಪಿತವಾಗಿದ್ದಾನೆ, ಒಂದು ಸ್ವಲ್ಪ ಹೆಚ್ಚು ಜಾಗೃತನಾಗಿದ್ದಾನೆ ಎಂದು ನಾನು ನಂಬಿದ್ದೇನೆ. ಆದರೆ, ನಾನು ಪ್ರಾಣಿಗಳೊಂದಿಗೆ ಬರೀ ತಿಳಿದುಕೊಳ್ಳುವುದಕ್ಕಾಗಿ ಮಾತ್ರ ಪ್ರಯೋಗ ಮಾಡಿದ್ದೇನೆ; ಆಡಂಬರವಿಲ್ಲದ, ಅತ್ಯಂತ ಸರಳವಾದ ಕೆಲವು ಸದ್ಗುಣಗಳನ್ನು ಪ್ರಾಣಿಗಳಲ್ಲಿ ನೋಡಿದ ನಾನು ಅವುಗಳನ್ನು ಮನುಷ್ಯರಲ್ಲಿ ವಿರಳವಾಗಿ ಕಂಡಿದ್ದೇನೆ ಎಂದು ನಿನಗೆ ಭರವಸೆ

ಕೊಡುತ್ತೇನೆ. ಉದಾಹರಣೆಗಾಗಿ, ಬೆಕ್ಕುಗಳಲ್ಲಿರುವಂತೆ: ನಾನು ಬೆಕ್ಕುಗಳ ಬಗ್ಗೆ ಬಹಳ ಅಧ್ಯಯನ ಮಾಡಿದ್ದೇನೆ; ಅವುಗಳನ್ನು ಚೆನ್ನಾಗಿ ತಿಳಿದುಕೊಂಡರೆ ಅವು ಅದ್ಭುತವಾದ ಜೀವಿಗಳು. ತಮ್ಮ ಕಂದಮ್ಮಗಳಿಗಾಗಿ ತಮ್ಮನ್ನು ಸಂಪೂರ್ಣವಾಗಿ ಸಮರ್ಪಣೆ ಮಾಡಿಕೊಂಡ ತಾಯಿ ಬೆಕ್ಕುಗಳನ್ನು ನಾನು ಕಂಡಿದ್ದೇನೆ – ಜನರು ಮಾತೃ ಸಹಜವಾದ ಪ್ರೇಮದ ಬಗ್ಗೆ ಅದು ಒಂದು ತಮ್ಮ ಪುಣ್ಯವೆಂಬಂತೆ ಮೆಚ್ಚುಗೆಯಿಂದ ಮಾತನಾಡುತ್ತಾರೆ. ಆದರೆ ನಾನು ನೋಡಿದಂತೆ, ತಾಯಿ ಬೆಕ್ಕುಗಳು ತೋರುವ ಪ್ರೇಮವು ಸಾಧಾರಣ ಮಾನವರಿಗಿಂತ ಮೇಲಾಗಿದೆ. ಮರಿ ಬೆಕ್ಕುಗಳು ತಮಗೆಷ್ಟು ಬೇಕಾಗಿದೆಯೋ ಅಷ್ಟನ್ನು ತೆಗೆದುಕೊಳ್ಳುವವರೆಗೆ ತಾಯಿ ಬೆಕ್ಕು ಎಂದಿಗೂ ಆಹಾರ ಮುಟ್ಟದಿರುವುದನ್ನು ನಾನು ಕಂಡಿದ್ದೇನೆ. ಮತ್ತೊಂದು ಬೆಕ್ಕು ಸುಮಾರು ಎಂಟು ದಿನಗಳವರೆಗೆ ತನ್ನ ಸ್ವಂತ ಬೇಕು–ಬೇಡಗಳನ್ನು ಇಡೇರಿಸಿಕೊಳ್ಳದೆ ತನ್ನ ಮರಿಗಳ ಪಕ್ಕದಲ್ಲೇ ಇದ್ದುದನ್ನು ಸಹ ನಾನು ನೋಡಿದ್ದೇನೆ. ತಾಯಿ ಬೆಕ್ಕು ತನ್ನ ಮರಿಗಳನ್ನು ಒಂಟಿಯಾಗಿ ಬಿಡಲು ಹೆದರುತ್ತಿತ್ತು. ಒಂದು ಗೋಡೆಯಿಂದ ಒಂದು ಕಿಟಕಿಗೆ ಹೇಗೆ ಜಿಗಿಯಬೇಕು ಎಂಬ ಕೌಶಲವನ್ನು ಒಂದು ತಾಯಿ ಬೆಕ್ಕು ತನ್ನ ಯುವ ಬೆಕ್ಕುಗಳಿಗೆ ಜಾಗರೂಕತೆಯಿಂದ, ಜಾಣತನದಿಂದ ಮತ್ತು ಎಷ್ಟೋ ಅವಿದ್ಯಾವಂತ ಹೆಣ್ಣು ಮಕ್ಕಳು ಹೊಂದಿಲ್ಲದ ಒಂದು ನೈಪುಣ್ಯತೆಯಿಂದ ಸುಮಾರು ಐವತ್ತು ಸಲ ಪುನರಾವರ್ತನೆ ಮಾಡಿತ್ತು. ಇದು ಈ ರೀತಿ ಯಾಕೆ? ಅಲ್ಲಿ ಮಾನಸಿಕ ಹಸ್ತಕ್ಷೇಪವಿಲ್ಲದಿರುವುದರಿಂದ, ಒಟ್ಟಾರೆಯಾಗಿ ಅದೊಂದು ಸ್ವಾಭಾವಿಕ ಪ್ರವೃತ್ತಿಯಾಗಿತ್ತು. ಆದರೆ, ಪ್ರವೃತ್ತಿ ಎಂದರೇನು? ಅದು ವಂಶದ ತಳಿಯಲ್ಲಿರುವ ದೈವೀ ಉಪಸ್ಥಿತಿ, ಮತ್ತು ಅದು ಪ್ರಾಣಿಗಳ ಚೈತ್ಯ; ವೈಯಕ್ತಿಕವಲ್ಲದ ಒಂದು ಸಾಮೂಹಿಕ ಚೇತನ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/27–28**

## ಸಸ್ಯ ಜಗತ್ತಿನಲ್ಲಿ ಚೈತ್ಯನ ಅಸ್ತಿತ್ವ

ನಾನು, ಚೈತ್ಯನ ಅಸ್ತಿತ್ವದ ಮತ್ತು ಕಂಪನದ ಪ್ರಥಮ ಆಧಾರವನ್ನು (ಮೂಲವನ್ನು) ಸಸ್ಯ ಜೀವನದಲ್ಲಿ ಗಮನಿಸಿದ್ದೇನೆ. ಮತ್ತು ಸತ್ಯವಾಗಿಯೂ ಈ ಅರಳುವಿಕೆಯು ಒಂದು ಪುಷ್ಪವನ್ನು ಚೈತ್ಯನ ಅಸ್ತಿತ್ವದ ಪ್ರಥಮ ಅಭಿವ್ಯಕ್ತಿ ಎಂದು

ಹೇಳಬಹುದು. ಮನುಷ್ಯನಲ್ಲಿ ಮಾತ್ರ ಚೈತ್ಯನು ವ್ಯಕ್ತಿಗತನಾಗಿದ್ದಾನೆ, ಆದರೆ ಅದು ಅವನಿಗಿಂತ ಮೊದಲು ಅಲ್ಲಿತ್ತು; ಆದರೆ ಅದು ಮನುಷ್ಯನಲ್ಲಿರುವ ವೈಯಕ್ತೀಕರಣದಂತೆ ಅಲ್ಲ, ಅದು ಹೆಚ್ಚು ಅಸ್ಥಿರ (ಅನಿಶ್ಚಿತ): ಅದು ವೈಯಕ್ತೀಕತೆಗಿಂತ ಹೆಚ್ಚು ಬಲವಾಗಿ, ಪ್ರಜ್ಞೆಯಾಗಿ ಅಭಿವ್ಯಕ್ತವಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/166–67 – ಶ್ರೀಮಾತೆ**

**ನಿರ್ವಾಣ ಮತ್ತು ಚೈತ್ಯ ಪುರುಷ**

ಚೇತನದ ಹಿಂದುಗಡೆ, ಚೈತ್ಯದ ಹಿಂದುಗಡೆ, ಮನಸ್ಸಿನ ಹಿಂದುಗಡೆ ನಿರ್ವಾಣವಿದೆ; ನಿರ್ವಾಣವು ಪ್ರತಿ ಹಂತದಲ್ಲಿದೆ, ಭೌತಿಕದ ಹಿಂದೆಯೂ – ಅದರ ಸಾವು. ಯಾರು ಹಿಂದೆ ಸರಿಯುತ್ತಾರೊ, ಯಾರು ನಿರ್ವಾಣವನ್ನು ಹೊಂದಲು ಪ್ರಯತ್ನಿಸುತ್ತಾರೊ ಅವರು ಎಂದಿಗೂ ಚೈತ್ಯ ಸ್ಥಿತಿಗೆ ಹೋಗುವುದಿಲ್ಲ – ಮೂಲತಃ ಚೈತ್ಯವು ದೈವದ ಅಭಿವ್ಯಕ್ತಿಯೊಂದಿಗೆ ಸಂಬಂಧ ಹೊಂದಿದೆ, ದೈವದ ಮಧ್ಯ ಪ್ರವೇಶಿಸುವುದಕ್ಕಲ್ಲ, ನಿರ್ವಾಣಕ್ಕಲ್ಲ.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಆಗಸ್ಟ್ 13, 1963**

"ಮನುಷ್ಯನ ವ್ಯಾಪ್ತಿಯಲ್ಲಿರುವ ದೈವ" ಎನ್ನುವುದನ್ನು ಚೈತ್ಯ ಪುರುಷ ಎಂದು ಕರೆಯಬಹುದು.

*

ಚೈತ್ಯ ಪುರುಷನು ಕೆಲವು ಗುಣಗಳನ್ನು, ಕೆಲವು ಶಕ್ತಿಗಳನ್ನು ಮತ್ತು ಇತ್ಯಾದಿಗಳನ್ನು ಅಭಿವೃದ್ಧಿಪಡಿಸುವ ಒಂದು ನಿರ್ದಿಷ್ಟ ಅಸ್ತಿತ್ವವನ್ನು ಅನುಸರಿಸುತ್ತದೆ, ಆದರೆ ಚೈತ್ಯನು ಯಾವಾಗಲೂ ತನ್ನಲ್ಲಿ ಏನು ಅಭಾವವಿದೆಯೋ ಅದನ್ನು ನೋಡುತ್ತದೆ ಮತ್ತು ಭವಿಷ್ಯದ ಜೀವನದಲ್ಲಿ ಅದು ಒಂದು ವಿರುದ್ಧವಾದ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳಬಹುದು, ಹೇಳಬೇಕೆಂದರೆ, ಪೂರಕ ಅನುಭವಗಳನ್ನು ಹೊಂದುವ ಸಲುವಾಗಿ ಈ ಅನುಭವದ ನಿರಾಕರಣೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/97, 151 – ಶ್ರೀಮಾತೆ**

## ದಿವ್ಯ ಮಾತೆಯ ಮಗು

ಶ್ರೀಮಾತೆಯು ಚಿತ್‌ಶಕ್ತಿ ಅಥವಾ ಭಗವತ್ ಚೇತನ–ಜೀವಾತ್ಮನು ಅದರ ಒಂದು ಅಂಶ, ಚೈತ್ಯನು ಅಥವಾ ಆತ್ಮನು ಅದರ ಒಂದು ವಿದ್ಯುತ್ಕಣ. ಅಹಂ ಎನ್ನುವುದು ಚೈತ್ಯನ ಅಥವಾ ಜೀವಾತ್ಮನ ವಿಕೃತ ಪ್ರತಿಬಿಂಬ.

*

ದೈವೀ ಅಭಿವ್ಯಕ್ತಿಯ ಒಂದು ಸಾಧನವಾಗಿರಲು ಮತ್ತು ಇಲ್ಲಿ (ಪೃಥ್ವಿಯ ಮೇಲೆ) ಕಾರ್ಯ ಮಾಡಲು ತನ್ನ ಸತ್ಯದ ಅಸ್ತಿತ್ವವನ್ನು ಸೇರುವ ಸಲುವಾಗಿ ಅಜ್ಞಾನದ ಅನುಭವಗಳ ಮುಖಾಂತರ ಹಾದುಹೋಗುವ ಪೃಥ್ವಿಯ ಮೇಲಿನ ಆತ್ಮವು ಆ ದಿವ್ಯ ಮಾತೆಯ ಒಂದು ಅಂಶ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/61**

ಒಬ್ಬನ (x–ಎಂದು ಕರೆಯೋಣ) ಭೌತಿಕ ದೇಹದ ಜನ್ಮ ಕಾರಣವಾದ ಒಬ್ಬರು (ತಾಯಿ) ನಿಸ್ಸಂಶವಾಗಿಯೂ ಅವಳ ಜೀವಿತಾವಧಿಯಲ್ಲಿ ಅವನ (x–ನ) ಪ್ರಾಪಂಚಿಕ ತಾಯಿ. ಆದರೆ 'ಶ್ರೀಮಾತೆಯವರ' ಮತ್ತು x–ನ ಮಧ್ಯೆ (ಮತ್ತು ಶ್ರೀಮಾತೆಯವರ ಹಾಗೂ ಅವರನ್ನು ಆರಾಧಿಸುವ ಎಲ್ಲರ ಮಧ್ಯದಲ್ಲಿ) ಇರುವಂಥ ಒಂದು ಸಂಬಂಧವು ಚೈತ್ಯ ಮತ್ತು ಆಧ್ಯಾತ್ಮಿಕ ಮಾತೃತ್ವದ್ದು. ಭೌತಿಕ ತಾಯಿ ಹಾಗೂ ಅವಳ ಮಗುವಿನ ನಡುವಿನ ಸಂಬಂಧಕ್ಕಿಂತ ಈ ಸಂಬಂಧ ಬಹಳ ಉತ್ಕಟವಾದದ್ದು: ಮಾನವತೆಯ ಮಾತೃತ್ವ ನೀಡುವುದೆಲ್ಲವನ್ನು ಅದು ನೀಡುತ್ತದೆ, ಆದರೆ ಅತಿ ಹೆಚ್ಚಿನ ರೀತಿಯಲ್ಲಿ ಮತ್ತು ಅದು ತನ್ನಲ್ಲಿ ಅಳೆಯಲಾಗದಷ್ಟನ್ನು ಅಡಗಿಸಿಕೊಳ್ಳುತ್ತದೆ. ಅದು ಉನ್ನತವಾದುದರಿಂದ ಮತ್ತು ಪೂರ್ಣವಾದುದರಿಂದ ಸಂಪೂರ್ಣವಾಗಿ ಭೌತಿಕ ಸಂಬಂಧದ ರೂಪವನ್ನು ತೆಗೆದುಕೊಳ್ಳಬಹುದು ಮತ್ತು ಅದನ್ನು ಆಂತರಿಕ ಹಾಗೂ ಬಾಹ್ಯ ಜೀವನ ಎರಡರಲ್ಲೂ ಇರಿಸಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/108 – ಶ್ರೀ ಅರವಿಂದರು**

# ಜನ್ಮದಿಂದ ಜನ್ಮಕ್ಕೆ ಯಾತ್ರಿಕ

## ಚೈತ್ಯ ಪುರುಷ ಮತ್ತು ಪುನರ್‌ಜನ್ಮ

– ಅನುವಾದ: ನಾಗಜ್ಯೋತಿ ಯಲಿವಾರ

ಸಾವಿನ ಸಮಯದಲ್ಲಿ ಚೈತ್ಯ ಪುರುಷನ ಆಯ್ಕೆಯು ಮುಂದಿನ ವ್ಯಕ್ತಿತ್ವದ ರಚನೆಯನ್ನು ಮಾಡುವುದಿಲ್ಲ, ಅದು ಅದನ್ನು ನಿರ್ಧರಿಸುತ್ತದೆ. ಅದು ಚೈತ್ಯ ಪುರುಷನ ಜಗತ್ತಿನ ಪ್ರವೇಶಿಸಿದಾಗ, ಅದು ತನ್ನ ಅನುಭವದ ಮೂಲತತ್ವವನ್ನು ಒಟ್ಟುಗೂಡಿಸಲು ಪ್ರಾರಂಭಿಸುತ್ತದೆ ಮತ್ತು ಆ ಮೂಲಕ ಈಗಾಗಲೇ ಮಾಡಿದ ದೃಢೀಕರಣಕ್ಕೆ ಅನುಗುಣವಾಗಿ ಭವಿಷ್ಯದ ಚೈತ್ಯ ಪುರುಷನ ವ್ಯಕ್ತಿತ್ವವನ್ನು ರೂಪಿಸುತ್ತದೆ. ಈ ಸಮೀಕರಿಸುವಿಕೆಯು ಮುಗಿದ ನಂತರ, ಅದು ಹೊಸ ಜನ್ಮಕ್ಕೆ ಸಿದ್ಧವಾಗುತ್ತದೆ – ಆದರೆ ಕಡಿಮೆ ವಿಕಾಸ ಹೊಂದಿದ ಜೀವಿಗಳು ಇಡೀ ಕೆಲಸವನ್ನು ತಮಗಾಗಿ ಮಾಡುವುದಿಲ್ಲ, ಆ ಕೆಲಸವನ್ನು ಉನ್ನತ ಜಗತ್ತಿನ ಜೀವಿಗಳು ಮತ್ತು ಶಕ್ತಿಗಳು ಮಾಡುತ್ತವೆ. ಹಾಗೂ ಅದು ಜನ್ಮ ತಾಳಿದಾಗ ತಾವು ಯಾವ ಕೆಲಸಕ್ಕಾಗಿ ಬಂದಿದ್ದವೋ ಆ ಕೆಲಸಕ್ಕೆ ಭೌತಿಕ ಜಗತ್ತಿನ ಶಕ್ತಿಗಳು ತಿದ್ದುಪಡಿಸುವುದಿಲ್ಲ ಎಂಬುದು ಖಾತರಿವೇನಿಲ್ಲ – ಈ ಉದ್ದೇಶಕ್ಕೆ ಅವುಗಳ ಹೊಸ ಉಪಕರಣಗಳು ಬಲಿಶಾಲಿಯಾಗಿರಲಿಕ್ಕಿಲ್ಲ; ಏಕೆಂದರೆ ಇಲ್ಲಿ ತನ್ನ ಮತ್ತು ವಿಶ್ವಾತ್ಮಕ ಶಕ್ತಿಗಳ ನಡುವೆ ಪರಸ್ಪರ ಪರಿಣಾಮ ಉಂಟಾಗುತ್ತೆ. ಅಲ್ಲಿ ಹತಾಶೆ, ತಿರುವು, ಅಪೂರ್ಣ ಕಾರ್ಯ ಅನೇಕ ಸಂಗತಿಗಳು ಸಂಭವಿಸಬಹುದು. ಆದಾಗ್ಯೂ ಅಭಿವೃದ್ಧಿ ಹೊಂದಿದ ಚೈತ್ಯ ಪುರುಷನು ಈ ಸ್ಥಿತ್ಯಂತರದಲ್ಲಿ ಹೆಚ್ಚು ಜಾಗೃತವಾಗಿದ್ದಾನೆ ಮತ್ತು ಅದರಲ್ಲಿ ಹೆಚ್ಚಿನದರಲ್ಲಿ ಸ್ವತಃ ಕೆಲಸ ಮಾಡುತ್ತಾನೆ. ಸಮಯವು ಚೈತ್ಯ ಪುರುಷನ ಎಲ್ಲವೂ ಯಾಂತ್ರಿಕ ಸೂತ್ರ ನೇಮದಂತಿರುವುದಿಲ್ಲ. ಇದು ಸಂಕೀರ್ಣ ಶಕ್ತಿಗಳ ಪರಿಣಾಮವಾಗಿದೆ, ಅದು ಅಭಿವೃದ್ಧಿಯ(ವಿಕಾಸದ) ಮೇಲೆ ಮತ್ತು ಅದರ ನಿರ್ದಿಷ್ಟ ಲಯದ ಮೇಲೆ ಅವಲಂಬಿಸಿರುತ್ತದೆ. ಕೆಲವರಿಗೆ ಪ್ರಾಯೋಗಿಕವಾಗಿ ತಕ್ಷಣದ ಪುನರ್ಜನ್ಮವಿದೆ, ಇತರರಿಗೆ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಕೆಲವರಿಗೆ ಇದು ಶತಮಾನಗಳನ್ನು ತೆಗೆದುಕೊಳ್ಳಬಹುದು; ಆದರೆ ಇಲ್ಲಿ ಮತ್ತೊಮ್ಮೆ ಚೈತ್ಯ ಪುರುಷನು ಸಾಕಷ್ಟು ಅಭಿವೃದ್ಧಿ ಹೊಂದಿದ ನಂತರ, ತನ್ನದೇ ಆದ ಲಯ ಮತ್ತು ತನ್ನದೇ ಆದ ಮಧ್ಯಂತರಗಳನ್ನು ಆಯ್ಕೆ ಮಾಡಲು ಇದು ಸ್ವತಂತ್ರವಾಗಿದೆ.

*

## ಪುನರ್ಜನ್ಮ ಮತ್ತು ಕರ್ಮ

ಸಾಮಾನ್ಯ ಸಿದ್ಧಾಂತಗಳು ತುಂಬಾ ಯಾಂತ್ರಿಕವಾಗಿದೆ. ಪುಣ್ಯ ಮತ್ತು ಪಾಪ ಹಾಗೂ ಮುಂದಿನ ಜೀವನದಲ್ಲಿ ಅವುಗಳ ಫಲಿತಾಂಶಗಳ ಕಲ್ಪನೆಯಲ್ಲೂ ಅದು ಹೀಗೆಯೇ ಇದೆ. ಈ ಜನ್ಮದ ಫಲದಲ್ಲಿ ಹಿಂದಿನ ಜನ್ಮದ ಶಕ್ತಿಗಳ ಪ್ರಭಾವವು ಇದ್ದೇ ಇರುತ್ತದೆ. ಆದರೆ ಆ ಕ್ಷುಲ್ಲಕ ತತ್ವದ ರೀತಿಯಲ್ಲಿ ಈ ಜೀವನದಲ್ಲಿ ಒಬ್ಬ ಒಳ್ಳೆಯ ಮನುಷ್ಯನ ನೋವುಗಳು ಸಾಂಪ್ರದಾಯಿಕ ಸಿದ್ಧಾಂತದ ಪ್ರಕಾರ ಅವನು ತನ್ನ ಹಿಂದಿನ ಜೀವನದಲ್ಲಿ ಬಹಳ ದೊಡ್ಡ ಖಳನಾಯಕನಾಗಿದ್ದಾನೆಂಬುದಕ್ಕೆ ಒಂದು ಪುರಾವೆಯಾಗಿದೆ, ಕೆಟ್ಟ ಮನುಷ್ಯನ ಏಳಿಗೆ ತನ್ನ ಹಿಂದಿನ ಜನ್ಮದಲ್ಲಿ ಸದ್ಗುಣಗಳ ಬೀಜವನ್ನು ಬಿತ್ತಿ ಈ ಜನ್ಮದಲ್ಲಿ ಅದರ ಉತ್ತಮ ಫಲವನ್ನು ಪಡೆದಿರುವುದೇ ಸಾಕ್ಷಿ ಆದರೆ, ಇಷ್ಟು ಖಚಿತವಾಗಿರುವುದು ಅಸಾಧ್ಯ. ಮರುಜನ್ಮದ ಉದ್ದೇಶವು ಅನುಭವದಿಂದ ಬೆಳವಣಿಗೆಯಾಗುವುದು, ಹಿಂದಿನ ಕಾರ್ಯಗಳಿಗೆ ಯಾವುದೇ ಪ್ರತಿಕ್ರಿಯೆಗಳು ಬಂದರೂ ಕಲಿಯಲು ಮತ್ತು ಬೆಳೆಯುವುದಕ್ಕಾಗಿಯೇ ಹೊರತು, ವರ್ಗದ ಉತ್ತಮ ಹುಡುಗರಿಗೆ ದಂಡನೆಗಳಂತೆ ನೋಡಬಾರದು. ಒಳ್ಳೆಯದು ಮತ್ತು ಕೆಟ್ಟದ್ದಕ್ಕಾಗಿ ನಿಜವಾದ ಮಂಜೂರಾತಿಯು ಒಳ್ಳೆಯದಕ್ಕೆ ಅದೃಷ್ಟ ಮತ್ತು ಕೆಟ್ಟದ್ದಕ್ಕೆ ದುರದೃಷ್ಟವಲ್ಲ. ಆದರೆ ಒಳ್ಳೆಯದು ನಮ್ಮನ್ನು ಉನ್ನತ ಸ್ವಭಾವದತ್ತ ಕೊಂಡೊಯ್ಯುತ್ತದೆ, ಅದು ಅಂತಿಮವಾಗಿ ದುಃಖಕ್ಕಿಂತ ಮೇಲಕ್ಕೆತ್ತಲ್ಪಡುತ್ತದೆ ಮತ್ತು ಕೆಟ್ಟದ್ದು ಯಾವಾಗಲೂ ದುಃಖ ಮತ್ತು ದುಷ್ಟತನದ ಚಕ್ರದೊಳಗೆ ಬಂಧಿಸುವ ಕೆಳಮಟ್ಟದ ಸ್ವಭಾವದ ಕಡೆಗೆ ನಮ್ಮನ್ನು ಎಳೆಯುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/532–33 – ಶ್ರೀ ಅರವಿಂದರು**

## ಕರ್ಮ ಮತ್ತು ಅದರ ನಾಶ

ಇದು ಹೇಗೆ ಕಾರ್ಯ ನಿರ್ವಹಿಸುತ್ತದೆ; ಚೈತ್ಯ ಪುರುಷನು ಒಂದು ಜೀವನದಿಂದ ಇನ್ನೊಂದಕ್ಕೆ ಹಾದುಹೋಗುತ್ತದೆ. ಆದರೆ ಚೈತ್ಯ ಪುರುಷನು ಮರುಹುಟ್ಟುವುದು, ಕೆಲವು ಕಾರ್ಯಗಳ ಮಾಡಲು, ಒಂದು ನಿರ್ದಿಷ್ಟ ಅನುಭವದ ಮೂಲಕ ಹಾದು ಹೋಗಲು, ಒಂದು ನಿರ್ದಿಷ್ಟ ವಿಷಯವನ್ನು ಕಲಿಯಲು, ಒಂದು ನಿರ್ದಿಷ್ಟ ಬೆಳವಣಿಗೆಗಾಗಿ ನಿರ್ದಿಷ್ಟ ಅನುಭವಗಳನ್ನು

ಅನುಭವಿಸುತ್ತಾನೆ. ಆದ್ದರಿಂದ ಈ ಜೀವನದಲ್ಲಿ ಅನುಭವಿಸುತ್ತಾನೆ. ಆದ್ದರಿಂದ ಈ ಜೀವನದಲ್ಲಿ ಎಲ್ಲಿ ಅನುಭವವನ್ನು ಪಡೆಯಬೇಕಾಗಿದೆಯೋ, ಅಲ್ಲಿ ಅದು ತನ್ನ ಸರಿಯಾದ ಕಾರ್ಯಕ್ಷೇತ್ರಕ್ಕೆ ಬರಲಿಕ್ಕಿಲ್ಲ (ಒಂದಕ್ಕಿಂತ ಹೆಚ್ಚು ಕಾರಣಗಳು ಇರಬಹುದು), ಕೆಲವು ಬದಲಾವಣೆಗಳಾಗಬಹುದು, ವ್ಯತಿರಿಕ್ತ ಸನ್ನಿವೇಶಗಳು ಅವತಾರವು ತನ್ನ ಕಾರ್ಯವನ್ನು ಅಪೂರ್ಣಗೊಳಿಸಿ ಆತ್ಮವು ನಿರ್ಗಮಿಸುತ್ತದೆ. ಆದರೆ ಇತರ ಸಂದರ್ಭಗಳಲ್ಲಿ, ಆತ್ಮವು ತಾನೇನು ಮಾಡಲು ಬಂದಿದೆಯೋ ಅದಕ್ಕೆ ಸಂಪೂರ್ಣ ಪ್ರತಿಕೂಲ ವಾತಾವರಣದಲ್ಲಿ ಸಿಕ್ಕಿ ದುರದೃಷ್ಟಕರ ಸನ್ನಿವೇಶಗಳಿಂದ ಸಂಪೂರ್ಣ ವಿಫಲತೆಯಿಂದ ನಿರ್ಗಮಿಸುತ್ತದೆ. ಇದು ವಸ್ತುನಿಷ್ಠ ದೃಷ್ಟಿಕೋನದಿಂದ ದುರದೃಷ್ಟಕರ ಮಾತ್ರವಲ್ಲದೆ ತನ್ನದೇ ಆದ ಅಭಿವೃದ್ಧಿಗೆ ಕೂಡ ದುರದೃಷ್ಟಕರವಾಗಿದೆ ಮತ್ತು ನಂತರ ಈ ಪರಿಣಾಮದಿಂದಾಗಿ ಅದು ಅನುಭವವನ್ನು ಮತ್ತೆ ಪ್ರಾರಂಭಿಸುವ ಅವಶ್ಯಕತೆಯನ್ನು ಮತ್ತು ಹೆಚ್ಚು ಕಷ್ಟಕರ ಪರಿಸ್ಥಿತಿಗಳಲ್ಲಿ ಸೃಷ್ಟಿಸುತ್ತದೆ. ಮತ್ತು ಒಂದು ವೇಳೆ ಇದು ಸಂಭವಿಸಬಹುದು – ಎರಡನೆಯ ಪ್ರಯತ್ನಗಳು ವಿಫಲವಾದರೆ, ಪರಿಸ್ಥಿತಿಗಳು ಆತ್ಮವು ಬಯಸುತ್ತಿರುವ ಅನುಭವವನ್ನು ಇನ್ನಷ್ಟು ಕಷ್ಟಕರವಾಗಿಸಿದರೆ. ಉದಾಹರಣೆಗೆ, ಒಬ್ಬರು ಸಮರ್ಪಕ ಇಚ್ಛಾಶಕ್ತಿ ಅಥವಾ ಆಲೋಚನೆಯಲ್ಲಿ ಸ್ವಲ್ಪ ಅಸ್ಪಷ್ಟತೆಯನ್ನು ಹೊಂದಿರುವ ದೇಹದಲ್ಲಿದ್ದರೆ, ಅಥವಾ ಅಹಂಕಾರವು ಸಹ ತುಂಬಾ ಗಟ್ಟಿಯಾಗಿದ್ದರೆ, ಮತ್ತು ಅದು ಆತ್ಮಹತ್ಯೆಯಲ್ಲಿ ಕೊನೆಗೊಳ್ಳುತ್ತದೆ. ಅದು ಭಯಂಕರವಾಗಿರುತ್ತದೆ. ನಾನು ಇದನ್ನು ಹಲವು ಬಾರಿ ನೋಡಿದ್ದೇನೆ, ಇದು ಭಯಾನಕ ಕರ್ಮವನ್ನು ಸೃಷ್ಟಿಸುತ್ತದೆ. ಹಾಗೂ ಅದು ಭಯಾನಕ ಕರ್ಮವು ಪುನರಾವರ್ತನೆಯಾಗುತ್ತಿರುತ್ತದೆ, ಮತ್ತು ಪ್ರತೀ ಬಾರಿಯೂ ಪರಿಸ್ಥಿತಿಗಳು ಹೆಚ್ಚು ಕಷ್ಟಕರವಾಗುತ್ತವೆ, ಪ್ರತೀ ಬಾರಿಯೂ ಇನ್ನೂ ಹೆಚ್ಚಿನ ಪ್ರಯತ್ನದ ಅಗತ್ಯವಿರುತ್ತದೆ. ಮತ್ತು ಇದನ್ನು ತಿಳಿದಿರುವ ಜನರು, 'ನೀವು ಹೊರಬರಲು ಸಾಧ್ಯವಿಲ್ಲ' ಎಂದು ಹೇಳುತ್ತಾರೆ. ವಾಸ್ತವವಾಗಿ ಈ ರೀತಿಯ ತಪ್ಪಿಸಿಕೊಳ್ಳುವ ಬಯಕೆಯೇ ಇದನ್ನು ಹೆಚ್ಚು ಮೂರ್ಖ ವಿಷಯಗಳು ತಳ್ಳುತ್ತದೆ. ಇದರಿಂದಾಗಿ ಇನ್ನೂ ಹೆಚ್ಚಿನ ತೊಂದರೆಗಳು ಉಂಟಾಗುತ್ತವೆ. ಕೆಲ ಸಂದರ್ಭ ಮತ್ತು ಪರಿಸ್ಥಿತಿಗಳಲ್ಲಿ, ನಿಮಗೆ ಸಹಾಯ ಮಾಡಲು ಯಾರೂ ಇಲ್ಲದಿದ್ದಾಗ, ಮತ್ತು ನಂತರ ಪರಿಸ್ಥಿತಿಯು ಭಯಾನಕ ಹಾಗೂ ಅಸಹ್ಯಕರವಾಗುತ್ತವೆ. ಆದರೆ ಆತ್ಮವು ಒಂದು.

## ಪುನರ್ಜನ್ಮ, ಕಲಿಕೆ ಮತ್ತು ಬೆಳವಣಿಗೆ

– ಅನುವಾದ: ಡಾ॥ ಬಲಭೀಮ ಭೀಡ, ರಾಯಚೂರು

ಅಂತರಾತ್ಮವು ನಿರ್ದಿಷ್ಟವಾದ ಉದ್ದೇಶದಿಂದ, ಅಂದರೆ ಕೆಲ ವಿಶಿಷ್ಟ ಅನುಭವಗಳ ಮೂಲಕ ಕಲಿಯುವ ಹಾಗೂ ಬೆಳೆಯುವ ಉದ್ದೇಶದಿಂದ ಜನ್ಮ ತಾಳುತ್ತದೆ. ತನ್ನ ಕೆಲಸವನ್ನು ಮುಗಿಸುವ ಮೊದಲೇ ನೀವು ಬಿಟ್ಟುಬಿಟ್ಟರೆ ಪುನಃ ಅದೇ ಕೆಲಸವನ್ನು ಮುಂದುವರಿಸಲೇಬೇಕಾದ ಅನಿವಾರ್ಯತೆಯಿಂದ, ಹೆಚ್ಚು ಕಠಿಣ ಪರಿಸ್ಥಿತಿಗಳಲ್ಲಿಯಾದರೂ ಸರಿಮಾಡಲೇಬೇಕಾದ ಅನಿವಾರ್ಯತೆಯಿಂದ ಜನ್ಮ ತಾಳುತ್ತದೆ. ಈ ಜನ್ಮದಲ್ಲಿ ಮಾಡದೇ ತಪ್ಪಿಸಿಕೊಂಡಿರುವುದನ್ನು, ಅರ್ಧಮರ್ಧ ಉಳಿಸಿರುವುದನ್ನು, ಮುಂದಿನ ಯಾವುದಾದರೂ ಜನ್ಮದಲ್ಲಿ ಮಾಡಲೇಬೇಕಾಗಿ ಬರುತ್ತದೆ. ಮತ್ತು ಅದು ಹೆಚ್ಚು ಕಷ್ಟಕರವಾಗಿರುತ್ತದೆ. ನೀವೇನೋ ಬೇಕೆಂದೇ ಮಾಡದೇ ಬಿಡಲಿಲ್ಲ, ಜೀವನದಲ್ಲಿ ಅನೇಕ ಸಂಕಷ್ಟಗಳು ಒದಗಿ ಬಂದವು, ಮಾಡುವುದು ಸಾಧ್ಯವಾಗಲಿಲ್ಲ ಅನ್ನಿ – ಇದನ್ನು ಸಾಮಾನ್ಯವಾಗಿ ನಾವು ಒಂದು ಪರೀಕ್ಷೆ ಎಂದು ಹೇಳುತ್ತೇವೆ – ಆಯಿತು, ನೀವು ಆ ಪರೀಕ್ಷೆಯನ್ನು ಈಗ ಪಾಸು ಮಾಡಲಿಲ್ಲ, ಮುಖ ತಿರುವಿದಿರಿ, ಸರಿ, ಆದರೆ ಅದನ್ನು ಪೂರ್ಣತಃ ಬಿಟ್ಟು ಬಿಡಲಾರಿರಿ. ಪುನಃ ಬಂದು ಪಾಸು ಮಾಡಲೇಬೇಕು. ಮೊದಲಿಗಿಂತ ಹೆಚ್ಚು ತ್ರಾಸದಾಯಕವಾದರೂ ಮಾಡಲೇಬೇಕಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/23**

ಅಂತರಾತ್ಮಿಕ ಸಂಕಲ್ಪ ಮತ್ತು ಅಂತರಾತ್ಮಿಕ ಬೆಳವಣಿಗೆಗಳು ನಮ್ಮ ಸಾಮಾನ್ಯ ತಿಳುವಳಿಕೆಯ ಪರಿಕಲ್ಪನೆಗಳಿಗಿಂತ ತೀರ ಭಿನ್ನವಾಗಿರುತ್ತವೆ. ಅಂದರೆ ಜನರ ಸಾಮಾನ್ಯ ಕಲ್ಪನೆಯಾದ ಪಾಪ–ಪುಣ್ಯ, ಶಿಕ್ಷೆ–ಬಹುಮಾನ ಮುಂತಾದವುಗಳಿಗಿಂತ ಅವು ತೀರ ಬೇರೆಯಾಗಿರುತ್ತವೆ. ಧರ್ಮಗಳು ಮತಗಳು ಏನೇನೋ ಕಥೆಗಳನ್ನು ಹೇಳುವುದುಂಟು, ಅವೆಲ್ಲ ವಾಸ್ತವವಾಗಿ ಕಾಣದ ಜಗತ್ತಿಗೆ ಕಾಣುವ ಜಗತ್ತಿನ ಮಾನವೀಯ ನಿಯಮ ಹಾಗೂ ತರ್ಕವನ್ನು ಹಚ್ಚಿ ಹೇಳುವ ಪ್ರಯತ್ನ ಅಷ್ಟೇ. ಅದು ಮೂಢತನದ ಪ್ರಯತ್ನ. ವಾಸ್ತವವಾಗಿ ಅಂಥ ನಿಯಮಗಳು ಇಲ್ಲ. ಮಾನವರು ಅರ್ಥೈಸಿಕೊಳ್ಳುವ ರೀತಿಯಲ್ಲಿ ಶಿಕ್ಷೆ ಬಹುಮಾನಗಳಿರುವುದಿಲ್ಲ. ಆಂತರಿಕ ಸತ್ಯಗಳಿಗೆ ಇಂಥ ಮಾನುಷ ಸಂಬಂಧಿ

ತಾರ್ಕಿಕ ನಿಯಮಗಳು ಅನ್ವಯಿಸುವುದಿಲ್ಲ. ಆದ್ದರಿಂದ ನೀವು ಒಮ್ಮೆ ಆಧ್ಯಾತ್ಮಿಕ ಜಗತ್ತನ್ನು ಪ್ರವೇಶ ಮಾಡದಿರಿ. ಅಂದರೆ ಇದೆಲ್ಲ ಹುಚ್ಚುತನ ಎಂಬುದು ಅರಿವಾಗುವುದು. ಏಕೆಂದರೆ ವಸ್ತು ಸ್ಥಿತಿ ಹಾಗಿಲ್ಲ.

ಅನೇಕರು ನನಗೆ ಕೇಳುವುದುಂಟು "ಇಂಥ ಕಠಿಣ ಪರಿಸ್ಥಿತಿಗಳಲ್ಲಿ ನಾವೀಗ ಇದ್ದೇವೆ, ಇಂಥ ದುರ್ಭರ ದುರಾದೃಷ್ಟ ಬೆನ್ನು ಬಿದ್ದಿದೆ. ಹಿಂದಿನ ಜನ್ಮಗಳಲ್ಲಿ ನಾವು ಅದೇನು ಅಪರಾಧ ಮಾಡಿರುವೆವೋ ಯಾರಿಗೆ ಗೊತ್ತು. ಅಂಥದೇನಾದರೂ ತಿಳಿದು ಬರುವ ಸಾಧ್ಯತೆ ಇದೆಯೇ?" ನಾನು ಅಂಥವರಿಗೆ ಹೇಳುತ್ತೇನೆ, ಹೀಗೆ ಬಹಳ ಸಲ ಹೇಳಿದ್ದೇನೆ "ಎಂಥ ಕಠಿಣ ಪರಿಸ್ಥಿತಿಯೇ ಇರಲಿ ನಿಮಗೊಂದು ಕೃಪೆ, ಅನುಗ್ರಹ ಎಂದು ಅನಿಸುವುದಿಲ್ಲವೇ? ಅಂಥ ಕಷ್ಟಗಳಿಂದಾಗಿಯೇ ನಿಮಗೆ ಈ ತೆರನಾದ ಪ್ರಗತಿ ಸಾಧಿಸಲು ಸಾಧ್ಯವಾಗಿದೆ ಎಂದು ಅನಿಸುವುದಿಲ್ಲವೇ?" ಅನೇಕ ತಪ್ಪು ಕಲ್ಪನೆಗಳು ಪ್ರಚಾರದಲ್ಲಿ ಇವೆ. "ಓಹ್ ನನ್ನಿಂದ ಇದು ಸಾಧ್ಯವಿಲ್ಲ. ನನ್ನ ಶರೀರ ತುಂಬ ಕೆಟ್ಟ ಪರಿಸ್ಥಿತಿಯಲ್ಲಿದೆ. ಏನು ಪಾಪ ಮಾಡಿದ್ದೇನೋ ಯಾರಿಗೆ ಗೊತ್ತು. ಯಾವುದೋ ಜನ್ಮದಲ್ಲಿ ಮಾಡಿದ ಪಾಪ ಈಗ ಕಾಡುತ್ತದೆ ಎಂದು ತೋರುತ್ತದೆ" ಎಂದು ಕೋರುವ ಜನರೇ ಹೆಚ್ಚು. ಇದೆಲ್ಲ ಹುಚ್ಚುತನ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/215–16**

**ಅಂತರಾತ್ಮಿಕ ಸತ್ತೆಯ ಸಾಧ್ಯತೆಗಳು**

ಅಂತರಾತ್ಮಿಕ ಸತ್ತೆ ಅಥವಾ ಅಂತರಾತ್ಮ ಸಂಪೂರ್ಣ ಬೆಳೆದಾಗ, ತನ್ನ ಮುಂದಿನ ಬೆಳವಣಿಗೆಗಾಗಿ ಭೂಮಿಗೆ ಬರಲೇಬೇಕೆಂಬ ಅವಶ್ಯಕತೆ ಇಲ್ಲವಾದಾಗ ಆದರೆ ಮುಂದು ಎರಡು ಆಯ್ಕೆಗಳಿರುತ್ತವೆ. ತನ್ನ ಕೆಲಸ ಇನ್ನು ಮುಂದೆ ಈ ಭೂಮಿಯ ಮೇಲೆ ಇಲ್ಲ, ಬೇರೆಲ್ಲೋ ಇದೆ ಎಂಬುದು ನಿಚ್ಚಳವಾದಾಗ, ಅದಿಲ್ಲಿ ಜನ್ಮ ತಾಳದೇ ಕೇವಲ ಶುದ್ಧ ಅಂತರಾತ್ಮಿಕ ಪ್ರಜ್ಞೆಯಲ್ಲಿ ಹಾಗೆಯೇ ಇದ್ದುಬಿಡಬಹುದು. ಬೇಕೆನಿಸಿದಾಗ ಬರಬಹುದು, ಪೂರ್ಣತಃ ಪ್ರಜ್ಞೆಯನ್ನು ಇಟ್ಟುಕೊಂಡು ಬರಬಹುದು. ಕೆಲ ಸಂದರ್ಭಗಳಲ್ಲಿ ಕೆಲವರ ಅಂತರಾತ್ಮ ವಿಶ್ವ ವ್ಯವಸ್ಥೆಯ ಶಕ್ತಿಗಳ ಜೊತೆ ಒಂದಾಗಿ ಅಂದರೆ ಅಧಿಮಾನಸದ ದೇವತಾಶಕ್ತಿಗಳ ಜೊತೆ ಒಂದಾಗಿ ಇದ್ದುಬಿಡಬಹುದು. ಕೆಲವು ಈ ಭೂಮಿಯ

ವಾತಾವರಣದಲ್ಲಿಯೇ ನೆಲೆಸಿ ಅವಶ್ಯಕತೆ ಇರುವಾಗ ಶರೀರ ಧಾರಣ ಮಾಡಿಕೊಂಡು ಒಂದು ತಮ್ಮ ಕೆಲಸ ಪೂರೈಸಿ ಹೋಗಲುಬಹುದು. ಅಂದರೆ ಅಂತರಾತ್ಮ ಸಂಪೂರ್ಣ ರೂಪಗೊಂಡಾಗ ಹಾಗೂ ಸ್ವತಂತ್ರವಾದಾಗ – ಸಂಪೂರ್ಣವಾಗಿ ಬೆಳೆದು ರೂಪಗೊಂಡಾಗ ಅದು ಸ್ವತಂತ್ರವಾಗಿ ಬಿಡುತ್ತದೆ. ತನಗೆ ಬೇಕೆನಿಸಿದುದನ್ನು ಮಾಡಲು ಸಾಧ್ಯವಾಗುವುದು. ಇದೆಲ್ಲ ಸಾಪೇಕ್ಷವಾದುದು; ತನಗೆ ಬೇಕೆನಿಸಿದುದನ್ನು ಆಯ್ದುಕೊಳ್ಳುವ, ಮಾಡುವ ಸಾಧ್ಯತೆ ಇದ್ದು, ಅದರ ಆಶಯದ ಮೇಲೆ ಇದೆಲ್ಲ ನಿರ್ಭರವಾಗಿರುವುದು. ಆದ್ದರಿಂದ 'ಇದ್ದಮಿತ್ಥಂ', ಹೀಗೆಯೇ ಇರುತ್ತದೆ, ಹೀಗೆಯೇ ಇರಬೇಕು ಎಂದು ಯಾರಿಗೂ ಹೇಳಲು ಸಾಧ್ಯವಿಲ್ಲ. ತನಗೆ ಏನು ಬೇಕೋ ಅದನ್ನು ಮಾಡುವ ಸ್ವಾತಂತ್ರ್ಯ ಹಾಗೂ ಸಾಮರ್ಥ್ಯ ಎರಡೂ ಅದರಲ್ಲಿರುತ್ತವೆ. ಕೊನೆಯ ಗಳಿಗೆಯಲ್ಲಿ (ಹೀಗೆ ಎಷ್ಟೋ ಸಲ ಆಗಿರುವುದುಂಟು) ಮುಂದಿನ ಜನ್ಮ ಹೇಗಿರಬೇಕು, ಏನು ಮಾಡಬೇಕು ಎಂಬುದನ್ನು ಕೂಡ ಅದು ತಾನೇ ನಿರ್ಧರಿಸಿಕೊಳ್ಳುವ ಸಾಧ್ಯತೆ ಇದೆ. ಹಾಗೂ ಮುಕ್ತವಾಗಿ ಅದು ಹೇಳಿಬಿಡಲೂಬಹುದು. ಇದು ಸಾಮಾನ್ಯವಾಗಿ ಯಾವಾಗಲೂ, ಮತ್ತೆ ಮತ್ತೆ ಆಗುವಂಥದಲ್ಲ ಸಂಬಂಧವೇ ಇಲ್ಲ. ಪ್ರಾಣಿಕ ಸತ್ತೆಯು (ಮಾನಸೀಕರಣಗೊಂಡ ಪ್ರಾಣಿಕ ಸತ್ತೆಯು) ಮರಣಾನಂತರವೂ ನಾಶವಾಗದೇ ಮರುಜನ್ಮ ತಾಳಿದೆ. ಅಷ್ಟೇ. ಅಂತೆಯೇ ಹಿಂದಿನ ಜನ್ಮದ ನೆನಪುಗಳು ಹಸಿಯಾಗಿಯೇ ಉಳಿದಿವೆ. ಇದು ಬಹುಶಃ ವೈಜ್ಞಾನಿಕವಾಗಿ ಸಿದ್ಧವಾದ ಸಂಗತಿ. ಅವರೇನೂ ಆ ಮಗುವಿಗೆ ಹುಚ್ಚು ಹಿಡಿದಿದೆ, ಅದೆಲ್ಲ ಭ್ರಮೆ ಎಂದೇನೂ ಹೇಳುವುದಿಲ್ಲ. ಇಂಥ ಅನೇಕ ಸಂಗತಿಗಳು, ಉದಾಹರಣೆಗಳು ಇವೆ. ಅವೆಲ್ಲ ನನಗೀಗ ಪೂರ್ಣ ನೆನಪಿಲ್ಲ. ಇರಲಿ, ಅವರಿಗೆ ಬೇಕಾದ ವಿಷಯ ಇದೇ ತಾನೇ? ಅಥವಾ ಆತ್ಮ ಎಂಬುದು ಇದೆಯೋ? ಅದು ಶಾಶ್ವತವೇ? ಅವಿನಾಶಿಯೇ? ಮುಂತಾಗಿ ಕೇಳಬೇಕಾಗಿದೆಯೇ? ಏಕೆಂದರೆ ಬಹಳ ಜನರಿಗೆ ತಮಗೆ ಏನು ಕೇಳಬೇಕಾಗಿದೆ ಎಂಬುದೇ ತಿಳಿದಿರುವುದಿಲ್ಲ. ಏನೇನೋ, ಪರಸ್ಪರ ಸಂಬಂಧವಿಲ್ಲದ ಪ್ರಶ್ನೆ ಕೇಳುತ್ತಿರುತ್ತಾರೆ. ಅಂಥವರಿಗೆ "ಮೊದಲು ನೀವು ತಿಳಿದುಕೊಳ್ಳಬೇಕಾಗಿರುವ ವಿಷಯದ ಬಗ್ಗೆ ತುಸು ಅಧ್ಯಯನ ಮಾಡಿ" ಎಂದು ಹೇಳಬೇಕು.

ಫೋರ್ಡ್ ಅವರ ಬಗ್ಗೆ ಗೊತ್ತಿದೆಯೋ? ಶ್ರೀ ಅರವಿಂದರಿಗೆ ಹಾಗೂ ನನಗೆ "ತಾವೇನೋ ಕೇಳಬೇಕಾಗಿದೆ, ಮರಣಾನಂತರ ಏನಾಗುತ್ತದೆ" ಎಂಬುದನ್ನು

ತಿಳಿದುಕೊಳ್ಳಬೇಕಾಗಿದೆ, ಆದ್ದರಿಂದ ತಮ್ಮ ಪ್ರಶ್ನೆಗಳ ಸಮಾಧಾನಕ್ಕಾಗಿ ತಾವು ಇಲ್ಲಿಗೆ ಬರುತ್ತಿರುವುದಾಗಿ ತಿಳಿಸಿದರು. ತಮ್ಮ ಪ್ರಶ್ನೆಗಳಿಗೆ ಸಮಾಧಾನ ಹೇಳಿದವರಿಗೆ ತಮ್ಮೆಲ್ಲ ಆಸ್ತಿಯನ್ನು ಕೊಟ್ಟುಬಿಡುವುದಾಗಿಯೂ ಹೇಳಿದರು. "ಶ್ರೀ ಅರವಿಂದರು ನಿಮ್ಮ ಪ್ರಶ್ನೆಗೆ ಉತ್ತರ ನೀಡುತ್ತಾರೆ" ಎಂದು ಯಾರೋ ಅವರಿಗೆ ಹೇಳಿದ್ದರಂತೆ. ಅಂತೆಯೇ ಇಲ್ಲಿಗೆ ಬರಲು ತಯಾರಾಗಿ ಪತ್ರವನ್ನೂ ಸಹಿತ ಬರೆದಿದ್ದರು. ಆದರೆ ಅಷ್ಟರಲ್ಲಿ ಅವರೇ ತೀರಿಹೋದರು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/87 – ಶ್ರೀಮಾತೆ**

**ಆತ್ಮ ಹಾಗೂ ಮರಣದಾಚೆಗಿನ ಜೀವನದ ಸಾಕ್ಷ್ಯಾದಾರಗಳು**

ಸಾಕ್ಷ್ಯಾಧಾರ ಅವರಿಗೆ ಬೇಕಾಗಿರುವುದು ವೈಜ್ಞಾನಿಕವಾಗಿ ಸಿದ್ಧಪಡಿಸಿದ ಸಾಕ್ಷ್ಯಾಧಾರ ಆದರೆ, ಮೊದಲು ಅವರು ಮಾತನಾಡುತ್ತಿರುವುದು ಆತ್ಮದ ಬಗೆಗೆನೇ ಎಂಬುದನ್ನು ತಿಳಿದುಕೊಳ್ಳಬೇಕು. ಏಕೆಂದರೆ ಅನೇಕರು ತುಂಬ ಗೊಂದಲದಲ್ಲಿ ಇದ್ದಾರೆ, ಅವರ ಪ್ರಕಾರ ಆತ್ಮ ಅಂದರೆ ಏನೋ ಒಂದು ವಸ್ತು. ಅವರಿಗೆ ನಿಜವಾಗಿ ಏನು ಬೇಕಾಗಿದೆ, ಶಾಶ್ವತವಾಗಿರುವ, ಮರಣರಹಿತವಾಗಿರುವ ಆತ್ಮದ ಅಸ್ತಿತ್ವದ ಬಗ್ಗೆ ಸಾಕ್ಷ್ಯಾಧಾರ ಬೇಕಾಗಿದೆಯೇ? ಅಥವಾ ಮರಣಾನಂತರದ ಜೀವನದ ಬಗ್ಗೆ ಮಾತ್ರ ಆಧಾರಬೇಕಾಗಿದೆಯೇ? ಅದು ಮುಖ್ಯ. ಅವೆರಡೂ ಬೇರೆ ಬೇರೆ ಸಂಗತಿಗಳು. ಸಾವಿನಾಚೆಗಿನ ಬದುಕಿನ ಬಗೆಗೆ ಅನೇಕ ವೈಜ್ಞಾನಿಕ ಆಧಾರಗಳಿವೆ. ಸದ್ಯದ ಜೀವನದಲ್ಲಿ ಕೂಡ ಹಿಂದಿನ ಜನ್ಮದ ಸಂಗತಿಗಳ ನೆನಪಿನ ಭಾರವನ್ನು ಹೊತ್ತು ತಂದು ಅನೇಕ ಜನರ ಉದಾಹರಣೆಗಳಿವೆ. ಒಂದು ಉದಾಹರಣೆ, ಓರ್ವ ವ್ಯಕ್ತಿ ತೀರಿಕೊಂಡ. ಪಕ್ಕದ ಮನೆಯ ಮಗು ಯಾರೂ ಅರಿಯದಿದ್ದ ಅನೇಕ ವಿವರಗಳನ್ನು ನೀಡಿತು. ಆ ಸಂಗತಿಗಳು ತೀರಿಕೊಂಡ ವ್ಯಕ್ತಿಗೆ ಮಾತ್ರ ಗೊತ್ತಿದ್ದವು. ಆ ಮಗು ತಾನೇ ಸ್ವತಂತ್ರವಾಗಿ ತಿರುಗಾಡಲು ಶಕ್ತವಾದಾಗ ಅಂದರೆ ಸುಮಾರು 5 ಅಥವಾ ಆರಿಯ ವಯಸ್ಸಿನಲ್ಲಿ, ತನ್ನ ಪೂರ್ವ ಜನ್ಮದಲ್ಲಿ ವರ್ತಿಸಲು ಆರಂಭಮಾಡಿತು. "ನನ್ನ ಮಕ್ಕಳು ಅಲ್ಲಿ ನನಗಾಗಿ ಕಾಯುತ್ತಿದ್ದಾರೆ, ನಾನು ಅಲ್ಲಿಗೆ ಹೋಗಬೇಕು, ಅವರನ್ನು ನೋಡಿಕೊಳ್ಳಬೇಕು" ಎಂದು ಹೇಳತೊಡಗಿತು. ತಾನೇ ಮಗು, ಹಾಗಿದ್ದರೂ "ನನ್ನ ಮಕ್ಕಳು ನನಗೋಸ್ಕರ ಅಲ್ಲಿ ಕಾಯುತ್ತಿದ್ದಾರೆ" ಎಂದು ಹೇಳಲಾರಂಭಿಸಿತು. ಅದು ಹೇಳುವ ಮನೆಯು ಆ ಸತ್ತು ಹೋದ ವ್ಯಕ್ತಿಯದೇ ಆಗಿದ್ದು ಅವನಿಗೆ ಮಾತ್ರ

ಗೊತ್ತಿದ್ದ ಸಂಗತಿಗಳನ್ನು ಹೇಳುತ್ತ "ನಾನು ಅದನ್ನು ಅಲ್ಲಿ ಇಟ್ಟಿದ್ದೆ, ಅದನ್ನು ಏಕೆ ಇಲ್ಲಿ ತಂದು ಇಟ್ಟಿದ್ದೀರಿ" ಎಂದು ಮುಂತಾಗಿ ವಿಚಾರಿಸಲೂ ತೊಡಗಿತು. ಇಂಥ ಅನೇಕ ಉದಾಹರಣೆಗಳಿವೆ. ಇದು ತೀರ ಇತ್ತೀಚಿನ ಸಂಗತಿ. ಇಂಥ ಸುಮಾರು 4–6 ದಾಖಲಿತ ನಿದರ್ಶನಗಳಿವೆ. ಇದೆಲ್ಲ ಸರಿ. ಆದರೆ ದೇಹಾವಸಾನದ ನಂತರ ಏನು ಉಳಿಯುತ್ತದೆ? ಈ ಮಗುವಿನ ನಿದರ್ಶನದ ಮೇಲಿಂದ ಹೇಳುವುದಾದರೆ, ಅದೇನೂ ಆತ್ಮ ಅಲ್ಲ. ಆತ್ಮಕ್ಕೂ ಇಂಥ ವಿಷಯಗಳಿಗೂ ಸಾಕ್ಷ್ಯಾಧಾರಗಳಿವೆ. ನಾನು ಹೇಳಿದ ಆ ನಿರ್ದಿಷ್ಟ ಕೇಸಿನಲ್ಲಿ ತುಸು ಕೆಳಮಟ್ಟದ ಪ್ರಾಣಿಕ ಪ್ರಜ್ಞೆಯ ಉದಾಹರಣೆ ಇದೆ. ಮರಣಾನಂತರ ಅನತಿ ಸಮಯದಲ್ಲಿಯೇ ಮರುಜನ್ಮ ತಾಳಿ ಬಂದಾಗ, ಕೆಲ ವಿಶಿಷ್ಟ ಸನ್ನಿವೇಶಗಳ, ಬಲಗಳ ಸಂಯೋಗದಿಂದಾಗಿ (ಆವ್ಯಕ್ತಿ ತನ್ನದೇ ಕುಟುಂಬದಲ್ಲಿ ಮರಳಿ ಹುಟ್ಟಿ ಬಂದನಲ್ಲವೇ, ಹಾಗೆ) ಅಂಥ ನೆನಪುಗಳು ಬರುವ ಸಾದ್ಯತೆ ಇದೆ. ಯಾರು ಇದನ್ನು ಕುರಿತು ಅಧ್ಯಯನ ನಡೆಸಿದ್ದಾರೋ ಅಂಥವರ ಅನುಭವ ಹಾಗೂ ಅಭಿಪ್ರಾಯದಂತೆ, ಅಂತರಾತ್ಮಿಕ ಸತ್ತೆಯು ಆತ್ಮನು ರೂಪಗೊಳ್ಳುವ ಸಮಯದಲ್ಲಿ ತನ್ನ ಗತ ಜನ್ಮದ ಸ್ಮೃತಿಗಳನ್ನು ಉಳಿಸಿಕೊಳ್ಳುವ ಸಾಧ್ಯತೆ ಇದೆ, ಆದರೆ ಹಾಗೆ ಆಗಬೇಕಾದರೆ ಅಂತರಾತ್ಮವು ಭಾಗವಹಿಸಿದ ಭೌತಿಕ ಅಥವಾ ಲೌಕಿಕ ಬದುಕಿನ ಅನುಭವಗಳ ತೀವ್ರತೆ ಅಧಿಕವಾಗಿರಬೇಕಾಗುತ್ತದೆ, ಮತ್ತು ಅಂಥ ವಿಶಿಷ್ಟ ಅನುಭವಗಳನ್ನು ಮಾತ್ರ ಅದು ನೆನಪಿಸಿಕೊಳ್ಳಲು ಸಾಧ್ಯ. ಆದ್ದರಿಂದ ಇಂಥ ಕಥೆಗಳ ಬದಲಾಗಿ – ಅವು ಕಟ್ಟುಕಥೆಗಳಾಗಿರುವ ಸಾಧ್ಯತೆ ಇಲ್ಲದಿಲ್ಲ ಕೆಲ ವಿಶಿಷ್ಟ ನೆನಪುಗಳು ಉಳಿಯುವ ಸಾಧ್ಯತೆ ಇದೆ ಎಂಬುದನ್ನು ಮಾತ್ರ ಗ್ರಹಿಸಿರಿ. ಹಾಗೂ ಅಂಥ ನೆನಪುಗಳು ಹೆಚ್ಚು ವಿವರವಾಗಿ ಇರುತ್ತವೆ ಹಾಗೂ ಖಚಿತವಾಗಿರುತ್ತವೆ. ಆದರೆ ಅವು ಅಂತರಾತ್ಮನು ಭಾವಗಹಿಸಿದ ಭೌತಿಕ ಬದುಕಿನ ಭಾಗಶಃ ಸ್ಮೃತಿಗಳಾಗಿರುತ್ತವೆ ಎಂಬುದು ಕೂಡ ಅಷ್ಟೇ ಸತ್ಯ. ಅನೇಕರಿಗೆ ನೆನಪಿನ ಶಕ್ತಿ ತುಸು ಕಡಿಮೆ ಇರುತ್ತದೆ, ಅಂಥವರಿಗೆ ಅದೇನೆಂಬುದು ಗೊತ್ತೇ ಆಗುವುದಿಲ್ಲ. ಅದನ್ನು ಅವರು ಕನಸೆಂದೋ, ಕಲ್ಪನೆಯೆಂದೋ ಭಾವಿಸಿ ಸುಮ್ಮನಾಗಿ ಬಿಡುತ್ತಾರೆ. ಯಾರಿಗೂ ಗೊತ್ತಿದೆಯೋ ಅಂದರೆ ತಮ್ಮ ಭೌತಿಕ ಪ್ರಜ್ಞೆಯಲ್ಲಿ ಏನು ನಡೆಯುವುದೆಂಬುದರ ಪೂರ್ಣ ಅರಿವು ಯಾರಿಗಿದೆಯೋ ಅವರಿಗೆ ಇದು ಸ್ಮೃತಿ, ನೆನಪು ಎಂಬುದು ಅರ್ಥವಾಗುವುದು.

ಇಂಥ ಅನೇಕ ನೆನಪು ನನ್ನಲ್ಲಿ ಇದ್ದವು. ಆದರೆ ಆವಾವೂ ಉನ್ನತ ಪ್ರಜ್ಞೆಯ ಗುಣಧರ್ಮಗಳನ್ನು ಹೊಂದಿರಲಿಲ್ಲ. (ಅದು ಸ್ಮೃತಿ ಅಥವಾ ನೆನಪು ಅಲ್ಲ;

ಉನ್ನತ ಸತ್ತೆಗಳು ಪ್ರಾಣ ಅಥವಾ ಜೀವವನ್ನು ನೋಡುವ ರೀತಿ ಅದು; ಅದು ಬೇರೆ). ನಾನು ಹೇಳುವ ನೆನಪುಗಳು ಅಂತರಾತ್ಮನ ನೆನಪುಗಳು ಅವುಗಳ ಗುಣ ಧರ್ಮ ಬೇರೆ. ಅದನ್ನು ವ್ಯಕ್ತಿಗತ ಎಂದು ಹೇಳಬಹುದು. ಅಂದರೆ ಒಬ್ಬ ವ್ಯಕ್ತಿ ಏನನ್ನಾದರೂ ನೆನಪಿಸಿಕೊಳ್ಳುವ ರೀತಿಯದು. ಉಳಿದಂತೆ, ಮೇಲಿನಿಂದ ಬಂದ ದರ್ಶನಗಳು ಮುಂತಾದವು "ಸಕ್ರಿಯವಾಗಿರುವ ಪ್ರಜ್ಞೆಯ" ನೆನಪುಗಳೆಂದು ಹೇಳಬಹುದು. ಆದರೆ ಅಂತರಾತ್ಮನ ಸ್ಮೃತಿಗಳು ಮಾನಸೀಕರಣ–ಗೊಂಡಿರುವುದಿಲ್ಲ, ಉದಾಹರಣೆ, ನೀವು ನೆನಪಿಸಿಕೊಳ್ಳುವ ಸಮಯದಲ್ಲಿ ನೀವು ಯಾವ ರೀತಿ ಡ್ರೆಸ್ ಮಾಡಿಕೊಂಡಿದ್ದೀರಿ, ಸುತ್ತಮುತ್ತ ಏನೇನಿದ್ದವು ಇಂಥ ಸಂಗತಿಗಳನ್ನು ಗಮನಿಸುವುದಿಲ್ಲ. ನೀವು ಅವುಗಳನ್ನು ನೆನಪಿಸಿಕೊಳ್ಳುವುದಿಲ್ಲ. ನೀವು ಕೇವಲ ಏನು ನಡೆಯಿತು. ಅದೂ ಮುಖ್ಯವಾಗಿ ಪ್ರಜ್ಞೆಯ, ಅನಿಸಿಕೆಗಳ ಹಾಗೂ ಆತಂರಿಕ ಚಲನೆಗಳ ದೃಷ್ಟಿಯಿಂದ ಏನು ನಡೆಯಿತು ಎಂಬುದನ್ನು ಮಾತ್ರ ನೆನಪಿಸಿಕೊಳ್ಳುವಿರಿ.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ನವೆಂಬರ್ 3, 1966**

**ಆತ್ಮದ ನೆನಪುಗಳು**

ಆತ್ಮವು ಪರಮ ಚೈತನ್ಯ ಅಥವಾ ಪರಮ ಸತ್ಯದ ಸರಳ ಅಭಿವ್ಯಕ್ತಿ ಆಗಿದೆ. ನೀವು ಅದನ್ನು ಯಾವ ಹೆಸರಿನಿಂದ ಕರೆದರೂ ಸರಿಯೇ, ನನ್ನ ದೃಷ್ಟಿಯಲ್ಲಿ ಒಂದೇ, ಆತ್ಮವು "ತತ್"ನ ಪ್ರಕಟಣೆ, ನೇರ ಅಭಿವ್ಯಕ್ತಿ ಆಗಿದೆ. ಶರೀರದಲ್ಲಿರುವಾಗ ಅದು ಅಂತರಾತ್ಮನ ಕೋಶದೊಳಗೆ ಅಡಗಿರುತ್ತದೆ. ಅಂತರಾತ್ಮವು ಜನ್ಮ ಜನ್ಮಾಂತರಗಳಲ್ಲಿ ನಿರಂತರ ಬೆಳೆಯುವಂಥದು. ನೀವು ಯಾವುದರ ಬಗ್ಗೆ ಕೇಳುತ್ತಿರುವಿರಿ? ಅಂತರಾತ್ಮನ ಬಗೆಗೋ ಅಥವಾ ಸಾವಿನ ನಂತರದ ವೈಯಕ್ತಿಕ ಪ್ರಜ್ಞೆಯ ಬಗೆಗೋ? ಅವೆರಡೂ ಬೇರೆಬೇರೆ ಸಂಗತಿಗಳು. ಅಂತರಾತ್ಮವು ಮೊದಲು ಭ್ರೂಣರೂಪದಲ್ಲಿದ್ದು ಆನಂತರ ಪ್ರಜ್ಞಾಯುಕ್ತವಾಗುತ್ತದೆ. ಆ ಮೇಲೆ ಅದು ಸ್ವತಂತ್ರ ಸತ್ತೆಯಾಗಿ ರೂಪಗೊಳ್ಳುತ್ತದೆ. ಸಾವಿನ ನಂತರದ ಬದುಕಿಗೂ ಇದಕ್ಕೂ ಸಂಬಂಧವಿಲ್ಲ. ಸಾವಿನ ನಂತರದ ಬದುಕಿನ ಬಗ್ಗೆ ಅನೇಕ ದಾಖಲಿತ ಅಂತರಾತ್ಮದ ಬೆಳವಣಿಗೆಯ ಮೇಲೆ, ಆ ವ್ಯಕ್ತಿಯ ಸಮಗ್ರ ಪ್ರಜ್ಞೆಯು ಬೆಳಸಿಕೊಂಡ ನಂಬಿಕೆಯ ಮೇಲೆ ಇದೆಲ್ಲ ನಿರ್ಭರವಾಗಿರುತ್ತದೆ. ಇಂಥ ಸಿದ್ಧಿ

ಸಿದ್ಧಿಸುವ ಪೂರ್ವದಲ್ಲಿ ಮಾನಸಿಕ, ಪ್ರಾಣಿಕ ಹಾಗೂ ಭೌತಿಕ ಪ್ರಜ್ಞೆಗಳು ಅಂತರಾತ್ಮಿಕ ಪ್ರಜ್ಞೆಯೊಂದಿಗೆ ಒಂದಾಗಿರಬೇಕಾಗುತ್ತದೆ. ದೇಹಾವಸಾನದ ಕೊನೆಯ ಗಳಿಗೆಯಲ್ಲಿ ಒಂದು ವಿಧವಾದ ಭರವಸೆ, ನಂಬಿಕೆ, ಅಭೀಪ್ಸೆ, ಸಂಕಲ್ಪ ಗಟ್ಟಿಯಾಗಿ ರೂಪುಗೊಂಡಾಗ ಮುಂದಿನ ಜನ್ಮದ ಬದುಕನ್ನು ನಿರ್ಧರಿಸಲು ಸಾಧ್ಯವಾಗುತ್ತದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ನವೆಂಬರ್ 3, 1966**

ಅಂತರಾತ್ಮ ಎಂದಿಗೂ ಖಿನ್ನತೆಗೆ ಒಳಗಾಗುವುದಿಲ್ಲ.

*

ಅಂತರಾತ್ಮನಿಗೆ ಖಿನ್ನತೆ ಎಂಬುದು ಗೊತ್ತೇ ಇಲ್ಲ, ಏಕೆಂದರೆ ಅದು ದೈವಿಕ ಸ್ವಭಾವದ್ದಾಗಿದೆ, ದೈವಿಕದಲ್ಲಿ ಖಿನ್ನತೆ ಇರಲು ಸಾಧ್ಯವೇ ಇಲ್ಲ.

ಅಂತರಾತ್ಮನು ಸತ್ತೆಯ ಉಳಿದ ಭಾಗಗಳ ಮೂರ್ಖತನವನ್ನು ವಿಷಾದದಿಂದ ನೋಡಬಹುದೇ ಹೊರತು ಅದರ ಮುಖ್ಯ ಸ್ವಭಾವದಲ್ಲಿ ಖಿನ್ನತೆ ಎಂಬುದು ಇರಲು ಸಾಧ್ಯವೇ ಇಲ್ಲ.

*

ಅಂತರಾತ್ಮನಲ್ಲಿ ನಿರಂತರ ಆನಂದದ ಮೂಲ ಸ್ತ್ರೋತ್ರ ಇದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/337 – ಶ್ರೀಮಾತೆ**

**ಅಂತರಾತ್ಮ ಮತ್ತು ಮೃತ್ಯು**

*ಸಾವಿನ ಸಮಯ ಮತ್ತು ಸಾಯುವ ವಿಧಾನಗಳು ಯಾವಾಗಲೂ ಆತ್ಮದ ಆಯ್ಕೆಗಳೇ? ಬಾಂಬ್‌ದಾಳಿ, ಪ್ರವಾಹ, ಭೂಕಂಪ ಮುಂತಾದ ಮಹಾವಿನಾಶದಲ್ಲಿ ಎಲ್ಲ ಆತ್ಮಗಳು ಏಕಕಾಲದಲ್ಲೇ ಒಟ್ಟಿಗೆ ಸಾಯಲು ಇಚ್ಛಿಸುತ್ತವೆಯೇ?*

ಸಾಮಾನ್ಯವಾಗಿ ಮಾನವ ಜೀವಿಗಳೆಲ್ಲರೂ ಸಾಮೂಹಿಕ ನಿಯತಿಗೆ ಒಳಪಟ್ಟಿರುತ್ತಾರೆ. ಅಂಥವರ ಮಟ್ಟಿಗೆ ಇಂಥ ಪ್ರಶ್ನೆ ಉದ್ಭವಿಸುವುದೇ ಇಲ್ಲ.

ಯಾರಲ್ಲಿ ಅಂತರಾತ್ಮ ವ್ಯಕ್ತಿಗತವಾಗಿ ರೂಪಗೊಂಡಿದೆಯೋ ಅಂಥವರು ಇಂಥ ಸಾಮೂಹಿಕ ವಿನಾಶಗಳ ನಡುವೆಯೂ, ಬಯಸಿದರೆ ಬದುಕಿ ಉಳಿಯಬಹುದು.

*ಭೌತಿಕ, ಪ್ರಾಣಿಕ ಹಾಗೂ ಮಾನಸಿಕ ಸತ್ತೆಗಳಿಂದ ಬೇರ್ಪಟ್ಟ ಮೇಲೆ ಆತ್ಮವು ತನ್ನ ಅಸ್ತಿತ್ವದ ಬಗೆಗೆ ಹಾಗೂ ಸಾವಿನಾಚೆಗಿನ ಬದುಕಿನ ಬಗೆಗೆ ಹೇಗೆ ತಿಳಿದುಕೊಳ್ಳಲು ಸಾಧ್ಯ?*

ಆತ್ಮವು ಪುರುಷೋತ್ತಮನ ಜ್ವಲಂತ ಅಂಶವಾಗಿದೆ; ಹೀಗಿರುವಾಗ ಎಲ್ಲದರ ಪ್ರಭು, ಸ್ವಾಮಿಯಾಗಿರುವ ಆತ್ಮಕ್ಕೆ ಅರಿವು ಇರಬೇಕಾದರೆ ಭೌತಿಕ ಶರೀರ ಇರಲೇಬೇಕೆಂಬ ಕಲ್ಪನೆ ಏನಿದೆಯೆಲ್ಲ ಅದು ನನಗೆ ತುಂಬ ಆಶ್ಚರ್ಯಕರ ಅನಿಸುತ್ತದೆ.

ತನ್ನ ಇರುವಿಕೆಯ ಬಗೆಗೇ ಆಗಲಿ, ಸಾವಿನ ನಂತರದ ಇರುವಿಕೆಯ ಬಗೆಗೇ ಆಗಲಿ ಆತ್ಮಕ್ಕೆ ಅದೇನು ಹೊಸದಲ್ಲ. ಅದು ಪ್ರಜ್ಞೆಯ ವಿಸ್ತಾರ ಅಷ್ಟೇ. ಇನ್ನೊಂದು ವಿಷಯ, ಇಂಥ ಪ್ರಶ್ನೆಗಳು ತೀರ ಇತ್ತೀಚೆಗೆ ಬರುತ್ತಿವೆ. ಇವು ಮಾನವನಿಗೆ ಸಾವಿನ ಬಗ್ಗೆ ಏನೂ ತಿಳಿದಿಲ್ಲ ಎಂಬುದನ್ನು ತೋರಿಸುತ್ತೇನೆ ಅಷ್ಟೇ. ಮಾನವನಿಗೆ ನಿಜವಾಗಿ ಏನು ಗೊತ್ತಿಲ್ಲ. ಸಾವು ಅಂದರೆ ಏನು, ಸಾವಿನ ನಂತರ ಏನಾಗುತ್ತದೆ ಎಂಬುದು ನಿಜವಾಗಿ ಅವನಿಗೆ ತಿಳಿದಿಲ್ಲ. ಅನೇಕ ರೀತಿಯ ಸಿದ್ಧಾಂತಗಳಿವೆ, ಅನೇಕ ತತ್ವಗಳಿವೆ ಆದರೆ ಯಾವುದಾದರೂ ಖಚಿತತೆ ಇಲ್ಲ, ನಿಶ್ಚಿತತೆ ಇಲ್ಲ. ನಾನು ಅತಿ ಆಳವಾಗಿ, ಗಹನವಾಗಿ ಯೋಚಿಸಿ ಒಂದು ನಿರ್ಧಾರಕ್ಕೆ ಬಂದಿದ್ದೇನೆ, ಅದೇನೆಂದರೆ "ಸಾವು" ಎಂಬುದು ಇಲ್ಲವೇ ಇಲ್ಲ. ವಾಸ್ತವವಾಗಿ "ಮರಣ" ಎಂಬುದು ಅಸ್ತಿತ್ವಕ್ಕೆ ಇಲ್ಲ.

ಸಾವು ಒಂದು ತೋರಿಕೆ ಅದೂ ಸಹ ಸಂಕುಚಿತ ದೃಷ್ಟಿಕೋನ ಅಭ್ಯಾಸ. ಸಾವಿನಿಂದಾಗಿ ಪ್ರಜ್ಞೆಯ ಯಾವ ರೀತಿಯ ಬದಲಾವಣೆಯೂ ಆಗುವುದಿಲ್ಲ. ಏಕೆಂದರೆ ಅದು ಕೇವಲ ಬಾಹ್ಯ ಸ್ತರದ ಘಟನೆ. ಅಜ್ಞಾನದ ಆಧಾರದ ಮೇಲೆ ಕಲ್ಪಿತವಾಗಿರುವ ಸಂಗತಿ ಅದು. ಸಾವಿನ ನಂತರವೂ ಸಂವಹನವನ್ನು ಉಳಿಸಿಕೊಳ್ಳಬಲ್ಲ ಸಾಮರ್ಥ್ಯ ಯಾರಿಗಿದೆಯೋ, ಅಂಥವರಿಗೆ ಕನಿಷ್ಠ ಪಕ್ಷ ತಮ್ಮ ವೈಯಕ್ತಿಕತೆಯ ಮಟ್ಟಿಗಾದರೂ ಅದು ಯಾವ ವೈಯಕ್ತಿಕತೆಯ ಮಟ್ಟಿಗಾದರೂ ಅದು ಯಾವ ವ್ಯತ್ಯಾಸವನ್ನು ಮಾಡುವುದಿಲ್ಲವೆಂಬುದು ನಿಚ್ಚಳವಾಗಿ ಅರಿವಾಗುವುದು.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಮಾರ್ಚ್ 7, 1967**

## ಸಾವಿನ ನಂತರ ಏನು ಸಂಭವಿಸುತ್ತದೆ

ಈ ವಿಷಯವಾಗಿ ನಾನು ಸಾಕಷ್ಟು ಸಲ ಹೇಳಿದ್ದೇನೆ, ಮತ್ತೆ ಮತ್ತೆ ಅದನ್ನೇ ಹೇಳಲಿಚ್ಛಿಸುವುದಿಲ್ಲ. ನಾವು ಒಂದು ತುಣುಕು ಅಥವಾ ಭಾಗದಿಂದ ಮಾಡಲ್ಪಟ್ಟವರಲ್ಲ. ನಮ್ಮೊಳಗೆ ಅನೇಕ ಸತ್ತೆಗಳಿವೆ, ಮತ್ತು ಒಂದೊಂದಿಗೆ ಸತ್ತೆಯೂ ತನ್ನದೇ ಆದ ಜೀವನವನ್ನು ಹೊಂದಿದೆ. ನಿಮಗೆ ಭೌತಿಕ ಶರೀರ ಇರುವವರೆಗೆ ಅವೆಲ್ಲವೂ ಆ ಒಂದೇ ಶರೀರದಲ್ಲಿಯೇ ಸಮಾಹಿತವಾಗಿರುತ್ತವೆ. ಅದೆಲ್ಲ ಸೇರಿಯೇ ನಿಮಗೆ ನೀವೊಂದು ವ್ಯಕ್ತಿ, ನೀವೇ ವೈಯಕ್ತಿಕವಾಗಿ ಭಿನ್ನ ವ್ಯಕ್ತಿ ಎಂಬ ಭಾವನೆ ಬರುವಂತೆ ಮಾಡುವುದು. ಆದರೆ ಅಂಥ ಅನೇಕ ಸತ್ತೆಗಳಿವೆ. ಮತ್ತು ಪ್ರತಿಯೊಂದು ಆಯಾ ಸ್ತರಕ್ಕೆ ಸಂಬಂಧಪಟ್ಟಂತೆ ಅಧಿಕಾಂಶ ಇರುತ್ತದೆ. ನಿಮಗೆ ಭೌತಿಕ ಸತ್ತೆ ಇದೆ, ಪ್ರಾಣಿಕ ಸತ್ತೆ ಇದೆ, ಮಾನಸಿಕ ಸತ್ತೆ ಇದೆ, ಹಾಗೂ ಇದಲ್ಲದೇ ಅನೇಕ ಸತ್ತೆಗಳು, ಅವುಗಳ ಮಧ್ಯವರ್ತಿ ಸ್ತರಗಳೂ ಇವೆ. ನೀವು ಭೌತಿಕ ಶರೀರವನ್ನು ತ್ಯಜಿಸಿದಾಗ ನಿಮ್ಮೊಳಗಿರುವ ಎಲ್ಲ ಸತ್ತೆಗಳೂ ಚೆಲ್ಲಾಪಿಲ್ಲಿಯಾಗಿ ಬಿಡುತ್ತವೆ. ನೀವು ಸಾಕಷ್ಟು ಮುಂದುವರಿದ ಯೋಗಿ ಅಗಿದ್ದರೆ, ನಿಮ್ಮ ಉಳಿದ ಸತ್ತೆಗಳನ್ನು ದೈವೀ ಕೇಂದ್ರದ ಸುತ್ತ ಸಂಯೋಜನೆ ಬಲ್ಲ ಸಾಮರ್ಥ್ಯ ನಿಮ್ಮಲ್ಲಿ ಇದ್ದರೆ, ಆಗ ಎಲ್ಲ ಸತ್ತೆಗಳೂ ಪರಸ್ಪರ ಒತ್ತಾಸೆಯಾಗಿ ನಿಂತು ಒಂದೆಡೆ ಬೆಸೆದುಕೊಂಡು ನಿಲ್ಲುತ್ತವೆ. ನಿಮಗೆ ಅಂಥ ಸಾಮರ್ಥ್ಯ ಇಲ್ಲದೇ ಹೋದರೆ ದೇಹಾವಸಾನದ ಸಮಯದಲ್ಲಿ ಎಲ್ಲವೂ ಅತ್ತಿತ್ತ ಚದುರಿ ಹೋಗಿಬಿಡುತ್ತವೆ, ತಮ್ಮ ತಮ್ಮ ಸ್ತರವನ್ನು ಸೇರಿಕೊಂಡು ಬಿಡುತ್ತವೆ. ಉದಾಹರಣೆಗಾಗಿ ಪ್ರಾಣಿಕ ಸತ್ತೆಯನ್ನು ತೆಗೆದುಕೊಂಡರೆ, ಅದರಲ್ಲಿರುವ ಆಶೆಗಳು, ಬಯಕೆಗಳು, ಕಾಮನೆಗಳು ಬೇರೆ ಬೇರೆಯಾಗಿ ಬಿಡುತ್ತವೆ. ತಮ್ಮದೇ ಆದ ದಾರಿಯನ್ನು ಹಿಡಿದು ಹೇಗಾದರೂ ಮಾಡಿ ಆಶಾಪೂರ್ತಿಯಾಗಲೇಬೇಕೆಂದು ಸಾಹಸ – ಪಡಲಾರಂಭಿಸುತ್ತವೆ. ಅವೆಲ್ಲವನ್ನು ಒಂದೆಡೆ ಸಂಯೋಜಿಸಬಹುದಾಗಿದ್ದ ಭೌತಿಕ ಶರೀರ ಇಲ್ಲದಂತಾಗಿದೆ. ನಿಮ್ಮ ವ್ಯಕ್ತಿಗಳ ಪ್ರಜ್ಞೆಯನ್ನು ಅಂತರಾತ್ಮಿಕ ಪ್ರಜ್ಞೆಯು ಜೊತೆ ಒಂದಾಗಿ ಬೆಸೆಯುವ ಸಾಮರ್ಥ್ಯ ನಿಮಗಿದ್ದರೆ ಸಾಯುವ ಸಮಯದಲ್ಲಿ ಕೂಡ ಅಂತರಾತ್ಮನ ಅರಿವು ಅಂತರಾತ್ಮವು ತನ್ನದೇ ಆದ ಅಂತರಾತ್ಮಿಕ ಸ್ತರಕ್ಕೆ ಹೋಗಿ – ಅದು ಆನಂದ, ಸಂತೋಷ, ಶಾಂತಿ ಸಮಾಧಾನಗಳು ನಿರಂತರ ಬೆಳೆಯುವ ಜ್ಞಾನದ ಸ್ತರವಾಗಿದೆ. ಅಲ್ಲಿ ನೆಲೆ ನಿಲ್ಲುತ್ತದೆ. ಒಟ್ಟಾರೆಯಾಗಿ ಹೇಳಬೇಕೆಂದರೆ ನೀವು ನಿಮ್ಮ ಪ್ರಜ್ಞೆಯನ್ನು ಕಳೆದುಕೊಳ್ಳದೇ ಹಾಗೆಯೇ ಉಳಿಸಿಕೊಳ್ಳಬೇಕೆಂದರೆ

ನಿಮ್ಮ ಸತ್ತೆಯ ಯಾವುದಾದರೊಂದು ಅವಿನಾಶಿಯಾದ ಭಾಗದ ಮೇಲೆ ಕೇಂದ್ರಿಕರಿಸಿ ಕಾಯಬೇಕು. ಇಲ್ಲವಾದರೆ ಅದು ಗಾಳಿಯಲ್ಲಿನ ಸೊಡರಿನಂತೆ, ಜ್ಯೋತಿಯಂತೆ ಕಾಣದಾಗಿ ಬಿಡುವುದು. ಇದೂ ಕೂಡ ಒಂದು ರೀತಿಯಲ್ಲಿ ಒಳ್ಳೆಯದೇ. ಏಕೆಂದರೆ ಅನ್ಯಥಾ ದೇವತೆಗಳೋ ಅಥವಾ ದೊಡ್ಡವರೆನಿಸಿ–ಕೊಂಡವರೋ ಲೌಕಿಕ ಪ್ರಪಂಚದಲ್ಲಿನ ಸಾಮಾನ್ಯ ಕಲ್ಪನೆಯಂತೆ ನರಕವನ್ನೋ ಸ್ವರ್ಗವನ್ನೋ ನಿಮ್ಮ ಸುತ್ತ ಕಲ್ಪಿಸಿ ನಿಮ್ಮನ್ನು ಅದರೊಳಗೆ ಕೂಡಿಹಾಕಿ ಬಿಡುತ್ತಾರೆ.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಸೆಪ್ಟೆಂಬರ್ 7, 1968**

**ಅಂತರಾತ್ಮ ಮತ್ತು ಲಿಂಗಭೇದ**

*ಪುನರ್ಜನ್ಮದ ಸಂದರ್ಭದಲ್ಲಿ ಮಹಿಳೆಯ ಪುರುಷನಾಗಿ, ಪುರುಷನು ಮಹಿಳೆಯಾಗಿಯೂ ಜನಿಸುವ ಸಾಧ್ಯತೆ ಇದೆ ಎಂದು ನೀನು ನನಗೆ ಹೇಳಿದೆ. ತನ್ನಲ್ಲಿರುವ ಕೆಲ ಸ್ತ್ರೀ ಸಹಜ ಗುಣಗಳನ್ನು ವ್ಯಾಖ್ಯನಿಸಿರುವ ಇದರಿಂದಲೇ ಸಾಧ್ಯ ಎಂಬುದು ಅವನ ನಂಬಿಕೆ. ನನಗೂ ಸಹ ಇದನ್ನು ತಿಳಿದುಕೊಳ್ಳಬೇಕು ಎಂಬ ಅಪೇಕ್ಷೆ ಇದೆ. ಅಂತರಾತ್ಮನಲ್ಲಿ ಇಂಥ ಲಿಂಗ ಭೇದದ ವ್ಯವಸ್ಥೆ ಇರುತ್ತದೆಯೇ?*

ಇದನ್ನು ಲಿಂಗ ಭೇದ ಎಂದು ಹೇಳಬಾರದು, ಬೇಕಾದರೆ ಸ್ತ್ರೀ ಅಥವಾ ಪುರುಷ ತತ್ವ ಎಂದು ಹೇಳಬಹುದು. ಇದು ತುಂಬ ಜಟಿಲವಾದ ಪ್ರಶ್ನೆ. (ಪುನರ್ಜನ್ಮದ ಪ್ರಕ್ರಿಯೆಯಲ್ಲಿ ಲಿಂಗ ಬದಲಾವಣೆ ಸಾಧ್ಯವಿಲ್ಲದೆಯೇ ಎಂಬ ಪ್ರಶ್ನೆ) ಸಾಮಾನ್ಯವಾಗಿ ಜನ್ಮ ಜನ್ಮಾಂತರಗಳಲ್ಲಿ ಒಂದು ನಿರ್ದಿಷ್ಟ ಸಾಲು ಇದೆ, ನನ್ನ ಹಾಗೂ ಸಾಮಾನ್ಯ ಅನುಭವದ ಪ್ರಕಾರ ಓರ್ವ ವ್ಯಕ್ತಿ ಒಂದು ಸಾಲನ್ನೇ ಅನುಸರಿಸುತ್ತಾನೆ. ಹಾಗೆಂದು ಲಿಂಗ ಬದಲಾವಣೆ ಅಸಂಭವ ಎಂದೇನೂ ಹೇಳಲು ಸಾಧ್ಯವಿಲ್ಲ. ಕೆಲವರು ಹಾಗೆ ಐಚ್ಚಿಕವಾಗಿ ಬದಲಾವಣೆ ಮಾಡಿಕೊಳ್ಳಲೂ ಬಹುದು. ಪುರುಷನಲ್ಲಿ ಸ್ತ್ರೀ ಸಹಜ ಸ್ವಭಾವದ ಲಕ್ಷಣಗಳಿದ್ದಾಕ್ಷಣ ಆ ವ್ಯಕ್ತಿಯ ಜನನದ ಹಿಂದೆ ಅನೇಕ ಶಕ್ತಿಗಳ ಕೈವಾಡ ಇರುತ್ತದೆ; ಈ ಶಕ್ತಿಗಳ ಸಾಮಾನ್ಯ ಕ್ರಿಯೆಯಲ್ಲಿ ಹಾಗೂ ಅದರಿಂದಾಗುವ ನಿರ್ಮಿತಿಯಲ್ಲಿ ಇಂಥ ಸ್ವಭಾವದ ಸಾಧ್ಯತೆ ಇರುತ್ತದೆ. ಇದಲ್ಲದೇ ಸ್ತ್ರೀ ಪುರುಷರಿಬ್ಬರಿಗೂ ಕೆಲ ಸಾಮಾನ್ಯ ಗುಣಗಳಿವೆ, ಸ್ವಭಾವಗಳಿವೆ. ಹಾಗೂ ಪುನರ್ಜನ್ಮದ ಸಮಯದಲ್ಲಿ ಕೇವಲ ತನ್ನದಷ್ಟೇ ಅಂತಲ್ಲ


ಬೇರೊಬ್ಬ ವ್ಯಕ್ತಿಯ ಮಾನಸಿಕ ವ್ಯಕ್ತಿತ್ವದ ಅಂಶಗಳು ಸೇರಿಕೊಳ್ಳುವ ಸಂಭವವೂ ಇರುತ್ತದೆ. ಹಿಂದಿನ ಕಾಲದ ವ್ಯಕ್ತಿಯೊಬ್ಬನನ್ನು ಕುರಿತು "ನಾನೇ ಆ ವ್ಯಕ್ತಿ ಆಗಿರಲಿಕ್ಕಿಲ್ಲ, ಆದರೆ ನನ್ನ ಮಾನಸಿಕ ವ್ಯಕ್ತಿತ್ವದ ತುಸು ಅಂಶ ಅವನಲ್ಲಿ ಇತ್ತು" ಎಂದು ಹೇಳಬಹುದು, ಗುರುತಿಸಬಹುದು. ಪುರ್ನಜನ್ಮ ಎನ್ನುವ ವಿಷಯ ನಿಜವಾಗಿ ತುಂಬ ಸಂಕೀರ್ಣವಾದುದು, ಅಷ್ಟು ಸರಳವಾದ ವಿಷಯವಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/349**

ಅಂತರಾತ್ಮನಲ್ಲಿ ಪುರುಷ ಹಾಗೂ ಸ್ತ್ರೀ ಪ್ರವೃತ್ತಿಗಳು ಇರುತ್ತವೆ ಎಂಬುದು ನಿಜ. ಆದರೆ ಹಾಗೆಂದು ಅದನ್ನು ಪುರುಷ ಅಥವಾ ಸ್ತ್ರೀ ಎಂದು ಸ್ಪಷ್ಟವಾಗಿ ಹೇಳಲಾಗದು. ಅಂತರಾತ್ಮವು ಲಿಂಗ(ಭೇದ)ರಹಿತವಾದುದು.

ಅವರು (ಶ್ರೀ ಅರವಿಂದರು) ಹೇಳುವಂತೆ ಇದು ತುಂಬ ಸಂಕೀರ್ಣವಾದ ವಿಷಯ. ಅಲ್ಲಿ ರೀತಿಯ ಸಾಧ್ಯತೆಗಳೂ ಇರುತ್ತವೆ. ಯಾವುದನ್ನು ಅಸಂಭವ, ಅಸಾಧ್ಯ ಎಂದು ಹೇಳಲಾಗದು.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಅಕ್ಟೋಬರ್ 31, 1970**



ಅದುವೆ ಸರ್ವ ಮೂಲ, ಅದೇ ಎಲ್ಲದರ ಏಕೈಕ ಸುಳಿವು ಮೌನವದು ಶಿರದಾಚೆಗಿರುವ, ಅಂತರಂಗದ ವಾಣಿಯು ಹೃದಯದೊಳು ನೆಲೆಸಿರುವ ಜೀವಂತ ಪ್ರತಿಮೆಯದು. ಗೋಡೆಗಳಿರದ ವೈಶಾಲ್ಯ ಅದು ಅಳೆಯಬಾರದ ಬಿಂದು. ಆಕಾಶದಡಿ ನಡೆವ ಎಲ್ಲ ರಹಸ್ಯ ದೃಶ್ಯಗಳ ಸತ್ಯ ಅದುವು ನಮ್ಮ ಯತ್ನ

ಸಾಹಸಗಳೆಲ್ಲ ಬಳಿ ಸಾರುವ ವಾಸ್ತವವೇ ಅದುವು. ನಮ್ಮ ಜೀವನದ ಗೂಢ ಗಂಭೀರ ಸಾರ್ಥಕತೆಯೇ ಅದುವು. ಭಗವಂತನ ಗೂಡಿನಲ್ಲಿರುವ ಮಧು ಮಧುರ ಭಂಡಾರ, ಕತ್ತಲಿನ ಉಡುಪಿನಲಿ ಜ್ವಲಿಪ ಜಾಜ್ವಲ್ಯ ತೇಜ, ಭಾಗವತ ಜ್ಯೋತಿಯೇ ನಮ್ಮ ವೈಭವ ಸಕಲ ಸಡಗರ ಜಗದೆ ಸಂತಸವ ಚಿಮ್ಮುವ ಬಂಗಾರದ ಚಿಲುಮೆ ಸಾವಿನ ಗವಿಯಲಿ ಅಡಗಿ ಕುಳಿತಿಹ ಅಮರತ್ವ ಅದುವು. ಅದುವೇ ನಮ್ಮ ಅಜಾತ ದೈವತ್ವದ ಸ್ಪಷ್ಟ ರೂಪ ಅಂತರಾಳಗಳಲ್ಲದುವು ನಮ್ಮ ಅದೃಷ್ಟವನು ಕಾಯುವುದು ಮಲಗಿಹುದಲ್ಲಿ ಸಾಂತ ವಸ್ತುಗಳ ಶಾಶ್ವತ ಬೀಜ.

**ಸಾವಿತ್ರಿ: p.49** **– ಶ್ರೀ ಅರವಿಂದರು**

# ಚೈತ್ಯ ಪುರುಷನ ಕಾರ್ಯಗಳು

– ಅನುವಾದ: ಪುಟ್ಟು ಕುಲಕರ್ಣಿ

## ದೈವತ್ವದ ಪ್ರತಿನಿಧಿ

ಚೈತ್ಯ ಪುರುಷನು ಮಾನವನಲ್ಲಿ ಇರುವ ದೈವತ್ವದ ಪ್ರತಿನಿಧಿಯಾಗಿದ್ದಾನೆ. ಹೌದು ಇದು ಅದೇ ರೀತಿಯಲ್ಲಿಯೇ ಇರುತ್ತದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ, ದೈವತ್ವವೆನ್ನುವದು ಯಾವಾಗಲೂ ನಮ್ಮಿಂದ ದೂರವೇ ಇರುವ ಹಾಗೂ ದುರ್ಗಮವಾಗಿ ಇರುವದಿಲ್ಲ. ಆ ದೈವತ್ವವೂ ನಿಮ್ಮಲ್ಲಿಯೇ ಇರುತ್ತದೆ. ಆದರೆ ನೀವು ಆ ವಿಷಯದ ಬಗೆಗೆ ಪ್ರಜ್ಞೆಯನ್ನೇ ಹೊಂದಿಲ್ಲ. ಒಂದು ವೇಳೆ ಹೊಂದಿದ್ದರೂ ಸಹಿತ..... ಅದು ಕೇವಲ ಅಸ್ತಿತ್ವವಾಗಿ ವರ್ತಿಸುವದಕ್ಕಿಂತ 'ಪ್ರಭಾವ'ವಾಗಿ ಪ್ರವೃತ್ತವಾಗಿರುತ್ತದೆ. ಅದೊಂದು ಸದಾ ಸಚೇತನಯುಕ್ತವಾದ ಅಸ್ತಿತ್ವವಾಗಿದ್ದು, ನೀವು ಪ್ರತಿ ಕ್ಷಣವೂ ಸಹಿತ ನಿಮ್ಮಲ್ಲಿಯೇ ಇದು ಏನು?... ಹೇಗೆ?... ಅದು ಹೇಗೆ ಕಾಣುತ್ತದೆ ಎಂದು ಸದಾ ಕೇಳಿಕೊಳ್ಳುವದಕ್ಕೆ ಅರ್ಹರಾಗಬೇಕು. ಆ ರೀತಿಯಲ್ಲಿ ಅಲ್ಲಿ ಇರುತ್ತದೆ.

ಮೊದಲಿಗೆ ದೈವತ್ವ ಹೇಗೆ ಕಾಣುತ್ತದೆ, ಆ ಮೇಲೆ ಅದು ಹೇಗೆ ಇಚ್ಛಿಸುತ್ತದೆ ಮತ್ತೆ ಅದು ಹೇಗೆ ಕ್ರಿಯಾಶೀಲವಾಗುತ್ತದೆ ಎನ್ನುವದನ್ನು ಅರಿತುಕೊಳ್ಳಬೇಕು. ಅದಕ್ಕಿಂತ ಮಿಗಿಲಾಗಿ, ಇದನ್ನು ಅರಸಿಕೊಂಡು ಯಾವುದೇ ದುರ್ಗಮ ಪ್ರದೇಶದಲ್ಲಿ ಹೋಗುವಂತೆಯೂ ಇಲ್ಲ. ಅದು ನಿಖರವಾಗಿ ಇಲ್ಲಿಯೇ ಇದೆ. ಒಮ್ಮೊಮ್ಮೆ, ಒಂದು ಕ್ಷಣಕ್ಕಾಗಿ, ಒಂದು ಕ್ಷಣದಲ್ಲಿ ಎಲ್ಲ ಪುರಾತನ ಹವ್ಯಾಸಗಳು

ಮತ್ತು ಸಾಮಾನ್ಯವಾಗಿರುವ ಅರೆಯರಿವು ಒಂದು ಗವಸಿನಂತೆ(ಪರದೆಯಂತೆ) ಮುಚ್ಚಿಕೊಂಡು, ನಮ್ಮನ್ನು ಈ ಚೈತ್ಯ ಪುರುಷನಿಂದ ಕಾಣಲು ಹಾಗೂ ಸ್ಪಂದಿಸಲು ಅಡೆತಡೆಯನ್ನು ಉಂಟುಮಾಡುತ್ತದೆ. ಹೀಗಾಗಿ ನೀವು ಕಡ್ಡಾಯವಾಗಿ.. ಹೌದು, ಕಡ್ಡಾಯವಾಗಿಯೇ ಆ ಗವಸಿನಿಂದ ಮೇಲೆದ್ದು ಬರಬೇಕಾಗಿದೆ.

ಇದಕ್ಕಾಗಿ ನಿಮಗೆ ನೀವೆ ಪ್ರಜ್ಞಾವಂತ – ಉಪಕರಣವಾಗಬೇಕಾಗಿದೆ. ಅದೂ ಪ್ರಜ್ಞಾಪೂರ್ಣವಾದ ಉಪಕರಣವಾಗಬೇಕು. ಆ ದೈವತ್ವದ ಕುರಿತು ಸಂಪೂರ್ಣ ಪ್ರಜ್ಞೆಯನ್ನು ಹೊಂದಿರುವ ಸಾಧನವಾಗಬೇಕು. ಸಾಮಾನ್ಯವಾಗಿ ಇದು ಇಡೀ ಜೀವನದ ಸಮಯವನ್ನೇ ಬಯಸುತ್ತದೆ. ಅಥವಾ ಕೆಲವೊಮ್ಮೊಮ್ಮೆ ಕೆಲವು ಕಾರಣಗಳಿಂದಾಗಿ ಕೆಲವು ಜನರಿಗಾಗಿ ಹಲವು ಬಾರಿಯೂ ಘಟಿಸಬಹುದು. ಆದರೆ ಇಲ್ಲಿ ಸದ್ಯದ ಈ ನಿಬಂಧನೆಗಳಲ್ಲಿ ನೀವು ಇದನ್ನು ಕೆಲವೇ ತಿಂಗಳುಗಳಲ್ಲಿ ಸಾಧಿಸಿಕೊಳ್ಳಬಹುದು. ಅದು ಯಾರಿಗೆಂದರೆ, – ಯಾರು ಉತ್ಕಟದ ಅಭೀಪ್ಸೆಯನ್ನು ಹೊಂದಿದ್ದಾರೋ, ಅವರು ಕೆಲವೇ ತಿಂಗಳುಗಳಲ್ಲಿ ಅದನ್ನು ಸಾಧಿಸಿಕೊಳ್ಳುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/428 – ಶ್ರೀಮಾತೆ**

**ಪರಿಪೂರ್ಣವಾಗಿ ಮಾನಸಿಕವಾಗಿ ತೆರೆದುಕೊಳ್ಳುವದರಿಂದ, ಇದು ಸಾಧನೆಯ ಮೂಲಕ ಪ್ರಗತಿಶೀಲವಾಗಿ ಔನ್ನತ್ಯಕ್ಕೇರುವ ಕ್ರಿಯೆಯಾಗಿದ್ದು, ಅಥವಾ ಇದು ಈ ಕರ್ತವ್ಯಕ್ಕೆ ಅತ್ಯಾವಶ್ಯಕವಾದ ಸಂಗತಿಯಾಗಿದೆ. ಇದು ಪರಮ ರಹಸ್ಯಗಳಲ್ಲಿಯೇ ಪರಮಾತಿ ಪರಮ ರಹಸ್ಯವಾಗಿದೆ. ಇದೇ ಸಾಧನೆಯ ಸಿದ್ಧಿಗೆ ಪರಮ ರಹಸ್ಯದ ಸೂತ್ರವು ಆಗಿದೆ.**

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/154 – ಶ್ರೀ ಅರವಿಂದರು**

**ಆಂತರ್ಯದ ಮಾರ್ಗದರ್ಶಿ**

ಸಾಮಾನ್ಯವಾಗಿ ಚೈತನ್ಯವೇ ಜೀವಿಗೆ ಮಾರ್ಗದರ್ಶಿಯಾಗಿರುತ್ತದೆ. ಈ ವಿಷಯದ ಬಗೆಗೆ ಯಾರೊಬ್ಬರೂ ಅರಿತುಕೊಂಡಿಲ್ಲ. ಏಕೆಂದರೆ, ಅದರ ಅಸ್ತಿತ್ವದ ಬಗೆಗೆ ಅವರಿಗೆ ಅರಿವೇ ಇರುವದಿಲ್ಲ. ಆದರೂ 'ಅದೇ' ಆ 'ಜೀವಿ'ಯನ್ನು ಸದಾ ಮಾರ್ಗದರ್ಶನದ ಮೂಲಕವೇ ಕರೆದೊಯ್ಯುತ್ತಿರುತ್ತದೆ. ಒಂದು ವೇಳೆ ಓರ್ವನು ಅತ್ಯಂತ ಸಚೇನಯುಕ್ತವಾಗಿರುವಲ್ಲಿ, ಅವನು ಮಾತ್ರ ಈ ವಿಷಯದ ಬಗೆಗೆ

ಅರಿವನ್ನು ಪಡೆದುಕೊಳ್ಳುತ್ತಾನೆ. ಆದರೆ ಬಹುತೇಕವಾಗಿ ಜನರು ಈ ವಿಷಯವಾಗಿಯೂ ತಿಳುವಳಿಕೆಯನ್ನೇ ಹೊಂದಿಲ್ಲ. ಉದಾಹರಣೆಗೆ, ತಮ್ಮ ಬಾಹ್ಯ ಬದುಕಿನ ಅಹಂಭಾವದ ಅಜ್ಞಾನದಲ್ಲಿಯೇ ಅವರು ನಿರ್ಧರಣೆ ಮಾಡಿಕೊಂಡಾಗ, ಏನನ್ನಾದರೂ ಮಾಡಲೇಬೇಕೆಂದುಕೊಂಡಾಗ, ಅದರಲ್ಲೂ ಅವರ ಅಂತರಾತ್ಮವು ಅದನ್ನು ಮಾಡಲು ಸಮರ್ಥವಾಗಿದ್ದರೂ ಸಹಿತ, ಸುತ್ತಲಿನ ಎಲ್ಲ ವಾತಾವರಣವು ಸಹಿತ ಅಂತಹ ಕರ್ತವ್ಯವನ್ನು ನಿಭಾಯಿಸಲು ಪೂರ್ಣ ಸಹಕಾರಿಯಾಗಿದ್ದರೂ ಸಹಿತ, ಸುವ್ಯಸ್ಥಿತಗೊಳಿಸಲ್ಪಟ್ಟದ್ದರೂ ಸಹಿತ, ಆಗಲೂ ಕೇವಲ ಬೊಬ್ಬೆ ಹೊಡೆಯುವದನ್ನು ಮಾತ್ರ ಕ್ರೋಧದಿಂದ ಕುದಿಯುವದನ್ನು, ದೈವವು ಕಡು ಕೋಪದಿಂದ ಕೂಡಿದೆ ಎನ್ನುವ ಮನೋಭಾವದಿಂದ ಮತ್ತು ಪ್ರಕೃತಿಯೇ ಅತ್ಯಂತ ದುಷ್ಟತನದಿಂದ ಕೂಡಿದೆ ಎಂದೂ ಅಥವಾ ಗಮ್ಯವು ಭಯಾನಕವಾಗಿದೆ ಎಂತಲೂ, ಅಥವಾ ದೇವರೂ ಸಹಿತ ಅನ್ಯಾಯ ಎಸಗುತ್ತಿದ್ದಾನೆ ಎಂದು... ಹೇಳಿಕೊಳ್ಳುತ್ತಾ, ಒಟ್ಟಿನಲ್ಲಿ ಯಾವುದೇ ವಿಷಯವನ್ನೂ ಬಿಟ್ಟಿರುವದಿಲ್ಲ. ಇವೆಲ್ಲವೂ ಅವರವರ ವಿಶ್ವಾಸದ ಮೇಲೆಯೇ ಅವಲಂಭಿತವಾಗಿರುತ್ತವೆ.

ಅದೇ ಸಮಯದಲ್ಲಿ ಬಹುತೇಕವಾಗಿ, ಆ ಎಲ್ಲ ಸಮಯದಲ್ಲೂ ಸಹಿತ ಅವರ ಆಂತರಿಕ ವಿಕಸನಕ್ಕೆ–ಪ್ರಗತಿಗೆ – ಅತ್ಯಂತ ಸೂಕ್ತವಾದ ವಾತಾವರಣವನ್ನು ಒದಗಿಸುವ ಕ್ಷಣವೇ ಅಲ್ಲಿರುತ್ತದೆ. ಮತ್ತೆ ಸ್ವಾಭಾವಿಕವಾಗಿ, ಒಂದು ವೇಳೆ ನಿಮ್ಮ ಚೈತನ್ಯವನ್ನು ನಿಮಗೆ ಸಹಾಯ ಮಾಡುವ ಮೂಲಕ ಒಂದು ಸುಸಂಗತ ಜೀವನವನ್ನು ರೂಪಿಸಿಕೊಳ್ಳಲು ಸಹಾಯ ಮಾಡು ಎಂದು ಕೇಳಿಕೊಳ್ಳುವ ಮೂಲಕ, ಹಣ ಗಳಿಸುವ ಸಲುವಾಗಿ, ಸಂತಾನವನ್ನು ಪಡೆಯುವ ಸಲುವಾಗಿ, ಏಕೆಂದರೆ ಅವರೇ ವಂಶದ ಹೆಮ್ಮೆ ಎಂದು ನಂಬಿಕೊಂಡಿರುವದರಿಂದ, ಹಾಗೂ ಇಂತಹದೇ ಇತರ ವಿಷಯಗಳಿಗಾಗಿ ಕೇಳಿಕೊಂಡಲ್ಲಿ, ಆಗ ಖಂಡಿತವಾಗಿಯೂ ಆ ಚೈತ್ಯ ಪುರುಷನು ನಿಮಗೆ ಸಹಾಯವನ್ನು ಮಾಡುವದಿಲ್ಲ.

ಆದರೆ ಆ ಚೈತ್ಯ ಪುರುಷನು ನಿಮ್ಮಲ್ಲಿಯೇ ಕೆಲವು ಅವಶ್ಯವಿದ್ದ ಸಂದರ್ಭಗಳನ್ನು ಸೃಷ್ಟಿಸುತ್ತಾನೆ. ಆ ಮೂಲಕ ನಿಮ್ಮಲ್ಲಿಯೇ ಒಂದು ವಿಶೇಷ ಜಾಗೃತಿಯನ್ನು ತರುತ್ತಾನೆ. ಇದು ನಿಮ್ಮಂತರಂಗದ ಚಿತ್ತಿನಲ್ಲಿಯೇ ದೈವತ್ವವನ್ನು ಸಂಯೋಗಗೊಳಿಸುತ್ತದೆ. ಅದೇ ಅಲ್ಲಿನ ಅವಶ್ಯಕತೆಯೂ ಆಗಿರುತ್ತದೆ. ಆ ಸಂದರ್ಭಗಳಲ್ಲಿಯೇ ನೀವು ಅತ್ಯುತ್ತಮವಾದ ಯೋಜನೆಗಳನ್ನು ರೂಪಿಸುತ್ತೀರಿ. ಒಂದು ವೇಳೆ ಅವು ಯಶಸ್ವಿಯಾದಲ್ಲಿ, ನೀವು ಮತ್ತೆ ಮತ್ತೆ ಹೆಚ್ಚು ಹೆಚ್ಚು ನಿಮ್ಮ

ಬಾಹ್ಯದ ಘಟನಾವಳಿಗಳಲ್ಲಿ ಅಜ್ಞಾನದ ಕಾರಣದಿಂದಾಗಿ ಕಠಿಣಾತಿ ಕಠಿಣ ಘಟನೆಗಳನ್ನು ಎದುರಿಸುತ್ತೀರಿ. ನಿಮ್ಮ ಸ್ವಭಾವದ ಕ್ಷುದ್ರ ಮಹಾತ್ವಾಕಾಂಕ್ಷೆ ಹಾಗೂ ಗುರಿಯೇ ಇರದ ನಿಮ್ಮ ಕಾರ್ಯ ಚಟುವಟಿಕೆಗಳಲ್ಲಿ ಕಠಿಣ ಸಂದರ್ಭಗಳನ್ನು ಎದುರಿಸಬೇಕಾಗುತ್ತದೆ. ಒಂದೊಮ್ಮೆ ನೀವು ಸುಸಂಗತವಾದ ಆಘಾತವನ್ನು ಪಡೆದುಕೊಂಡಿದ್ದಲ್ಲಿ, ಆಗ ನೀವು ಮಾಡಿಕೊಂಡಿದ್ದ ವಾಂಛೆಯನ್ನು ತ್ಯಜಿಸಿ ತಿರಸ್ಕರಿಸಿದಲ್ಲಿ, ನೀವು ರೂಪಿಸಿಕೊಂಡಿದ್ದ ಯೋಜನೆಯ ವ್ಯತ್ಯಸ್ಥಗೊಂಡಿದ್ದಲ್ಲಿ, ಮತ್ತೆ ಮೇಲಾಗಿ, ನೀವು ನಿಮ್ಮಲ್ಲಿಯೇ ಕಂಡುಕೊಂಡಂತೆ ಸಂಪೂರ್ಣವಾಗಿ ವಿಫಲತೆಯಿಂದ ತಡೆಹಿಡಿಯಲ್ಪಟ್ಟಿದ್ದಲ್ಲಿ, ಅಂತಹ ಸ್ಥಿತಿಯಲ್ಲಿದ್ದಲ್ಲಿ, ಆ ನಿಮ್ಮ ಈ ಎಲ್ಲ ವಿರೋಧಗಳೇ ನಿಮಗೆ ನೈಜ ಪಥದ ಕಡೆಗೆ ಬಾಗಿಲನ್ನು ತೆರೆಯುತ್ತವೆ. ಅದೂ ಸತ್ಯದ ಕಡೆಗೇ ಬಾಗಿಲನ್ನು ತೆರೆಯುತ್ತದೆ. ಅದು ಘನವಾದ ಅನುಭವವನ್ನು ಕೊಡುವ ಸಲುವಾಗಿ, ನಿಮ್ಮನ್ನು ಮುಂದೆ ಕರೆದೊಯ್ಯಲು ಅವಕಾಶ ಒದಗಿಸಿಕೊಡುತ್ತದೆ. ಹೀಗಾಗಿ ನೀವು ಕೊಂಚವೇ ಜಾಗೃತರಾಗಿ ಸಾಗಿ ಬಂದ ಪಥವನ್ನು ಒಮ್ಮೆ ಪರಾಮರ್ಶಿಸಿದರೆ, ಒಂದು ವೇಳೆ ನೀವು ಪ್ರಾಮಾಣಿತೆಯ ಬಗೆಗೆ ಕಡಿಮೆ ಕಾಳಜಿ ಹೊಂದಿದ್ದಲ್ಲಿ, ಆಗ ನಿಮಗೆ ನೀವೇ ಹೇಳಿಕೊಳ್ಳುವದೇನೆಂದರೆ, 'ಓಹೋ! ಇದು ಈ ರೀತಿಯಲ್ಲಿ ಘಟಿಸುವದಕ್ಕೆ ನಾನು ಯಾವುದೇ ರೀತಿಯಲ್ಲಿ ಸರಿಯಾಗಿ ಇರುವುದು ಅಥವಾ ಬಿಡುವುದು ಸಂಬಂಧವೇ ಇಲ್ಲ, ಇದೆಲ್ಲವೂ ಪ್ರಕೃತಿಯ ಅಂಶ, ಅಥವಾ ದೈವೀ ಕೃಪೆ, ಅಥವಾ ನನ್ನ ಚೈತನ್ಯವೇ ಇದನ್ನೆಲ್ಲ ಮಾಡಿಸಿದೆ" ಎಂದೇ ಆಗಿರುತ್ತದೆ. ಹೌದು, ಇದು ನಿಜವಾಗಿಯೂ ಇವೆಲ್ಲವನ್ನೂ ಆ ಚೈತ್ಯ ಪುರುಷನೇ ಸುಸಂಘಟಿತಗೊಳಿಸಿರುತ್ತಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/393–94 – ಶ್ರೀಮಾತೆ**

**ಆಂತರ್ಯದ ಶೋಧಕ–ಜ್ಯೋತಿ**

ಇದರ ಪ್ರಮುಖ ಲಕ್ಷಣವೆಂದರೆ, ಆ ದಿವ್ಯತ್ವದ ಕಡೆಗೆ ಅಥವಾ ಆ ತುರೀಯದ ಕಡೆಗೆ ಉನ್ಮುಖೀಕರಣಗೊಳಿಸಿಕೊಂಡು ಸಾಗುವ ಏಕೈಕ ಗುರಿಯನ್ನು ಹೊಂದಿದೆ. ಇದು ಏಕಾಗ್ರ ಚಿತ್ತವಾಗಿದ್ದು ಮತ್ತು ಕ್ರಿಯೆಯಲ್ಲಿ ಮೃದು ಸ್ವಭಾವವನ್ನೂ ಜೊತೆಗೆ ಅದೇ ಭಾವದ ಸಂಚಲನವನ್ನೂ ಹೊಂದಿರುತ್ತದೆ. ಇದು ಯಾವುದೇ ಕಾರಣಕ್ಕೂ ಕೇವಲ ಒಂದೇ ಗುರಿಯನ್ನು ಹೊಂದಿದ, ಒಂದೇ ಗಮ್ಯದ ಬೌದ್ಧಿಕ ಶಕ್ತಿಯಲ್ಲಿಯೂ ಸಹಿತ, ಅಥವಾ ಧರ್ಮಾಂಧತೆಯ

ಪ್ರಾಧಾನ್ಯತೆಯನ್ನೇ ಆಶಿಸುವದನ್ನು ಹೊಂದಿರುವದಿಲ್ಲ. ಅಥವಾ ಈ ಪ್ರಾಣಿಕ ಶಕ್ತಿಯು ಏಕಮುಖೀ ಆವೇಶವನ್ನೂ ಹೊಂದಿರುವದಿಲ್ಲ. ಪ್ರತಿಯೊಂದು ಕ್ಷಣವೂ ಸಹಿತ ಕೋಮಲ ಭಾವದ ಖಚಿತತೆಯನ್ನೇ ಹೊಂದಿರುತ್ತದೆ. ಏಕೆಂದರೆ ಅದು ಪರಮ ಸತ್ಯದ(ಋತದ) ಕಡೆಗೆ ಗುರಿಯನ್ನು ಹೊಂದಿರುತ್ತದೆ. ಹೀಗಾಗಿ ತಂತಾನೇ ಅದುವು ತಪ್ಪುಗಳಿಂದ ದೂರವಾಗಿಯೇ ಇದ್ದು, ಸೂಕ್ತವಾದ ಪಥದಲ್ಲಿಯೇ ಸಾಗುವಲ್ಲಿ ತನ್ನನ್ನು ತಾನೇ ಸಂಪೂರ್ಣವಾಗಿ ಬೇರೆಯಾಗಿಯೇ ಗುರುತಿಸಿಕೊಂಡು, ದಿವ್ಯತೆಯನ್ನು ಅಭಿವ್ಯಕ್ತಗೊಳಿಸುತ್ತದೆ. ಅಥವಾ ಆ ದೈವದ ಎಡೆಗೆ ಸಾಗುವ ಸಂಚಲನವನ್ನು ಅಂದರೆ ದೈವಿಕವಲ್ಲದ ಘಟನೆಗಳಲ್ಲಿ ಅಂಟಿಕೊಂಡು ಜೋಲುತ್ತಿರುವ ಸ್ಥಿತಿಯಿಂದ ಮುಕ್ತವಾಗಿ, ಆ ದೈವತ್ವದ ಕಡೆಗೆ ಚಲಿಸುತ್ತದೆ. ಇದರ ಕ್ರಿಯೆಗಳೆಲ್ಲವೂ ಶೋಧಕದ ರೂಪದಲ್ಲಿಯೇ ಇದ್ದು, ಯಾವಾಗಲೂ ಸ್ವಭಾವದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಅಭಿವ್ಯಕ್ತಗೊಳಿಸುತ್ತಾ ಸಾಗುತ್ತದೆ. ಇದರ ಆಂತರ್ಯದಲ್ಲಿ ಸಮರ್ಥನೀಯವಾಗಿರುವ ಇಚ್ಛೆಯೂ ಇದೇ ಆಗಿದೆ.

ಈ ಇಚ್ಛೆಯು ಪರಿಪೂರ್ಣತೆಯನ್ನು ಹೊಂದುವದಕ್ಕಾಗಿಯೇ ಇರುತ್ತದೆ. ಅದೂ ಈ ಸರ್ವ ವಿಷಯದ ಆಂತರ್ಯದಲ್ಲಿ ಹಾಗೂ ಬಾಹ್ಯದಲ್ಲಿ ರಸ ವಿದ್ಯಾತ್ಮಕ ರೂಪಾಂತರಣವನ್ನು ಪಡೆಯುವದಾಗಿರುತ್ತದೆ. ಇದು ಎಲ್ಲೆಡೆಗೂ ಆ ದಿವ್ಯ–ಸಾರವನ್ನೇ ಕಾಣುತ್ತದೆ. ಜೊತೆಗೆ ಕೇವಲ ಆಚ್ಛಾದಗೊಂಡಿರುವದನ್ನು, ಅಗೋಚರವಾಗಿರುವ ಆಕೃತಿಗಳನ್ನು ತಿರಸ್ಕರಿಸುತ್ತದೆ. ಇದು ಪರಮ ಸತ್ಯವಾಗಿಯೇ ಇಚ್ಛೆಯ ಮೇಲೆ ಹಾಗೂ ಸಾಮರ್ಥ್ಯದ ಮೇಲೆ ಪ್ರಭಾವ ಬೀರುತ್ತ ಆ ವಿಷಯದಲ್ಲಿ ಪ್ರಭುತ್ವವನ್ನು ಪಡೆದುಕೊಳ್ಳಲು ಮಾರ್ಗದರ್ಶಿಯಾಗಿರುತ್ತದೆ. ಸಂತೋಷದಲ್ಲಿ, ಪ್ರೇಮದಲ್ಲಿ, ಸೌಂದರ್ಯದಲ್ಲಿ ಇದು ಈ ರೀತಿಯ ಕ್ರಿಯೆಯಲ್ಲಿ ತೊಡಗಿಕೊಳ್ಳುತ್ತದೆ. ಆದರೆ ಶಾಶ್ವತ ಜ್ಞಾನದ ಪರಮ ಸತ್ಯದ ವಿಷಯದಲ್ಲಿ ಇದು ಈ ರೀತಿಯಾಗಿ ಸಹಕಾರಿಯಾಗಿರುತ್ತದೆ. ಆದರೆ ಜ್ಞಾನವನ್ನು ಕಡೆಗಣಿಸಿಕೊಂಡು ಕೇವಲ ಅಜ್ಞಾನದ ಪ್ರಭಾವದಲ್ಲಿಯೇ ಇರುವ ವ್ಯಾವಹಾರಿಕ ಕ್ಷಣಿಕ ಸತ್ಯಗಳ ಮೂಲಕವೇ ಬರುವ ಆಂತರ್ಯದ ತೋಷಗಳನ್ನು ಮತ್ತು ಅವು ಆ ಶಾಶ್ವತವಾದ ವ್ಯಾಪ್ತ ತೋಷವನ್ನು ಕೊಡದೇ ಇರುವದನ್ನೂ ಕಂಡುಕೊಂಡೂ ಹಾಗೇ ಸಾಗುವ ಹಂತವಿದ್ದಲ್ಲಿ, ಅದು ಯಾವಾಗಲೂ ಪರಿಶುದ್ಧಗೊಳ್ಳುವದರ ಸಲುವಾಗಿಯೇ ತಾಪಗೊಳ್ಳುವದಕ್ಕಿಂತ, ಸಂತೃಪ್ತಿಯ ಹಂತವನ್ನು ನಗಣ್ಯಗೊಳಿಸುವ ಸಲುವಾಗಿ ಮೂಲಕ ದುಃಖಪಡುವದನ್ನೇ ಹೆಚ್ಚಾಗಿ ಆಶಿಸುತ್ತದೆ. ಇದು

ಪ್ರೇಮಪೂರಿತವಾದ ರೆಕ್ಕೆಗಳನ್ನು ಹೊಂದಿದ್ದು, ಅವು ಸದಾ ಊರ್ಧ್ವಗಾಮಿ–ಯಾಗಿರುವದರ ಕಡೆಗೆ ಮತ್ತು ಎಂದಿಗೂ ಅಹಂಕಾರದಿಂದ ರೂಪಿಸಿಲ್ಪಡುವ ಘಟನೆಗಳಿಗೆ ಕಟ್ಟಿ ಹಾಕಲ್ಪಡದಂತೆ ಇರುತ್ತದೆ. ಜೊತೆಗೆ ಇದರ ಪಾದಗಳು ಎಂದಿಗೂ ರಾಡಿಯಲ್ಲಿ ಸಿಲುಕಿಕೊಳ್ಳದೇ ಇರುತ್ತವೆ. ಶಾಶ್ವತದ ಅಭಿವ್ಯಕ್ತಿಗಾಗಿ ಸದಾ ಮಾರ್ಗದರ್ಶಿಯಾಗಿರುವ ಮುಂದಾಳ್ತನದ ಸೌಂದರ್ಯವನ್ನೂ ಪುನರ್–ಪ್ರತಿಷ್ಠಾಪಿಸಿದಂತೆ, ಸಾಮರ್ಥ್ಯದ ಮೇಲೆ, ಇಚ್ಛೆಯ ಮೇಲೆ ಹಾಗೂ ಉಪಕರಣಗಳ(ಸಾಧನಗಳ) ಬಗೆಗೆ ಪ್ರಭುತ್ವವನ್ನು ಅಹಂಕಾರ ರಹಿತವಾಗಿ ಹೊಂದುವದನ್ನು ಇಚ್ಛಿಸುತ್ತದೆ. ಆದರೆ, ಆ ದಿವ್ಯತ್ವದ ಜೊತೆಗೆ ಮಾತ್ರ ಸದಾ ಆ ಸಂವಹನ ಹೊಂದುವದನ್ನೂ ಇಚ್ಛಿಸುತ್ತದೆ. ಇದರ ಇಚ್ಛೆಯು ಜೀವನದ ವಿಭಾಗೀಕರಣ, ಪರಮ ಸತ್ಯದ ಕಡೆಗೆ ಅದರ ಮೂಲಕವೇ ಅಭಿವ್ಯಕ್ತಗೊಳ್ಳುವಿಕೆ, ಆ ಪರಮ ದೈವ ಮತ್ತು ಶಾಶ್ವತಕ್ಕೆ ಸದಾ ಸಮರ್ಪಣಾ ಭಾವವನ್ನು ಹೊಂದಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/155 – ಶ್ರೀ ಅರವಿಂದರು**

**ದಿವ್ಯತೆಯತ್ತ ತೀವ್ರ ತುಡಿತ**

ಚೈತ್ಯದ ಅತ್ಯಂತ ಸುಪರಿಚಿತವಾಗಿರುವ ಲಕ್ಷಣವೆಂದರೆ– ಪವಿತ್ರವಾದ ಪ್ರೇಮ, ಆನಂದ ಹಾಗೂ ಐಕ್ಯತೆಯ ಕಡೆಗೆ ಸದಾ ತೀವ್ರವಾದ ತುಡಿತವನ್ನು ಹೊಂದುವದಾಗಿರುತ್ತದೆ. ಇದು ಆಶಿಸುತ್ತಿರುವ ಪ್ರೇಮವನ್ನು, ಅದೂ ದೈವೀ ಪ್ರೇಮವೇ ಆಗಿದ್ದು, ಅದು ಸದಾ ಅದರ ಪ್ರೇರಣೆಯೇ ಆಗಿರುತ್ತದೆ. ಅದರ ಗಮ್ಯವೂ ಸಹಿತ ಅದೇ ಆಗಿರುತ್ತದೆ. ಅದರ ಕಾಂತಿಮಯ ಕಿರಣಗಳಲ್ಲಿ ಪ್ರಜ್ವಲಿಸುತ್ತಿರುವ ಹೃದ್ಗುಹೆಯ ಊರ್ಧ್ವದಲ್ಲಿ ಬೆಳಗುತ್ತಿರುವ ಪ್ರವರ್ಧಮಾನವಾಗಿರುವ ನಕ್ಷತ್ರವೊಂದು ಅಥವಾ ಇನ್ನೂ ಸುಸ್ಪಷ್ಟಗೊಳದ ಶೈಶವಾವಸ್ಥೆಯಲ್ಲಿ ತೊಟ್ಟಿಲೊಳಗೇ ಇರುವ ಪರಮದೇವನು ನಮ್ಮೊಡನೆ ಇರುವ ದೇವನಾಗಿದ್ದಾನೆ.

ಇದರ ಪ್ರಪ್ರಥಮ ಹಂತದ ಸುದೀರ್ಘವಾದ ಪ್ರಗತಿಯಲ್ಲಿನ ಹಾಗೂ ಪರಿಪಕ್ವಗೊಳುವ ಅಸ್ತಿತ್ವದಿಂದಾಗಿ, ಅದು ಈ ಮೃಣ್ಮಯದ ಬದುಕಿನ ಪ್ರೇಮಕ್ಕೆ, ವಾತ್ಸಲ್ಯಕ್ಕೆ, ಮೃದುತ್ವಕ್ಕೆ, ಪ್ರಸನ್ನತೆಗೆ(ಸದ್ಭಾವನೆಗೆ), ಔದಾರ್ಯಕ್ಕೆ, ಎಲ್ಲ ಸೌಂದರ್ಯ ಹಾಗೂ ದಯಾಪರತೆಗೆ ಮತ್ತೂ ಉತ್ಕೃಷ್ಟ ಸೂಕ್ಷ್ಮತೆಗೆ, ಜೊತೆಗೆ ಪ್ರಕಾಶಕ್ಕೆ, ಸಾಮರ್ಥ್ಯಕ್ಕೆ, ಸ್ಥೈರ್ಯಕ್ಕೆ.. ಒಟ್ಟಿನಲ್ಲಿ ಎಲ್ಲ ಕಡೆಗೂ ಅದು

ಸಹಾಯಕವಾಗಿದ್ದು, ಇವೆಲ್ಲವೂ ಮಾನವನ ಸ್ವಭಾವವನ್ನು ಪರಿಶುದ್ಧಗೊಳಿಸಿ ಏಕತ್ರವಾಗುವಂತೆ ಮಾಡುತ್ತವೆ. ಘನತೆಯನ್ನು ಪಡೆಯುವಂತೆ ರೂಪಿಸುತ್ತವೆ. ಸರ್ವ ಸಮಾನತೆಯನ್ನು ರೂಪಿಸುತ್ತವೆ.

ಆದರೆ ಇಲ್ಲಿ ಮಾನವನ ಚಟುವಟಿಕೆಗಳು, ಸಂಚಲನಗಳು ಅವುಗಳ ಅತ್ಯತ್ತಮವಾದ ಹಂತದಲ್ಲಿಯೇ ಹೇಗೆ ಸಂಯೋಜನೆಗೊಳಿಸಲ್ಪಡಬೇಕು ಎನ್ನುವದನ್ನು ಹಾಗೂ ಅವುಗಳ ಅತ್ಯಂತ ಕೆಟ್ಟ ನಡವಳಿಕೆಯಿಂದ, ಅಹಂಕಾರದ ಮುದ್ರೆಯೊಂದಿಗೆ ಮತ್ತು ಸ್ವಯಂ–ವಂಚನೆಗೊಳಿಸಲ್ಪಡುವ ಭಾವುಕತೆಯ ಕಪಟತನದಿಂದ ಹಾಗೂ ಸ್ವಯಂ–ಲಾಭಕ್ಕಾಗಿ ಮಾತ್ರವೇ ಅದೂ ಅಲ್ಪ ತೃಪ್ತಿಯ ಹಂತಕ್ಕಾಗಿ ಆತ್ಮದ ನಡವಳಿಕೆಯನ್ನು ಕೇವಲ ಮಿಥ್ಯಾನುಕರಣೆಯಲ್ಲಿ ನಡೆಸುತ್ತಿರುವದರಿಂದ ಹೇಗೆ ಪತನಗೊಳ್ಳುತ್ತದೆ ಎನ್ನುವದನ್ನೂ ಅರಿತುಕೊಂಡಿರುತ್ತದೆ.

ಒಂದೊಮ್ಮೆ ಅದು ಉದಯೋನ್ಮುಖವಾಗುತ್ತಿರುವಲ್ಲಿ, ಅದಕ್ಕಿಂತ ಮೊದಲಿಗೇ ಅಸ್ತಿತ್ವದಲ್ಲಿರುವ ಎಲ್ಲ ಪುರಾತನ ಬಂಧ(ನ)ಗಳನ್ನು ಮುರಿಯಲೂ ಸಿದ್ಧಗೊಂಡಿರುತ್ತದೆ. ಅದೇ ರೀತಿಯಲ್ಲಿ ಅಪರಿಪೂರ್ಣವಾದ ಭಾವನಾತ್ಮಕ ಚಟುವಟಿಕೆಗಳನ್ನು ಸಹಿತ ಮುರಿಯಲು ಸಿದ್ಧಗೊಂಡಿರುತ್ತದೆ. ಅಷ್ಟೇ ಅಲ್ಲದೇ ಅವುಗಳ ಬದಲಿಗೆ – ಪರ್ಯಾಯವಾಗಿ – ಪ್ರೇಮದ ಅಧ್ಯಾತ್ಮಿಕ ಸತ್ಯವೊಂದನ್ನು ಹಾಗೂ ಐಕ್ಯತೆಯನ್ನು ಅಲ್ಲಿ ಪ್ರತಿಷ್ಠಾಪಿಸುತ್ತದೆ. ಅದು ಈಗಲೂ ಸಹಿತ ಮಾನವ ರೂಪಗಳನ್ನು ಮತ್ತು ಸಂಚಲನವನ್ನು ಸ್ವೀಕರಿಸುವದು. ಆದರೆ, ಆ ಎಲ್ಲ ರೂಪಗಳು–ಸಂಚಲನಗಳು “ಏಕತ್ವದ” ಕಡೆಗೆ ಸಾಗುತ್ತಿರುವ ಹಾಗೆ ಇದ್ದಲ್ಲಿ ಮಾತ್ರ ಅದನ್ನು ಸಮ್ಮತಿಸುವದು.

ಸದಾ ಸಹಾಯಕವಾಗಿರುವ ಬಂಧಗಳನ್ನು ಮಾತ್ರ ಇದು ಜೋಡಿಸುತ್ತದೆ. ಅಂದರೆ ಮನಸ್ಸು ಮತ್ತು ಹೃದಯವು ಗುರುವಿಗಾಗಿ ತುಡಿಯುತ್ತಿರುವಂತೆ, ದೇವರನ್ನು ದರ್ಶಿಸುವ ಬಯಸುವ ಸಂಯೋಗಗೊಂಡ ಸಮೂಹದಂತೆ, ಅಜ್ಞಾನದಲ್ಲಿ ಸಿಲುಕಿರುವ ಮನುಕುಲದ ಹಾಗೂ ಪ್ರಾಣಿ ಜಗತ್ತಿನ, ಜನ ಸಮುದಾಯದ ಕುರಿತು ಆಧ್ಯಾತ್ಮಿಕ ನೆಲೆಯ ದಯಾಪರತೆಯಿಂದ, ತೋಷದಿಂದ, ಮತ್ತು ಆನಂದದಿಂದ ಹಾಗೂ ಆ ಚಿತ್–ಸೌಂದರ್ಯದ ತೃಪ್ತಿಯಿಂದ ಅದು ಆ ದೈವೀ ನೆಲೆಯನ್ನು ಎಲ್ಲೆಡೆಗೂ ಕಾಣುವ ದೃಷ್ಟಿಕೋನವು ಲಭ್ಯವಾಗುತ್ತದೆ. ಇದು ಅಂತರ್ಮುಖವಾಗಿ ಧುಮುಕುವದರ ಮೂಲಕ ಹೃದಯದ ಗೂಢ ಕೇಂದ್ರಗಳಲ್ಲಿ

ನಿರಂತರವಾಗಿಯೇ ನೆಲೆಸಿರುವ ಆ ದೈವೀ ನೆಲೆಯ ಜೊತೆಯಲ್ಲಿಯೇ ವಿಲೀನಗೊಳ್ಳುವದಕ್ಕೆ ಸಿದ್ಧವಿರುತ್ತದೆ. ಏಕೆಂದರೆ ಅಲ್ಲಿಂದ ಸದಾ ಕರೆಯೊಂದು ಇದ್ದೇ ಇರುತ್ತದೆ. ಇಲ್ಲಿಗೆ ಆಗಮಿಸಲು ಯಾವುದೇ 'ಅಹಂ' ಇರಬಾರದು. ಯಾವುದೇ ಮೇಲ್ತೋರಿಕೆಯ ಪರಹಿತ ಚಿಂತನೆಯ ಆಕರ್ಷಣೆ ಇರದೇ, ಅಥವಾ ಅದೇ ತೆರನಾದ ಕರ್ತವ್ಯದ ಲೋಕೋಪಕಾರದಲ್ಲಿ ಅಥವಾ ಸೇವೆಯಲ್ಲಿ ತೊಡಗಿದ್ದರೆ, ಆಗ ಆ ಪವಿತ್ರತೆಯ ಜೊತೆಗೆ ಸಂಯುಜ್ಯಗೊಳುವ ಪಥದಿಂದ ವಿಚಲನೆ ಹೊಂದಬೇಕಾಗುತ್ತದೆ. ಅದು ಅಂತರ್ಗತವಾಗಿಯೇ ಇರುವ ದಿವ್ಯತ್ವಕ್ಕೆ ವಿಧೇಯನಾಗಿರಬೇಕಾಗುತ್ತದೆ. ಇದು ಜೀವಿಯನ್ನು ತುರೀಯಾವಸ್ಥೆಯಲ್ಲಿರುವ ಪರಮಾನಂದದ ನೆಲೆಗೆ ಮತ್ತು ಅಧೋಮುಖವಾಗಿ ತಳ್ಳಲ್ಪಡುತ್ತಿರುವ ಜಗತ್ತಿನ ಘಟನೆಗಳನ್ನು ತನ್ನ ರೆಕ್ಕೆಯ ಮೂಲಕ ಆಧಾರಗೊಳಿಸಿ, ಬೀಳದಂತೆ ತಡೆ ಹಿಡಿದು ರಕ್ಷಿಸುತ್ತದೆ. ಹಾಗೂ ಆ ಊರ್ಧ್ವಾತಿ ಊರ್ಧ್ವದ ನೆಲೆಯ ಆ "ಏಕತ್ವ"ದ ಕಡೆಗೆ ಆರೋಹಣಗೊಳಿಸುತ್ತದೆ. ಆದರೆ ಇದು ತುರೀಯಾವಸ್ಥೆಯಲ್ಲಿರುವ ಪ್ರೇಮವನ್ನು ಹಾಗೂ ಪರಮ ಸುಖವನ್ನು ಒದಗಿಸಿ ಮತ್ತೆ ಈ ದ್ವೇಷಮಯ ಜಗತ್ತನ್ನು ಮತ್ತೆ ಸಂಘರ್ಷಗಳನ್ನು, ವಿಭಜನೆಯನ್ನು ಹಾಗೂ ತಮವನ್ನು, ಅಜ್ಞಾನದಿಂದ ಉಲ್ಬಣಗೊಂಡಿರುವ ವಿವಾದಗಳನ್ನು ಸುವ್ಯವಸ್ಥಿತವಾಗಿ ರೂಪಾಂತರಿಸುತ್ತದೆ. ಇದು ವಿಶ್ವ ಪ್ರೇಮದ ದೈವತ್ವವನ್ನು ಉದಿತಗೊಳಿಸುತ್ತದೆ. ಒಂದು ಸುವಿಶಾಲ ವ್ಯಾಪ್ತ ಸಹಾನುಭೂತಿಯನ್ನು, ಅಧಿಕಾಧಿಕವಾಗಿರುವ ಇಚ್ಛಾಶಕ್ತಿಯನ್ನು ಅದರ ಸುಗುಣತ್ವವನ್ನು ಎಲ್ಲೆಡೆಗೂ ಅನುಷ್ಠಾನಗೊಳಿಸುವಂತೆ, ಆ ವಿಶ್ವಮಾತೆಯ ವಾತ್ಸಲ್ಯಪೂರ್ಣ ಅಪ್ಪುಗೆಯಂತೆ ಅಥವಾ ಎಲ್ಲ ಮಕ್ಕಳೂ ಅವಳ ಹತ್ತಿರ ಒಗ್ಗೂಡಿದಂತೆ, ಈ ದಿವ್ಯಾನುಭೂತಿಯು ಕತ್ತಲೆಯನ್ನು ತೊಡೆದು ಹಾಕಿ, ಜಗತ್ತಿನಲ್ಲಿರುವ ವೈಶ್ವಿಕವಾಗಿರುವ ಅಪ್ರಜ್ಞಾವಸ್ಥೆಯನ್ನೂ ಹೋಗಲಾಡಿಸಲು ಧುಮುಕಿಕೊಂಡು ಆಗಮಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/155–56 – ಶ್ರೀ ಅರವಿಂದರು**

**ಆತ್ಮದ ಕರೆ**

ಸಾಮಾನ್ಯ ಚೇತನವು (ಪ್ರಜ್ಞೆಯು) ಒಂದು ಧಾರ್ಮಿಕ ಧ್ವನಿಯಾಗಿರುತ್ತದೆ; ಅದು ಒಂದು ನೈತಿಕ ಕರೆಯೂ ಆಗಿದ್ದು, ಅದು ಶಿಷ್ಟ ಹಾಗೂ ದುಷ್ಟತನವನ್ನು ಪ್ರತ್ಯೇಕಿಸಿ ಕೇವಲ ಒಳ್ಳೆಯದನ್ನೇ ಕೈಗೊಳ್ಳುವ ಹಾಗೆ ನಮ್ಮಲ್ಲಿ ಧೈರ್ಯ

ತುಂಬುತ್ತದೆ. ಜೊತೆಗೆ ಅದು ದುಷ್ಟತನವನ್ನೂ ನಿಷೇಧಿಸುವಂತೆ ಮಾಡುತ್ತದೆ. ಸಾಮಾನ್ಯ ಜೀವನಕ್ಕೆ ಈ ರೀತಿಯ ಕರೆ ಅತ್ಯಂತ ಅವಶ್ಯಕವಾಗಿದೆ. ಓರ್ವನು ತನ್ನ ಚೈತ್ಯ ಪುರುಷನ ಅಸ್ತಿತ್ವದ ಬಗೆಗೆ ಪ್ರಜ್ಞೆಯನ್ನು ಪಡೆದುಕೊಳ್ಳುವದು ಅತ್ಯಂತ ಅವಶ್ಯಕವಾಗಿದೆ. ಈ ಚೈತ್ಯ ಪುರುಷನ ನಿರ್ದೇಶನದಂತೆಯೇ ಮಾರ್ಗದರ್ಶನ–ದಂತೆಯೇ ಮುನ್ನಡೆಯಲು ಸಿದ್ಧಗೊಳ್ಳಬೇಕಾಗುತ್ತದೆ. ಇದನ್ನೇ ಮತ್ತೊಂದು ಆಯಾಮದಲ್ಲಿ ನೋಡಿದಲ್ಲಿ, ಸಾಮಾನ್ಯ ಮಾನವ ಜೀವನದ ಹಂತದಿಂದ ಊರ್ಧ್ವಮುಖಿಯಾಗಿ ಆರೋಹಣ ಮಾಡಲು, ತನ್ನನ್ನು ತಾನೇ ತನ್ನಿಂದ ಮುಕ್ತಗೊಳಿಸಿಕೊಳ್ಳಲು, ಅದರಲ್ಲೂ ಅಹಂಕಾರದಿಂದ ಮುಕ್ತಗೊಳ್ಳಲು ಹಾಗೂ ಆ ದೈವೀ ಇಚ್ಛೆಯ ಪ್ರಜ್ಞಾಪೂರ್ಣವಾದ ಸಾಧನವಾಗಿರುವಂತೆ ಪರಿವರ್ತನಗೊಳ್ಳುವದು ಅವಶ್ಯಕವಾಗಿರುತ್ತದೆ. ಆತ್ಮವೂ ಸಹಿತ ಈ ದೈವತ್ವದ ಅಂಶವೇ ಆಗಿದ್ದು, ಇದೂ ಈ ನೈತಿಕ ಮತ್ತು ಧಾರ್ಮಿಕ ಭಾವನೆಗಳಿಂದಾಗಿ ಔನ್ನತ್ಯದಲ್ಲಿಯೇ ಇರುತ್ತದೆ. ಆ ದೈವೀ ಪ್ರಕಾಶದಲ್ಲಿ ಅದು ಅಭಿಷೇಕಗೊಳ್ಳುತ್ತಿರುತ್ತದೆ. ಆದರೆ ಅತೀ ಮುಖ್ಯ ಸಂಗತಿ ಎಂದರೆ, ಯಾವಾಗ 'ಅಹಂ'ಕಾರವು ಸಂಪೂರ್ಣವಾಗಿ ಕರಗಿ ಹೋಗುವದೋ ಆಗ ಮಾತ್ರ ಇದು ಇಡೀ ಜೀವನವನ್ನು – ಜಗತ್ತನ್ನು ನಿಯಂತ್ರಿತಗೊಳಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/248 – ಶ್ರೀಮಾತೆ**

## ಚೈತ್ಯ ಪುರುಷ ಮತ್ತು ಗುರು

ಹಾಗಾದರೆ, ಗುರು ಏನನ್ನು ಮಾಡಬಲ್ಲ? ಏನನ್ನು ಸಂಯೋಗಗೊಳಿಸಬಲ್ಲ? ಅವನು ಕೇವಲ ಒಂದು "ಕೊಂಡಿ" ಮಾತ್ರ ಆಗಿದ್ದಾನೆ. "ಅದು" ಕೇವಲ ಗುರುವಿನ ಶಕ್ತಿ ಮಾತ್ರ ಆಗಿರುವದಿಲ್ಲ. ಏಕೆಂದರೆ ಆ "ಶಕ್ತಿ" ಕೇವಲ ಅವನದಲ್ಲವೇ ಅಲ್ಲ. ಆದರೆ ಅದು ತನ್ನದೇ ಎಂದು ಅವನು ಭಾವಿಸಿಕೊಂಡಿರುತ್ತಾನೆ. ಆದರೆ ವಾಸ್ತವವು ಹಾಗೆ ಇರುವದೇ ಇಲ್ಲ. ಹೀಗಾಗಿಯೇ ಅವನು ಕೇವಲ ಜೋಡಣಾ ಕೊಂಡಿಯಂತೆ ಇರುತ್ತಾನೆ. ಅವನು ಆ 'ಶಕ್ತಿ'ಯೊಡನೆ ನಿಮ್ಮನ್ನು ಸಂಪರ್ಕಕ್ಕೆ ತರುತ್ತಾನೆ ಅಷ್ಟೇ. ಇಂತಹ ಸಂಬಂಧವನ್ನು ನೀವು ಗುರುವಿನ ಸಹಾಯವಿಲ್ಲದೇ ಪಡೆಯಲಾರಿರಿ. ಆದರೆ ಯಾರಿಗೆ ಯಾವುದೇ ಗುರುವಿನ ಅವಶ್ಯಕತೆ ಇರುವದಿಲ್ಲವೋ ಅವರು ನೇರವಾಗಿ ಆ 'ಸಂಬಂಧ'ವನ್ನು ಪಡೆಯಬಲ್ಲರು. ಹೀಗಾಗಿ ಅದನ್ನು ತನ್ನ ಜೇಬಿನಿಂದ ತೆರೆದು ತೋರುವ ಘಟನೆ ಇದಾಗಿರುವದಿಲ್ಲ.

ಘಟನೆಯೂ ಇದಲ್ಲ! ಏಕೆಂದರೆ ಅದು ಆ ರೀತಿಯಲ್ಲಿ ಇರುವದೇ ಇಲ್ಲ. ಆದರೆ ಸಾಮಾನ್ಯವಾಗಿ ಆ ಸಂಬಂಧವನ್ನು ಹೊಂದಲು ಬೇಕಾದ ಶಕ್ತಿಯನ್ನು ಪಡೆದುಕೊಳ್ಳಲು, ಅದರೊಡನೆ ಸಂಪರ್ಕ ಸಾಧಿಸಲು ಓರ್ವ ಗುರುವಿನ ಅವಶ್ಯಕತೆ ಇರುತ್ತದೆ.

ಅಂತಿಮವಾಗಿ, ಇದು ಚೈತನ್ಯಕ್ಕೆ ಸಂಬಂಧಿಸಿದ ಪ್ರಶ್ನೆಯಾಗಿದೆ. ಜನರು ಸಾಮಾನ್ಯವಾಗಿ ಕೇವಲ ಒಂದು ಹಂತದ ವರೆಗೂ ಸಾಧಿಸಲ್ಪಡಬಹುದಾದ ಚೇತವನ್ನು ಮಾತ್ರ ಹೊಂದಿರುತ್ತಾರೆ. (ಆದರೆ ಅದೇನೂ ಅಷ್ಟೊಂದು ದೂರದಲ್ಲಿರುವ ಹಂತವಾಗಿರುವದಿಲ್ಲ), ಆದರೆ, ಅದರಾಚೆಗೂ ಆಚೆ ಆಚೆ ಇರುವ ಅದೂ ಸಾಮಾನ್ಯವಾಗಿ ಜನಸಾಮಾನ್ಯರಿಂದ ದೂರವಾಗಿಯೇ ಇರುವ ಹಾಗೂ ಸುಪ್ತಾವಸ್ಥೆಯಲ್ಲಿರುವ (ಆದರೆ ಅದು ಮೂಲತಃ ಪ್ರಜ್ಞಾವಸ್ಥೆಯಲ್ಲಿಯೇ ಇರುತ್ತದೆ) ಹಾಗೆ ತೋರುತ್ತದೆ. ಅವರು ಅದರೊಡನೆ ಸಂಪರ್ಕ ಸಾಧಿಸಲು ಸಾಧ್ಯವಾಗದ ಕಾರಣದಿಂದಾಗಿ ಮಾತ್ರ ಅದು ಸುಪ್ತಾವಸ್ಥೆಯಲ್ಲಿ ಇದ್ದಂತೆ ಅವರಿಗೆ ತೋರುತ್ತದೆ.

ನೀವು ರಾತ್ರಿ ಸಮಯದಲ್ಲಿ ಮಲಗಿದ್ದರೂ ಸಹಿತ ಮತ್ತೊಂದು ಅವಸ್ಥೆಯಲ್ಲಿ – ಅಂದರೆ ಸ್ವಪ್ನಾವಸ್ಥೆಯಲ್ಲಿ – ಜಾಗೃತರಾಗಿರುತ್ತೀರಿ. ಅಂದರೆ ಕನಸಿನ ಸ್ಥಿತಿಯಲ್ಲಿ ನೀವು ಜಾಗೃತರಾಗಿದ್ದಾಗ, ನಿಮಗೆ ವಾಸ್ತವದಲ್ಲಿ ಇದ್ದಂತೆಯೇ ಅನುಭವ–ವಾಗುತ್ತಿರುತ್ತದೆ. ಅದನ್ನೇ ನೆನಪಿನಲ್ಲಿ ಇಟ್ಟುಕೊಂಡಿರುವದನ್ನು 'ಸ್ವಪ್ನಾವಸ್ಥೆ'ಯೆಂದು ಕರೆಯುತ್ತಾರೆ. (ಯಾವುದನ್ನು ಸ್ವಪ್ನಾವಸ್ಥೆಯೆಂದು ಕರೆಯಲಾಗುತ್ತಿದೆಯೋ ಅದು ನಿದ್ರಾವಸ್ಥೆಯಲ್ಲಿಯೇ ಕಂಡ ಅನುಭವವಾಗಿರುತ್ತದೆ). ತದನಂತರದಲ್ಲಿ, ನಿದ್ರೆಯಿಂದ ಎಚ್ಚೆತ್ತುಕೊಂಡ ನಂತರ, ಮತ್ತೆ ಸಾಮಾನ್ಯ ಪ್ರಜ್ಞಾವಸ್ಥೆಗೆ ಬಂದಿರುತ್ತೀರಿ. ಆದರೆ ಎರಡೂ ಪ್ರಜ್ಞಾಸ್ತರಗಳ ಜೊತೆಗೆ ಏಕಕಾಲಕ್ಕೆ ಸಂಪರ್ಕ ಸಾಧಿಸಲು ಸಾಧ್ಯವಿಲ್ಲ. ಏಕೆಂದರೆ ಅವುಗಳ ಮಧ್ಯೆ ಸಂಪರ್ಕವೇ ಇರುವದಿಲ್ಲ. ಹೀಗಾಗಿ ಅವುಗಳನ್ನು ಜೋಡಿಸಲೂ ಸಾಧ್ಯವಿಲ್ಲ. ಆದರೆ ವಿಧಿಪೂರ್ವಕವಾದ ವಿಕಸನಾವೀಧಾನಗಳ ಮೂಲಕ, ನೀವು ನಿಮ್ಮ ಪ್ರಜ್ಞೆಯನ್ನು(ಚೇತನವನ್ನು) ವಿಕಾಸಗೊಳಿಸಿಕೊಳ್ಳಬಹುದು. ಸಂಪರ್ಕವನ್ನೂ ಸಾಧಿಸಬಹುದು. ಯವ ಕ್ಷಣದಲ್ಲಿ ಈ ಸಂಪರ್ಕವು ಸಾಧ್ಯವಾಗುತ್ತದೆಯೊ, ಆ ಕ್ಷಣದಿಂದಲೇ ಸರ್ವಸ್ವವೂ ಜ್ಞಾಪಕದಲ್ಲಿ ಉಳಿಯುತ್ತದೆ. ಆದರೆ ಇಲ್ಲಿರುವ ಪ್ರಮುಖ ಸಮಸ್ಯೆ ಎಂದರೆ – ಈ ರೀತಿಯ ಚೈತನ್ಯದ ಪ್ರಗತಿ ನಿಮ್ಮಲ್ಲಿ ಕಷ್ಟ ಸಾಧ್ಯವಾಗಿದೆ.

ಮೂಲತಃ ಗುರುವಿನ ನಿಜವಾದ ಶಕ್ತಿ ಎಂದರೆ, ಖಾಲಿಯಾಗಿರುವ ಸ್ಥಳವನ್ನು ತುಂಬುವದು! ನಿಮ್ಮನ್ನು ಅದರೊಡನೆ ಸಂಪರ್ಕಗೊಳಿಸುವದಾಗಿದೆ. ಯಾವಾಗ ನೀವು ಉನ್ನತ ಹಂತದಲ್ಲಿ ಇರುತ್ತೀರೋ, ಅದೂ ಆ ಊರ್ಧ್ವದೊಡನೆ ನಿಮ್ಮನ್ನು ನೀವು ಸಂಪರ್ಕಿಸಲು ಯತ್ನಿಸುತ್ತೀರೋ, ಅಲ್ಲಿ ಗುರುವು ಕೊಂಡಿಯಾಗಿರುತ್ತಾನೆ. ಅಥವಾ ಗುರುವು ನಿಮ್ಮನ್ನು ನಿಮ್ಮ ಆತ್ಮದ ಜೊತೆಗೆ, ನಿಮ್ಮಂತರಂಗದಲ್ಲಿಯೇ ಇರುವ ಆ ಊರ್ಧ್ವದ ಚೈತನ್ಯದ ಜೊತೆಗೆ ಸಂಪರ್ಕ ಸಾಧಿಸಿ ಕೊಡುವಲ್ಲಿ, ಆ ಪರಮದೊಡನೆ ಸಂಪರ್ಕ ಸಾಧಿಸಬಲ್ಲ. ಆದರೆ ಬಹುತೇಕವಾಗಿ ಯಾರೂ ಇದನ್ನು ಮಾಡುತ್ತಲೇ ಇಲ್ಲ.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಜುಲೈ 10, 1963**

---

ಒಂದು ವೇಳೆ ಪ್ರತಿಯೊಬ್ಬರೂ ಅವನ ಚೈತ್ಯಾತ್ಮವನ್ನು ಕಂಡುಕೊಂಡಲ್ಲಿ, ಮತ್ತು ಅದು ತನ್ನ ಅಂತರಂಗದಲ್ಲಿಯೇ ಸದಾ ಇರುವದನ್ನು ಅರಿತುಕೊಂಡರೆ ಹಾಗೂ ಅದರೊಡನೆ ಸಾಯುಜ್ಯಗೊಂಡಲ್ಲಿ, ಆಗ ಎಲ್ಲ ಸಮಸ್ಯೆಗಳೂ ಪರಿಹಾರ ಕಂಡುಕೊಳ್ಳುತ್ತವೆ.

ಚೈತ್ಯಾತ್ಮವು ಮಾನವನಲ್ಲಿ ನೆಲೆಸಿರುವ ದೈವತ್ವದ ಪ್ರತಿನಿಧಿಯಾಗಿದ್ದಾನೆ. ಇದು ಸತ್ಯ. ಇದು ನಿಮಗೆ ತಿಳಿದಿರಲಿ. ಏಕೆಂದರೆ ದಿವ್ಯತೆ(ದೈವತ್ವ) ಎನ್ನುವದು ನಿಮ್ಮಿಂದ ಎಂದಿಗೂ ದೂರವಾಗಿ ಇಲ್ಲವೇ ಇಲ್ಲ. ಅದು ಎಂದಿಗೂ ಅಲಭ್ಯವಾದ ವಸ್ತುವೂ ಅಲ್ಲ. ಆ ದೈವೀಕತೆಯೇ ನಿಮ್ಮಲ್ಲಿ ಇದೆ. ನೀವು ಅದರ ಬಗೆಗೆ ಪೂರ್ಣ ಪ್ರಜ್ಞೆಯನ್ನು ಹೊಂದಿಲ್ಲ.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಫೆಬ್ರವರಿ 8, 1973**

## ದೈವತ್ವದೊಡನೆ ಸಂಯೋಜನೆಯ ವಿಷಯ

*ಚೈತ್ಯ ಪುರುಷನ ಕಾರ್ಯವು ಏನಾಗಿದೆ?*

– ಅದು ಕಾರ್ಯ ಮಾಡಲೇಬೇಕೆನ್ನುವದನ್ನು ನೀನು ಬಯಸುತ್ತೀಯಾ? ನೀನು ನಿಖರವಾಗಿ ಏನನ್ನು ಹೇಳಲು ಬಯಸುತ್ತಿದ್ದೀಯಾ? ಅದರ ಕಾರ್ಯವಾದರೂ ಏನು? ಓ! ಬಹಳ ಚೆನ್ನಾಗಿದೆ, ಆದರೂ ಅದನ್ನು ಈ ರೀತಿಯಲ್ಲಿಯೂ ಹೇಳಬಹುದು. ಅದೊಂದು ವಿದ್ಯುತ್ ತಂತಿಯಂತೆ ಇದೆ. ಅದು ಜನರೇಟರ್ ಮತ್ತು ಬಲ್ಬುಗಳ ಮಧ್ಯೆ ಸಂಪರ್ಕ ಒದಗಿಸುತ್ತದೆ.

*ಹಾಗಾದರೆ ಜನರೇಟರ್ ಎಂದರೆ ಏನು? ಬಲ್ಬು ಎಂದರೆ ಏನು?*

– ಓ! ನಾವೆಲ್ಲ ಅಲ್ಲಿಯೇ ಇದ್ದೇವೆ.!! ಅಂದರೆ ಜನರೇಟರ್ ಎಂದರೆ ಏನು ಹಾಗೂ ಬಲ್ಬು ಎಂದರೆ ಏನು ಎನ್ನುವದನ್ನು ತಿಳಿಯಬೇಕಾಗಿದೆಯಲ್ಲವೇ? ಅದು ನಿಖರವಾಗಿ ಹಾಗೆಯೇ ಇದೆ. ಯಾವುದು ಜನರೇಟರ್ ಯಾವುದು ಬಲ್ಬು, ಅಥವಾ ಅವೆರಡನ್ನೂ ಒಬ್ಬರು ಜನರೇಟರ್ ಆಗಿದ್ದರೆ ಒಬ್ಬರು ಬಲ್ಬು ಆಗಿದ್ದಾರೆ ಎಂದೂ ಹೇಳಬಹುದು.

*ಆ ದೈವತ್ವವೇ ಜನರೇಟರ್. ಈ ದೇಹವೇ ಬಲ್ಬು ಆಗಿದೆ.*

ಇದು ದರ್ಶನಕ್ಕೂ ಸಿಗುತ್ತದೆ ಅಲ್ಲವೇ?

ಹೀಗಾಗಿಯೇ ಇದು ಆ ರೀತಿಯಲ್ಲಿಯೇ ಕಾರ್ಯ ನಿರ್ವಹಿಸುತ್ತದೆ. ಇದರ ಅರ್ಥವೆಂದರೆ, ಒಂದು ವೇಳೆ ಈ ಜಡತ್ವದಲ್ಲಿ ಚೈತನ್ಯವು ಇರದೇ ಹೋಗಿದ್ದರೆ ಆಗ ದೈವತ್ವದೊಡನೆ ಸಂಪರ್ಕ ಸಾಧಿಸಲು ಸಾಧ್ಯವೇ ಆಗುತ್ತಿರಲಿಲ್ಲ. ಆ ಜಡತ್ವದಲ್ಲಿ ಆ ಚೈತನ್ಯವು ಇರುವ ಕಾರಣದಿಂದಲೇ ಹಾಗೂ ಅದು ಜಡಕ್ಕೂ ಚೇತನಕ್ಕೂ ಸಂಪರ್ಕ ಸಾಧಿಸುವದೇ ಒಂದು ಸಂತಸದಾಯಕವಾದ ಘಟನೆಯಾಗಿದೆ. ಅದು ಎಲ್ಲವನ್ನೂ ನಿರ್ವಹಿಸುತ್ತದೆ, ನಿರ್ದೇಶಿಸುತ್ತ, ಸರ್ವ ಮಾನವ ಸಮುದಾಯವನ್ನು ಕುರಿತು, ಈ ದಿವ್ಯತ್ವವನ್ನು ನೀವು ನಿಮ್ಮಲ್ಲಿಯೇ ಹೊಂದಿಕೊಂಡು ಮುಂದುವರೆಯಬೇಕು. ನೀವು ನಿಮ್ಮಂತರಂಗದಲ್ಲಿಯೇ ಪ್ರವೇಶಿಸುವದನ್ನು ಅರಿತುಕೊಂಡಲ್ಲಿ, ಆಗ ನೀವು 'ಅವನನ್ನು' ಕಾಣಲು ಶಕ್ಯವಾಗುತ್ತದೆ. ಇದು ಮಾನವ ವರ್ಗಕ್ಕೆ ಅತ್ಯಂತ ವಿಶಿಷ್ಟವಾದ ಸಂಗತಿಯಾಗಿದ್ದು, ಅದರಲ್ಲೂ ಭೂಮಿಯ ಮೇಲೆ ನಿವಾಸಿಯಾಗಿರುವ ಎಲ್ಲರಿಗೂ ವಿಶೇಷ ಸಂಗತಿಯಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/160**

**ಸ್ಫೂರ್ತಿಯನ್ನು ಪಡೆದುಕೊಳ್ಳುವದು**

ಈ ಚೈತ್ಯ ಪುರುಷನು ಅಥವಾ ಚೈತನ್ಯ ಪ್ರಜ್ಞೆಯು ಒಂದು ಸಂಪರ್ಕ ಸಾಧನವಾಗಿ ಆ ಮೂಲಕ ಸ್ಫೂರ್ತಿಯನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಎನ್ನುವ ವಿಷಯವು ಪ್ರಶ್ನಿಸಲ್ಪಡುತ್ತಿದೆ. ಸಾಮಾನ್ಯವಾಗಿ ಹೇಳುವದಾದಲ್ಲಿ ಅದು ನಿಜವಾದ ಸಂಗತಿ. ಊರ್ಧ್ವದಲ್ಲಿರುವ ವಲಯದೊಡನೆ ಪ್ರಪ್ರಥಮವಾಗಿ ನೀವು ಸಂಪರ್ಕ ಸಾಧಿಸುವದು ಚೈತನ್ಯವು ವಿಕಸನಗೊಳ್ಳುತ್ತಿರುವ ಮುನ್ನ, ಆಗ ಅಂತಹ

ಸ್ಫೂರ್ತಿಯನ್ನು ಪಡೆದುಕೊಳ್ಳುವದು ಕಷ್ಟವಾಗುತ್ತದೆ. ಅದು ಒಮ್ಮೊಮ್ಮೆ ಅಪರೂಪವೆನ್ನುವಂತೆ, ಅಸಾಧಾರಣ ಘಟನಾವಳಿಗಳ ನಿಬಂಧನೆಗಳ ಕಾರಣದಿಂದಾಗಿ, ಕೃಪೆಯಿಂದಾಗಿ ಘಟಿಸುತ್ತದೆ. ಆದರೆ ಈ ಚೈತ್ಯದ ಮೂಲಕವೇ ಆ ಸಂಪರ್ಕ ಬರುತ್ತದೆ ಎನ್ನುವದು ಮಾತ್ರ ಸತ್ಯದ ಸಂಗತಿಯಾಗಿದೆ. ಏಕೆಂದರೆ ಈ ಚೈತ್ಯದ ಪ್ರಜ್ಞೆಯು ಖಂಡಿತವಾಗಿಯೂ ಆ ಊರ್ಧ್ವದಲ್ಲಿರುವ ದೈವೀ ಸತ್ಯದ ಜೊತೆಗೆ ಪರಮಾಪ್ತ ಆತ್ಮೀಯತೆಯನ್ನು ಹೊಂದಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/5**

**ಅತಿಮಾನಸದ ನೆಲೆಗೆ ಮುಖ್ಯದ್ವಾರ**

ಮನೋಮಯದ ಅವಸ್ಥೆಯಿಂದ ಅತಿಮಾನಸ ಅವಸ್ಥೆಯ ಜೀವನಕ್ಕೆ ಸಾಗುವದು – ಅದೂ ಜೀವನದ ಕೆಲವು ಆತ್ಮಿಕ ಅನುಭವ, ಅನುಭಾವಗಳಿಂದ – ಅವುಗಳಲ್ಲಿ ಕೆಲವು ಪ್ರತಿಬಿಂಬದಂತೆ ಇರುತ್ತವೆ. ಅವುಗಳ ಮೂಲಕ ಸಾಗುವದು ಬಹುತೇಕವಾಗಿ ಕಠಿಣತೆಯಿಂದ ಕೂಡಿರುತ್ತದೆ. ಈ ಪ್ರತಿಬಿಂಬವು ಒಂದು ಪ್ರಾಣಮಯ–ಕಾಂತಿಮಯ ಉದ್ಗಮವಾಗಿದ್ದು, ಅದು ಜಡದಲ್ಲಿ ಇರುವ ದೈವತ್ವದ ಅಸ್ತಿತ್ವವಾಗಿರುತ್ತದೆ. ಅತಿಮಾನಸ ಚೇತನಾವಸ್ಥೆಗೆ ಇದೇ ಕರೆದೊಯ್ಯುತ್ತದೆ. ಆ ಹಂತದಿಮದ ಅತಿಮಾನಸ ಹಂತಕ್ಕೆ ಸಾಗುವದು ಅತ್ಯಂತ ಸುಲಭವೂ ಆಗಿರುತ್ತದೆ. ಇದು ಉನ್ನತ ಸ್ತರದ ಬೌದ್ಧಿಕ ಊಹೆಗಳಿಂದ ನಿರ್ಮಿತಿಗೊಳ್ಳುವ ಅತಿಮಾನಸ ಹಂತದ ಕಂಪನಗಳಿಗಿಂತ ಅತ್ಯಂತ ಸುಲಭದಲ್ಲಿ ಸಾಗಿ ಹೋಗಲು ಸಾಧ್ಯವಾಗುತ್ತದೆ. ಆದರೆ ಇದು ಬಹುತೇಕವಾಗಿ ನಮ್ಮನ್ನು ತಪ್ಪು ನಿರ್ದೇಶನದಲ್ಲಿ ಕರೆದುಕೊಂಡು ಹೋಗುವ ಶಾಬ್ದಿಕ ಅನುಭವವಾಗಿರುತ್ತದೆ! ಅದು 'ಅತಿಮಾನಸ'ವೆಂದು ನಾವು ಕರೆಯುತ್ತಿದ್ದರೂ ಸಹಿತ ಅದನ್ನು ಉನ್ನತ ಸ್ತರದ ಬೌದ್ಧಿಕ ಸಾಮರ್ಥ್ಯದ ಹಿನ್ನೆಲೆಯಲ್ಲಿ ಮಾನಸಿಕ ಸಾಮರ್ಥ್ಯವಾಗಿ ಪಡೆಯುತ್ತಿದ್ದೇವೆಯೇ?

ಆದರೆ ಇಲ್ಲಿನ ಸಂಗತಿ ಸಂಪೂರ್ಣ ಭಿನ್ನವಾಗಿದೆ. ಈ ಪರಮೋಚ್ಚ ಔನ್ನತ್ಯದಿಂದ, ಅತ್ಯಂತ ಪರಿಶುದ್ಧತೆಯಿಂದ, ಪವಿತ್ರಮಯ ಬೌದ್ಧಿಕ ಚಟುವಟಿಕೆಯಿಂದ, ಪ್ರತಿಯೊಬ್ಬನೂ ತನ್ನಲ್ಲಿ ತಾನೇ ಶಾಂತವಾಗಿ ಇರುವ ಹಂತದಲ್ಲಿ, ಶಕ್ತಿರಹಿತವಾಗಿರುವ ಅಮೂರ್ತತೆಯ ಹಾಗೂ ಅತ್ಯಂತ ಘನಶಾಂತ ಶೀತಲವಾಗಿರುವ, ಒಂದು ಪ್ರಶಾಂತವಾದ ಹಿಮದಂತೆಯೇ ತಂಪಾಗಿರುವ

ಪ್ರಕಾಶದ ಕಡೆಗೆ ಕರೆದೊಯ್ಯುತ್ತದೆ. ಅಂದರೆ ಯಾವುದು ಜೀವನದಿಂದ ಅತ್ಯಂತ ನಿಗೂಢವಾಗಿದೆಯೋ, ಮತ್ತು ಮತ್ತೂ ದೂರದಲ್ಲಿದೆಯೋ ಹಾಗೂ ಈ ಅತಿಮಾನಸ ಹಂತದ ಅನುಭವಗಳಿಂದ ದೂರದಲ್ಲಿದೆಯೋ ಅಲ್ಲಿಗೆ ಕರೆದೊಯ್ಯುತ್ತದೆ.

ಈ ನವನವೀನವಾದ ಸಾರವು ಈ ಜಗತ್ತಿನಲ್ಲಿ ಹರಡಿಕೊಳ್ಳುತ್ತಿದ್ದು ಮತ್ತೆ ಇದು ಕಾರ್ಯಶೀಲವೂ ಆಗಿರುತ್ತದೆ. ಅಲ್ಲಿ ಸಾಮಾನ್ಯವಾಗಿ ಇರುವ ಉತ್ತಾಪವು ಒಂದು ಶಕ್ತಿ, ಒಂದು ತೋಷ... ಇವೆಲ್ಲವೂ ಬೌದ್ಧಿಕ ಚಟುವಟಿಕೆಗಳಿಂದ ಕಾಣಿಸುತ್ತಿದ್ದು, ಅದು ಶೀತಲತೆಯ ಹಾಗೂ ಶುಷ್ಕಮಯವಾಗಿರುವಂತೆಯೂ ಕಾಣುತ್ತದೆ. ಹೀಗಾಗಿಯೇ ಈ ಸಂಗತಿಗಳ ಬಗೆಗೆ ಕೆಲವೇ ಕೆಲವರು ಮಾತ್ರ ಅದು ಇರುವ ಪೂರ್ಣಸ್ಥಿತಿಯ ಕುರಿತು ಮಾತನಾಡುತ್ತಾರೆ. ಕೇವಲ ಒಂದು ಕ್ಷಣ, ಒಂದೇ ಒಂದು ಕ್ಷಣ, ಒಂದೇ ಒಂದು ಸ್ಪಂದನ, ಅದೂ ಗಾಢವಾದ ಹಾಗೂ ನೈಜ ಪ್ರೇಮದ ಸ್ಪಂದನವು ಆ ದೈವೀ ಕೃಪೆಯಲ್ಲಿ ಸ್ಥಿತವಿರುತ್ತದೆ. ಈ ಕೃಪೆಯು ನಿಮಗೆ ಅತ್ಯಂತ ಸಮೀಪದಲ್ಲಿರುವದನ್ನು ಹಾಗೂ ಎಲ್ಲ ವಿವರಣೆಗಳಿಗಿಂತಲೂ ಆ ಗಮ್ಯದ ನೆಲೆಗೆ ಅತ್ಯಂತ ನಿಕಟವಾಗಿರುವದನ್ನೂ ಅರ್ಥೈಸಿಕೊಳ್ಳುವಂತೆ ತೋರುತ್ತದೆ. ಇದು ಒಂದೇ ಕ್ಷಣದ ಅನುಭವವಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/325 – ಶ್ರೀಮಾತೆ**

## ಚೈತ್ಯಾತ್ಮ ಮತ್ತು ಅತಿಮಾನಸ ಯೋಗ

ಈ ಆತ್ಮವು, ಚೈತ್ಯಾತ್ಮವೇ ಆಗಿದ್ದು. ಅದು ನೇರಾನೇರವಾಗಿ ಆ ದೈವೀ ಸತ್ಯದ ಸಂಪರ್ಕದಲ್ಲಿಯೇ ಇರುತ್ತದೆ. ಆದರೆ ಈ ಸಂಗತಿ ಮಾನವನಲ್ಲಿರುವ ಮನಸ್ಸಿನ ಕಾರಣದಿಂದಾಗಿ ಅಡಗಿಸಡಲ್ಪಟ್ಟಿದೆ. ಅನ್ನಮಯ, ಪ್ರಾಣಮಯ ಮತ್ತು ಭೌತಿಕ ಸ್ವಭಾವದಿಂದಾದ ಮನೋಮಯ ಸ್ವಭಾವದಿಂದಾಗಿ(ತೈತ್ತಿರೀಯ ಉಪನಿಷತ್) ಇದು ಅಡಗಿಸಿಡಲ್ಪಟ್ಟಿದೆ. ಯಾರಾದರೂ ಸರಿ, ಯೋಗವನ್ನು ಪ್ರಾರಂಭಿಸಿ, ಮನಸ್ಸಿನಲ್ಲಿಯೇ ಆ ಕಾಂತಿ ಕಿರಣಗಳನ್ನು ಹಾಗೂ ಅದಕ್ಕೆ 'ಕಾರಣ'ಗಳನ್ನು ಪಡೆಯಬಹುದು. ಶಕ್ತಿಯನ್ನು ಪಡೆದುಕೊಂಡು, ಎಲ್ಲ ಅನುಭವಗಳ ಮೂಲಕ ಪ್ರಾಣದ ವ್ಯಾಪ್ತಿತ್ವವನ್ನು ಅರಿತು ಸಮೃದ್ಧಗೊಳ್ಳಬಹುದು. ಭೌತಿಕ ಸಿದ್ಧಿಗಳಿಂದಲೂ ಕೆಲವರು ಅದನ್ನು ಸ್ಥಾಪಿಸಿಕೊಳ್ಳಬಹುದು. ಆದರೆ ಇವೆಲ್ಲವುಗಳ ಹಿಂದೆ ಆ ಆತ್ಮಶಕ್ತಿಯ ಅನುಷ್ಠಾನವಿರದೇ ಹೋದಲ್ಲಿ, ಒಂದು ವೇಳೆ ಚೈತ್ಯದ ಸ್ವಭಾವವು

ಅಲ್ಲಿ ಮುಂಚೂಣಿಗೆ ಬಾರದೇ ಇದ್ದಲ್ಲಿ, ಆಗ ನಂಬಲರ್ಹವಾದ ಯಾವುದೇ ಘಟನೆಯೂ ಘಟಿಸುವದಿಲ್ಲ.

ಈ ಯೋಗದಲ್ಲಿ, ಚೈತ್ಯಾತ್ಮವೆಂದರೆ – ಉಳಿದೆಲ್ಲ ಸರ್ವಸ್ವವನ್ನೂ ಈ ಅತಿಮಾನಸ ಪ್ರಕಾಶಕ್ಕೆ ಅಂತಿಮವಾಗಿ ಆ ಪರಮೋಚ್ಚವಾಗಿರುವ ಸಚ್ಚಿದಾನಂದದ ಕಡೆಗೆ ದ್ವಾರವನ್ನು ತೆರೆಯುತ್ತದೆ. ಮನಸೂ ಸಹಿತ ತಂತಾನೇ ಆ ಔನ್ನತ್ಯವನ್ನು ತಲುಪಲು ಸಾಧ್ಯವಾಗುತ್ತದೆ. ಅದು ತನ್ನಲ್ಲಿ ತಾನೇ, ಮತ್ತೂ ಮತ್ತೂ ವಿಸ್ತಾರವಾಗಿ ಅವ್ಯಕ್ತಿತ್ವವಾಗಿ(ಅರೂಪವಾಗಿ) ನಿರಾಕಾರ ಸ್ವರೂಪವನ್ನು ಪಡೆದುಕೊಂಡಿರುತ್ತದೆ. ಅದು ಆತ್ಯಂತಿಕವಾಗಿ ತನ್ನಲ್ಲಿಯೇ ತಾನು ಆಧ್ಯಾತ್ಮೀಕರಣಗೊಂಡ ಮನೋಭೂಮಿಕೆಯ ಮೇಲೆಯೇ ಸಂಪೂರ್ಣವಾಗಿ ಆಧಾರವನ್ನು ಕಂಡುಕೊಳ್ಳುವದಿಲ್ಲ. ಒಂದು ವೇಳೆ ಆತ್ಮದ ಅಂತರಂಗವು ಜಾಗೃತಗೊಳಿಸಲ್ಪಟ್ಟಲ್ಲಿ, ಒಂದು ವೇಳೆ ಮಾನಸಿಕ ಹಂತದಲ್ಲಿ ಒಂದು ನೂತನವಾದ ನವ ಜನ್ಮವೊಂದು ಪ್ರಕಾಶನಗೊಂಡಲ್ಲಿ, ಈ ಚೈತ್ಯಾತ್ಮದ ಚೇತನದಲ್ಲಿ ಪ್ರಾಣಿಕ ಹಾಗು ಭೌತಿಕ ಅಂಶಗಳು ಪ್ರಕಟಗೊಂಡಲ್ಲಿ, ಆಗ ಈ 'ಯೋಗ'ವನ್ನು ಅನುಷ್ಠಾನಿಸಬಹುದು. ಇಲ್ಲದಿದ್ದಲ್ಲಿ, ಕೇವಲ ಆತ್ಮದಿಂದ ಅಥವಾ ಮನೋಬಲದಿಂದ ಅಥವಾ ಇನ್ನಾವುದೇ ಭಾಗದಿಂದ ಇದನ್ನು ಮಾಡಲು ಸಾಧ್ಯವಿಲ್ಲ. ಒಂದು ವೇಳೆ ಚೈತ್ಯದಲ್ಲಿ ನವ ಜನ್ಮವನ್ನು ನಿರಾಕರಿಸಿದಲ್ಲಿ, ಅದು ತಾಯಿಯಿಂದ ಮಗುವಿನ ಜನನವನ್ನೇ ನಿರಾಕರಿಸಿದಂತಾಗುತ್ತದೆ. ಒಂದು ವೇಳೆ ಬೌದ್ಧಿಕ ಜ್ಞಾನದ ಮೇಲೆ ಅಥವಾ ಮಾನಸಿಕ ಚಿಂತನಗಳಿಗೆ ಬದ್ಧರಾಗಿದ್ದುಕೊಂಡೇ ಅಥವಾ ಕೆಲವು ಆತ್ಮಿಕ ಬಯಕೆಗಳಿಗೆ ಅಂಟಿಕೊಂಡೇ ಇದ್ದಲ್ಲಿ, ಆಗ ಸಾಧನೆಯ ಪಥದಿಂದ ವಿಫಲರಾಗುವ ಘಟನೆಯೇ ಇರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/337–38 – ಶ್ರೀ ಅರವಿಂದರು**

**ಆತ್ಮ–ದರ್ಪಣ**

ಹೀಗಿದ್ದಾಗ್ಯೂ ಸಹಿತ ಒಂದು ಪರಿಹಾರವಿದೆ. ಅಲ್ಲಿ ಒಂದು ಪಥ ನಿರ್ದೇಶಕವೊಂದು ಇರಲೇಬೇಕು. ಅದಕ್ಕಾಗಿ ಅಲ್ಲಿ ಒಂದು ದರ್ಪಣವನ್ನು ಸ್ಥಾಪಿಸಲಾಗಿದೆ. ಅದು ಅವನ ಭಾವನೆಗಳನ್ನು, ಅವನ ಸ್ಪಂದನಗಳನ್ನು, ಅವನದೇ ಆದ ಎಲ್ಲ ಸಂವೇದನೆಗಳನ್ನೂ ಪ್ರತಿಫಲಿಸುತ್ತದೆ. ಪ್ರತಿಯೊಬ್ಬರೂ ಆ

ದರ್ಪಣದಲ್ಲಿ ತಮ್ಮನ್ನು ತಾವು ಕಾಣಲೇಬೇಕು. ಆಗ ಅಲ್ಲಿ ಕೆಲವೊಂದು ವಿಷಯಗಳು ಕಾಣಲಿಕ್ಕೆ ಸುಂದರವಾಗಿರಲಿಕ್ಕಿಲ್ಲ, ಅಥವಾ ಸಂತೋಷದಾಯಕವೂ ಆಗಿರಲಿಕ್ಕಿಲ್ಲ. ಅದೇ ಸಮಯದಲ್ಲಿ ಅಲ್ಲಿಯೇ ಕೆಲವು ಸುಂದರವಾದ, ಹರ್ಷದಾಯಕವಾದ ಪ್ರತಿಬಿಂಬಗಳನ್ನು ಕಾಣುತ್ತಾರೆ. ಏಕೆಂದರೆ ಅವರು ತಮ್ಮನ್ನು ಆ ರೀತಿಯಲ್ಲಿ ರೂಪಿಸಿಕೊಂಡಿರುತ್ತಾರೆ. ಇದನ್ನು ದಿನಕ್ಕೆ ನೂರಾರು ಬಾರಿ ಪುನರಾವರ್ತಿಸುವ ಅವಶ್ಯಕತೆಯೂ ಇದೆ. ಇದೊಂದು ಅತ್ಯಂತ ಆಸಕ್ತಿದಾಯಕವಾಗಿರುವ ಸಂಗತಿಯೂ ಹೌದು.

ಆ ಚೈತ್ಯದ ದರ್ಪಣದ ಸುತ್ತಲೂ ಒಂದು ಬೃಹತ್–ವರ್ತುಳವನ್ನು (ವಲಯವನ್ನು) ವ್ಯವಸ್ಥೆಗೊಳಿಸಬಹುದು. ಇದನ್ನು ಪ್ರತಿಯೊಬ್ಬನೂ ನಿರ್ಮಿಸಿಕೊಳ್ಳಬಹುದು. ಒಂದು ವೇಳೆ, ಕೆಲವು ವಿಷಯಗಳು ಸೂಕ್ತವಾಗದೇ ಇರುವ ಸಂದರ್ಭಗಳಿರುವಲ್ಲಿ, ಆಗ ಅದು ಛಾಯೆಯಾಗಿ ದರ್ಪಣವನ್ನು ಆವರಿಸಿಕೊಳ್ಳುತ್ತದೆ. ಆಗ ಕಡ್ಡಾಯವಾಗಿ ಅಂತಹ ಅಡೆತಡೆಯ ವಸ್ತುಗಳನ್ನು ತೆರೆಯಲೇಬೇಕಾಗುತ್ತದೆ. ಮತ್ತೆ ದರ್ಪಣವನ್ನು ಪ್ರತಿಬಿಂಬದ ಸಲುವಾಗಿ ಸುವ್ಯವಸ್ಥಿಗೊಳಿಸಬೇಕಾಗುತ್ತದೆ. ಆ ದರ್ಪಣವು ಮಾತನಾಡುವಂತೆ ಇರಬೇಕು; ಅರ್ಥೈಸಿಕೊಳ್ಳುವಂತೆ ಇರಬೇಕು. ಯಾವುದೇ ಸಂದರ್ಭದಲ್ಲೂ ಸಹಿತ ಪ್ರತಿಯೊಬ್ಬನೂ ಆ ಕತ್ತಲಿನಿಂದ ಹೊರಗೆ ಬರಲೇಬೇಕಾಗಿದೆ.

ಒಂದು ವೇಳೆ ನೀವು ಇದನ್ನು ಮಾಡಲು ಶಕ್ತರಾದಲ್ಲಿ, ನೀವು ಎಂದಿಗೂ ಬೇಸರ ಪಡಬೇಕಾದ ಸಂಗತಿಯೇ ಬರುವದಿಲ್ಲ. ಯಾವಾಗ ಜನತೆಯು ದಯಾಳುವಾಗಿರುವದಿಲ್ಲವೋ, ಯಾವಾಗ ಓರ್ವನು ತನ್ನ ಬುದ್ಧಿಯಲ್ಲಿ ಸ್ಥಗಿತತೆಯನ್ನು ಹೊಂದುತ್ತಾನೆಯೋ, ಯಾವಾಗ ತನ್ನ ಅನುಭವಗಳಿಂದ ತಾನೇ ಪಾಠವನ್ನು ಕಲಿತುಕೊಳ್ಳುವದಿಲ್ಲವೋ, ಅವರೆಲ್ಲರೂ ಜೊತೆಗೆ ಪ್ರತಿಯೊಬ್ಬರೂ ಆ ದರ್ಪಣದಲ್ಲಿ ತಮ್ಮನ್ನು ತಾವು ನೋಡಿಕೊಳ್ಳಲೇಬೇಕಾಗಿದೆ. ಅದೇ ರೀತಿಯಲ್ಲಿ ಇದು ಅತ್ಯಂತ ಆಸಕ್ತಿದಾಯಕವಾಗಿರುವ ವಿಷಯವೂ ಆಗಿದ್ದು, ಅವನು ಅಲ್ಲಿ ಕಾಣುತ್ತಿರುವ ಪ್ರತಿಬಿಂಬವನ್ನು ಕಂಡು, "ನಾನು ಪ್ರಾಮಾಣಿಕನಾಗಿದ್ದೇನೆಂದು ನನ್ನ ಚಿಂತವಿದೆ" ಎನ್ನುವ ಮುಖಸ್ತುತಿಯನ್ನು ಕಾಣುತ್ತಾನೆಯೇ ವಿನಾ ಬೇರೆ ಏನೂ ಅಲ್ಲಿರುವದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/10**

**ಋತದ ಅನುಷ್ಠಾನ**

ಈ ಚೈತ್ಯವು ಋತದ ಮೂಲಕ ಚಲಿಸುತ್ತದೆ. ಈ ಪರಮಸತ್ಯವು ಶಾಶ್ವತವಾದ ಸ್ವಯಂ ಸ್ಥಿತಿಯಾಗಿದ್ದು, ಅದು ಯಾವುದೇ ಸಮಯದಲ್ಲಾಗಲೀ ಅಥವಾ ಅವಕಾಶದಲ್ಲಾಗಲೀ ಅವಲಂಬಿತವಾಗಿರುವದಿಲ್ಲ. ಆದರೆ ಅದೇ ಸಮಯದಲ್ಲಿ ಈ ಚೈತ್ಯಾತ್ಮವು ಒಂದು ಅಸ್ತಿತ್ವವಾಗಿದ್ದು ಅದು ಪ್ರಗತಿಗೊಳ್ಳುತ್ತದೆ. ರೂಪವನ್ನು ಪಡೆದುಕೊಳ್ಳುತ್ತದೆ. ವಿಕಾಸಗೊಳ್ಳುತ್ತದೆ. ತನ್ನಲ್ಲಿ ತಾನೇ ಅಧಿಕಾಧಿಕವಾಗುತ್ತ ಸ್ವಯಂಪರಿಪೂರ್ಣತೆಯನ್ನು ಪಡೆದುಕೊಳ್ಳುವತ್ತ ಸಾಗುತ್ತದೆ. ಈ ರೀತಿಯಲ್ಲಿ ಈ ಋತವನ್ನು(ಪರಮ ಸತ್ಯವನ್ನು) ಅನುಷ್ಠಾನಿಸಲು ಸಾಮರ್ಥ್ಯಶಾಲಿಯಾಗುತ್ತದೆ. ಇದು ಶಾಶ್ವತ ಸತ್ಯವಾಗಿದ್ದು, ಮತ್ತು ನಿರಂತರವಾಗಿರುತ್ತದೆ. ಈ ಚೈತ್ಯಾತ್ಮವು ಪ್ರಗತಿ ಹೊಂದುತ್ತಿರುವ 'ಜೀವಿ'ಯಾಗಿದ್ದು, ಅಂದರೆ ಈ ಚೈತ್ಯಾತ್ಮದ ಹಾಗೂ ಋತದ ಮಧ್ಯೆ ಪ್ರಗತಿಶೀಲವಾದ ಸಂಬಂಧವನ್ನು ಹೊಂದಿರುತ್ತದೆ. ಯಾರಿಗೇ ಆಗಲಿ, ತಮ್ಮ ಅಂತರಂಗದಲ್ಲಿರುವ ಪರಮ ಸತ್ಯದ ಬಗೆಗೆ ಜಾಗೃತಿಯನ್ನು ತಳೆಯದ ವಿನಾ ಈ (ಅವನದೇ) ಚೈತ್ಯಾತ್ಮದ ಬಗೆಗೆ ಅರಿತುಕೊಳ್ಳಲು ಸಾಧ್ಯವಾಗುವದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/305 – ಶ್ರೀಮಾತೆ**

**ಚೈತ್ಯಾತ್ಮ ಮತ್ತು ಮೃಣ್ಮಯ ಜೀವನದ ಪರಿಪೂರ್ಣತೆ**

ಆಗ ಅಲ್ಲಿ ದೈವೀ ನಾಮವೊಂದರ ಮೇಲೆ ಸರ್ವಸ್ವವನ್ನೂ ಆಧಾರಗೊಳಿಸಿಕೊಳ್ಳುವ ಮೂಲಕ ಚೈತಾಗ್ನಿಯೊಂದು ಅಂತರಂಗದಲ್ಲಿ ಪ್ರಜ್ವಲನಗೊಳ್ಳುತ್ತದೆ. ಆ ಅಗ್ನಿಯಲ್ಲಿ ಎಲ್ಲ ಭಾವನೆಗಳೂ/ಸಂವೇದನೆಗಳೂ ಕ್ರೋಢೀಕರಿಸಲ್ಪಡಲಾಗಿದೆ. ತಮ್ಮ ಘನಸಾಂದ್ರಗೊಂಡಿರುವ ಅಂಶಗಳೆಲ್ಲವನ್ನೂ ತ್ಯಜಿಸಿ, ಜೊತೆಗೆ ಯಾವುದು ದಿವ್ಯತ್ವವಾಗಿಲ್ಲದ ವಿಕೃತಗಳಾಗಿರುತ್ತವೆಯೋ ಅವುಗಳನ್ನು ದಹಿಸುವ ಮೂಲಕ ಮತ್ತೆ ಕೊರತೆಗಳನ್ನು ದೂರ ಮಾಡಿಕೊಳ್ಳುತ್ತ, ಮಹತ್ತಾದ ಪ್ರೇಮದ ಶಕ್ತಿಯವರೆಗೂ ಮತ್ತು ನಿಷ್ಕಲಂಕವಾದ ಆ ದಿವ್ಯ ಪ್ರಕಾಶದ ಆ ಜ್ವಾಲೆ (ಜ್ಯೋತಿಯ ಪ್ರದೀಪ್ತತೆಯ) ಮೂಲಕ ಆಗಮಿಸುವವರೆಗೂ ಮತ್ತು ಸುಗಂಧಭರಿತವಾದ ಧೂಪದ(ಧೂಮದ) ಜೊತೆಗೆ ಪ್ರಕಾಶಗೊಳ್ಳುವವರೆಗೂ ಸಾಗುತ್ತದೆ.

ಇಲ್ಲಿ ಉದ್ಗಮಗೊಳ್ಳಲಿರುವ ಆ ದಿವ್ಯ ಪ್ರೇಮವು ಇದೇ ಆಗಿದೆ. ಇದು ಅಂತರಂಗಿಕವಾಗಿ ಮಾನವನಲ್ಲಿ ಆ ದಿವ್ಯತ್ವದ ಬಗೆಗೆ ಸಂವೇದನೆಗಳನ್ನು ರೂಪಿಸುತ್ತದೆ. ಸರ್ವಪ್ರಾಣಿ ಪ್ರಪಂಚದಲ್ಲಿ ಕಾರ್ಯಪ್ರವೃತ್ತವಾಗಿರುವ ವಿಶ್ವ ಸಮಾನತೆಯನ್ನು ರೂಪಿಸುತ್ತದೆ. ಇದು ಜೀವನದ ಪರಿಪಕ್ವತೆಯಲ್ಲಿ ಹೆಚ್ಚು ಸಶಕ್ತವಾಗಿದ್ದು, ಜೊತೆಗೆ ಕೇವಲ ಅಸಮರ್ಥನೀಯ ಭ್ರಾತೃತ್ವದ ಬೌದ್ಧಿಕ ಚಿಂತನಗಳಿಗಿಂತ ಹೆಚ್ಚು ನೈಜ ಸಾಧನವಾಗಿರುತ್ತದೆ. ಇದು ಕ್ರಿಯೆಗಳ ಮೂಲಕವೇ ಧಾರಾಕಾರವಾಗಿ ಪ್ರಕಟಗೊಳ್ಳುತ್ತದೆ. ಇದು ಏಕಾಕಿಯಾಗಿಯೇ ಸಾಮರಸ್ಯವನ್ನು ಈ ಜಗತ್ತಿನಲ್ಲಿ ಸೃಷ್ಟಿಸುತ್ತದೆ. ನಿಜವಾದ ಐಕ್ಯತೆಯನ್ನು ಜೀವಪ್ರಪಂಚದಲ್ಲಿ ಸ್ಥಾಪಿಸುತ್ತದೆ. ಎಲ್ಲರೂ ಎಲ್ಲವೂ ಸೆಣಸುತ್ತಿರುವದು/ಹೆಣಗುತ್ತಿರುವದು ಆ ಒಂದು ಅಂತಿಮಕ್ಕಾಗಿ, ಹೋರಾಟ ಮಾಡುತ್ತಿರುವದು ವ್ಯರ್ಥವಾಗುತ್ತಿರುವದಕ್ಕೆ ಕಾರಣ ಅಲ್ಲಿ ಈ ದೈವೀ ಪ್ರೇಮವು ಪ್ರಕಾಶಗೊಂಡಿರುವದಿಲ್ಲ. ಏಕೆಂದರೆ ಈ ದೈವೀ ಪ್ರೇಮವೇ ಈ ಭೂಮಂಡಲದ ಪ್ರಕೃತಿಯಲ್ಲಿ ಅನುಷ್ಠಾನಿಸಲೇಬೇಕಾಗಿರುವ ಹೃದಯ ಸದೃಶ ಸಂಗತಿಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/165–67**

**ಮಾನವೀಯ ಸಂಬಂಧಗಳು ಮತ್ತು ಚೈತ್ಯಾತ್ಮ(ಚೈತ್ಯ ಪುರುಷ)**

ವಾತ್ಸಲ್ಯ, ಪ್ರೇಮ, ದಯಾಳುತನ ಇವೆಲ್ಲವೂ ಚೈತ್ಯದ ಸ್ವಭಾವವಾಗಿದೆ. ಈ ಪ್ರಾಣವು ಇವುಗಳನ್ನು ಹೊಂದಿದೆ. ಏಕೆಂದರೆ ಸ್ತಃ ಈ ಚೈತ್ಯವೇ ಈ ಪ್ರಾಣದ ಮೂಲಕ ಅನುಷ್ಠಾನಗೊಳ್ಳಲು ಅಭಿವ್ಯಕ್ತಗೊಳ್ಳಲು ಪ್ರಯತ್ನಿಸುತ್ತಿದೆ. ಭಾವನಾತ್ಮಕ ಜೀವಿ(ಮನ)ಯಲ್ಲಿ ಈ ಚೈತ್ಯವು ಸರಳವಾಗಿ, ಸುಲಭವಾಗಿ ಅಭಿವ್ಯಕ್ತಗೊಳ್ಳುತ್ತದೆ. ಅದಕ್ಕಾಗಿಯೇ ಹೃತ್ಕೇಂದ್ರದಲ್ಲಿ ಪ್ರತಿಷ್ಠಾಪಿತಗೊಂಡಿರುತ್ತದೆ. ಆದರೆ ಈ ಎಲ್ಲ ವಿಷಯಗಳೂ ಪರಮ ಪವಿತ್ರತೆಯಿಂದ ಕೂಡಿರಬೇಕೆಂದು ಅದು ಬಯಸುತ್ತದೆ. ಭೌತಿಕವಾಗಿ, ಪ್ರಾಣದ ಮೂಲಕ ಬಾಹ್ಯ ಅಭಿವ್ಯಕ್ತಿತ್ವವನ್ನು ಅದು ಎಂದಿಗೂ ನಿರಾಕರಿಸುವದಿಲ್ಲ. ಆದರೆ ಆ ಚೈತ್ಯಪುರುಷನಾಗಿ ಇದು ಆತ್ಮದ ಸ್ವರೂಪದಲ್ಲಿ ಇರುತ್ತದೆ. ಸಹಜವಾಗಿಯೇ ಆತ್ಮ ಆತ್ಮಗಳ ಮಧ್ಯೆ ಆಕರ್ಷಣೆಯನ್ನು ಅನುಭವಿಸುತ್ತದೆ. ಆತ್ಮೀಯ ಸಾಮಿಪ್ಯ, ಆತ್ಮಗಳ ಸಮ್ಮಿಲನದಂತಹ ಘಟನೆಗಳು ಅತ್ಯಂತ ಪ್ರಮುಖವಾಗಿದ್ದು, ಸುಭದ್ರತೆಯನ್ನೂ ಒದಗಿಸುತ್ತವೆ. ಮನಸ್ಸು, ಪ್ರಾಣ,

ದೇಹಗಳು ಅಭಿವ್ಯಕ್ತಗೊಳ್ಳುತ್ತಿರುವ ಮಾರ್ಗಗಳಾಗಿದ್ದು, ಇವು ಅಭಿವ್ಯಕ್ತಗೊಳ್ಳುವಲ್ಲಿ ಅತ್ಯಂತ ಮಹತ್ವದ ಮಾರ್ಗಗಳೂ ಆಗಿವೆ. ಆದರೆ ಆತ್ಮಕ್ಕೆ ಅಂತರಾತ್ಮದ ಹಂತವು ಪ್ರಪ್ರಥಮ ವಿಷಯವಾಗಿದ್ದು, ಅತ್ಯಂತ ಗಾಢವಾದ ನೈಜತೆ, ಮತ್ತು ಇವೆಲ್ಲವೂ ಈ ವಿಷಯಕ್ಕೆ ಆಧೀನವಾಗಿರುತ್ತವೆ. ಇದರ ಅಭಿವ್ಯಕ್ತಿಗೆ, ಇದರ ಸಾಧನದ ರೂಪದಲ್ಲಿ ಮತ್ತು ಮಾರ್ಗದ ರೂಪದಲ್ಲಿ ರೂಪಿತಗೊಳಿಸಲ್ಪಡುತ್ತದೆ.

*

ಈ ಚೈತ್ಯದ ಸಂಬಂಧವು ನಿಜವಾದ ಸಂಬಂಧವಾಗಿದೆ. ಈ ಚೈತ್ಯವು ಯಾವುದೇ ಬೇಡಿಕೆಯನ್ನೂ ಇಡದೇ ಕೇವಲ ಪ್ರೇಮವನ್ನು ಮಾತ್ರ ಹಾಗೂ ಶರಣಾಗತಿಯನ್ನು ಮತ್ತು ಆ ದೈವದೊಡನೆ ಐಕ್ಯತೆಯನ್ನು ಮಾತ್ರ ಬಯಸುತ್ತದೆ. ಮತ್ತೂ ಮೇಲಾಗಿ, ಇದು ಕೇವಲ ಪ್ರಾಣಿಕ ಬಯಕೆಗಳನ್ನು ಇಡದೇ ಕೇವಲ ಅಭೀಪ್ಸೆಯನ್ನು ಬಯಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/473 – ಶ್ರೀ ಅರವಿಂದರು**

**ಸಂಬಂಧಗಳಲ್ಲಿ ರಹಸ್ಯವಾಗಿರುವ ಸಾಮರಸ್ಯ**

ಮಾನವ ಜೀವ ಸಂಕುಲವು ಇದರ ಭೌತಿಕ, ಪ್ರಾಣಿಕ ಮತ್ತು ಮಾನಸಿಕ ಸಂಬಂಧಗಳ ಜೊತೆಗೆ ಅನುಬಂಧ ಹೊಂದಲು ಇರುವ ರಹಸ್ಯವನ್ನು ಆಧರಿಸಿಕೊಂಡಿದೆ. ಇದಕ್ಕಾಗಿಯೇ ಬಹುತೇಕವಾಗಿ ಅಪಶ್ರುತಿಗಳನ್ನೂ ಮತ್ತು ಯಾತನೆಗಳನ್ನೂ ಕಾಣುತ್ತೇವೆ. ಒಂದು ವೇಳೆ ಇದಕ್ಕೆ ವ್ಯತಿರಿಕ್ತವಾಗಿ, ಈ ಸಂಕುಲವು ಚೈತ್ಯದ ಸಂಬಂಧದ ಅನುಬಂಧವನ್ನು (ಆತ್ಮ–ಆತ್ಮದ ಜೊತೆಗೆ ಸಂಬಂಧವನ್ನು) ಬಯಸಿದಲ್ಲಿ, ಆಗ ಅಲ್ಲಿ ಪ್ರಕಟಗೊಳ್ಳುವ ಬಲವತ್ತರವಾದ ಹಾಗೂ ಶಾಶ್ವತದ ಸಾಮರಸ್ಯವನ್ನು ಅತ್ಯಂತ ತೊಂದರೆದಾಯಕ ಹಿನ್ನೆಲೆಯಲ್ಲಿಯೂ ಸಹಿತ ಕಾಣುತ್ತೇವೆ. ಇದು ತನ್ನಷ್ಟಕ್ಕೆ ತಾನೇ ಜೀವನದ ಚಟುವಟಿಕೆಗಳನ್ನು ಅಭಿವ್ಯಕ್ತಿಸುವ ಮತ್ತು ಅವ್ಯವಸ್ಥೆಯನ್ನು ಕಾಣಿಸುವ, ಯಾತನಾಮಯ ಘಳಿಗೆಗಳನ್ನೂ ಅನುಭವಿಸುವ ಮೂಲಕವೇ, ಈ ಶಾಂತಿ ಮತ್ತು ತೋಷದಿಂದ ಪಡೆದುಕೊಂಡು ಬದಲಾಗುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/246**

## ವಿಶ್ವಾಸ ಮತ್ತು ಚೈತ್ಯ ಪುರುಷ

ವಿಶ್ವಾಸವೆನ್ನುವದು ಚೈತ್ಯದ ಸಂಪೂರ್ಣ ತತ್ತ್ವವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/288**

ಪ್ರತಿಯೊಬ್ಬನೂ ತನ್ನ ಚೈತ್ಯವನ್ನು ಅರಿತುಕೊಳ್ಳುವ ಮತ್ತು ಅದರೊಡನೆ ಖಚಿತವಾಗಿ ಐಕ್ಯತೆಯನ್ನು ಹೊಂದುವದು ಅತ್ಯಾವಶ್ಯವಾಗಿದೆ. ಈ ಅತಿಮಾನಸವು ಈ ಚೈತ್ಯದ ಮೂಲಕವೇ ಅನುಷ್ಠಾನಗೊಳ್ಳುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/109**

ಮನಸ್ಸಿನಲ್ಲಿ ಬಹುತೇಕವಾಗಿ ಬಹುತೇಕವಾಗಿ ಜನರು ಮನಸ್ಸಿನ ಹಂತದಲ್ಲಿಯೇ ಇರುತ್ತಾರೆ. ಮಾನಸಿಕ ತೊಂದರೆಗಳು ಮತ್ತೂ ಮತ್ತೂ ಮಾನಸಿಕ ತೊಂದರೆಗಳು... ನೀವು ಅವುಗಳಿಂದ ಹೊರಬರಲಾರಿರಿ, ಇದು ಅನಂತಾನಂತವಾಗಿ ನಡೆಯುತ್ತಲೇ ಇರುವ ಪ್ರಕ್ರಿಯೆಯಾಗಿದೆ. ಹೀಗಾಗಿಯೇ ಈ ಘಟನೆಗಳನ್ನು ರೂಪಿಸಿದೆ. ಅದಕ್ಕಾಗಿ ಈ ಸಂಘರ್ಷಗಳನ್ನು, ಯುದ್ಧಗಳನ್ನು ಅವಶ್ಯವಾಗಿ ಕಡ್ಡಾಯವಾಗಿ ದೂರವಿಡಿ. ಅವುಗಳನ್ನು ಅಪ್ಪಳಿಸಿಬಿಡಿ.

ಒಂದು ಉತ್ಕಟವಾದ ವಿಶ್ವಾಸ, ಚೈತ್ಯದ ಅಭೀಪ್ಸೆ, ಒಂದು ಉತ್ಸಾಹ, ಸ್ವಯಂ–ಸಮರ್ಪಣಾ ಮನೋಭಾವದ ಮೂಲಕ ಅಂದರೆ ಕೇವಲ ತನ್ನ ವೈಯಕ್ತಿಕಕ್ಕಾಗಿ ಜೀವಿಯು ಸತತವಾಗಿಯೂ ಇರವದಕ್ಕಿಂತ, ಸ್ವಯಂ–ಸಮರ್ಪಣೆಯ ಮೂಲಕವೇ ವೈಯಕ್ತಿಕತೆಯನ್ನು ನಿಯಂತ್ರಿಸಿಕೊಳ್ಳುವ ಮೂಲಕ, ಈ ಜಗತ್ತನ್ನು ರಕ್ಷಿಸುವ ಸಲುವಾಗಿ ಸಮರ್ಪಿಸಿಕೊಳ್ಳಿ!

ಬೌದ್ಧಿಕ/ಮಾನಸಿಕ ವಿಶ್ವಾಸವು ಎಂದಗೂ ಸಾಕಾರವಿರುವದಿಲ್ಲ. ಚೈತ್ಯದ ಉತ್ಸಾಹವು ಇಲ್ಲಿ ಅವಶ್ಯವಾಗಿ ಬೇಕಾಗಿದೆ. ಅದು ಸ್ವಯಂ–ಸಮರ್ಪಣೆ, ಸ್ವಯಂ ನಿರಾಕರಣೆಯ ಮೂಲಕ ಸಾಧಿಸಿಕೊಳ್ಳುವದು ಅವಶ್ಯವಾಗಿದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಅಕ್ಟೋಬರ್ 19, 1967**

ಶ್ರೀ ಅರವಿಂದರ 150 ನೇ ವರ್ಷ ಸಮೀಪಿಸುತ್ತಿದೆ. ಹೀಗಾಗಿ ಅವರ ಜನ್ಮಶತಾಬ್ದಿ(1972)ಯಲ್ಲಿ ಕನ್ನಡದಲ್ಲಿ ಪ್ರಕಟಗೊಂಡಿರುವ ಶ್ರೀ ಅರವಿಂದರ ಕುರಿತ ಲೇಖನಗಳ ವಿವರಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಕೊಡಲಾಗುತ್ತದೆ. ಇಲ್ಲಿರುವ ಲೇಖನ ಕಸ್ತೂರಿ ಮಾಸಿಕದಲ್ಲಿ 1972 ಜನವರಿಯಲ್ಲಿ ಪ್ರಕಟಗೊಂಡಿದೆ. ಪಾಡಿಗಾರು ವೆಂಕಟರಮಣಾಚಾರ್ಯ(ಪಾ.ವೆಂ. ಆಚಾರ್ಯ)ರು ಇದರ ಲೇಖಕರು. ಅವರು "ಮುರಳೀಧರ" ಎನ್ನುವ ಕಾವ್ಯನಾಮದಲ್ಲಿಯೂ ಲೇಖನಗಳನ್ನು ಪ್ರಕಟಿಸುತ್ತಿದ್ದರು.

### ಆ ಮಹಾಯೋಗಿಯ ಜನ್ಮಶತಾಬ್ದಿ ವರ್ಷವಿದು

## ಶ್ರೀ ಅರವಿಂದರು

**– ಪಾಡಿಗಾರು ವೆಂಕಟರಮಣಾಚಾರ್ಯ**

ಶ್ರೀ ಅರವಿಂದ ಯೋಗಿಗಳ ನೂರನೆಯ ಜನ್ಮೋತ್ಸವ ಈ ವರ್ಷ ಆಚರಿಸಲ್ಪಡುತ್ತಿದೆ. ಅವರ 'ದರ್ಶನ'ವನ್ನು ಮಾನವ ಕುಲಕ್ಕೆ ವಿವರಿಸುವುದಕ್ಕೆ ಈ ಸಂದರ್ಭವನ್ನು ಅವರ ಶಿಷ್ಯರು ಉಪಯೋಗಿಸಬೇಕೆಂದಿದ್ದಾರೆ.

ಶ್ರೀ ಅರವಿಂದರ ದರ್ಶನ ನಿಜವಾಗಿಯೂ ಈ ಶತಮಾನದಲ್ಲಿ ಅಸಾಧಾರಣವಾದದ್ದು. ಮಾನವನ ಅಂತಿಮ ಭವಿತವ್ಯ ದಿವ್ಯವಾದದ್ದೆಂದು ಅವರು ಹೇಳುತ್ತಾರೆ. ಆದರೆ ಈ ಭವಿತವ್ಯವನ್ನು ಗುರುತಿಸಲಾರದೆ ಮನುಷ್ಯ ಇನ್ನೂ ತನ್ನ ಶರೀರದಿಂದ, ಬುದ್ಧಿಯಿಂದ ಪ್ರೇರಿಸಲ್ಪಟ್ಟವನಾಗಿ ಅಡವಿ ಬಿದ್ದಂತಾಗಿದ್ದಾನೆ. ಆದ್ದರಿಂದಲೇ ಈ ಎಲ್ಲ ಅನವಶ್ಯಕ ಜಂಜಾಟ, ಹಿಂಸೆ, ದ್ವೇಷಗಳು, ದಿವ್ಯ ಜೀವನ ಸಿದ್ಧಿಯಿಂದ ಮನುಷ್ಯ ಕುಲವೆಲ್ಲ ಒಂದಾಗಿ ಮೇಲೇರುವ ಭರವಸೆಯನ್ನು ಶ್ರೀ ಅರವಿಂದರು ಕೊಡುತ್ತಾರೆ. ಇದು ಮನುಷ್ಯಕುಲದ ಅಂತಿಮ ಭವಿತವ್ಯ. ಇದು ದೈವೇಚ್ಛೆ.

ಶ್ರೀ ಅರವಿಂದರ ಜೀವನವನ್ನು ನೋಡಿದರೆ ಅದೇ ಒಂದು ದೈವೇಚ್ಛೆಯಾಗಿ ಗೋಚರಿಸುತ್ತದೆ. ಅಧ್ಯಾತ್ಮಜೀವಿಯಾಗುವುದಕ್ಕೆ, ತಪ್ತ ಜೀವನಕ್ಕೆ ಅವರನ್ನು ತರಬೇತಿಗೊಳಿಸಿರಲಿಲ್ಲ. 1872 ಆಗಸ್ಟ್ 15ರಂದು ಅವರ ಜನ್ಮ ಬಂಗಾಲದಲ್ಲಿ ಆಯಿತು. ಅವರ ತಂದೆ ಡಾ॥ ಕೃಷ್ಣಧನ ಘೋಷರು ಭಾರತದ ಬಗ್ಗೆ ಅಭಿಮಾನದಲ್ಲಿ ಕೊರತೆಯುಳ್ಳವರಲ್ಲದಿದ್ದರೂ ಈ ದೇಶದ ದುರ್ಗತಿಗೆ ಇಲ್ಲಿನ ಕಂದಾಚಾರದ ಸಂಸ್ಕೃತಿಯೇ ಕಾರಣವೆಂದು ನೆರೆ ನಂಬಿದವರು ತಮ್ಮ ಮೂವರು

ಮಕ್ಕಳು ಭಾರತೀಯ ಭಾಷೆ, ಸಂಸ್ಕೃತಿಗಳ ಸಂಪರ್ಕದಲ್ಲೇ ಬಾರದಂತೆ ಬೆಳೆಯಬೇಕೆಂದು ಹಟ ತೊಟ್ಟು ಅವರು ಮಕ್ಕಳನ್ನು ಪಕ್ಕಾ ಬಿಳೀ ಸಾಹೇಬರೇ ಕಲಿಯುವ ಶಾಲೆಗಳಿಗೆ ಹಾಕಿದರು, ಮುಂದೆ ಅವರನ್ನು ಇಂಗ್ಲೆಂಡಿಗೆ ಸಾಗಿಸಿ ಅಲ್ಲಿಯೂ ಭಾರತೀಯರು ಕಣ್ಣಿಗೂ ಬೀಳದಂತೆ ವ್ಯವಸ್ಥೆ ಮಾಡಿ ಆಂಗ್ಲ ದಂಪತಿಗಳ ಸಾಕಣೆಯಲ್ಲಿಟ್ಟರು. ಐ.ಸಿ.ಎಸ್. ಆಗಿ ತಮ್ಮ ಮಗ ಅರವಿಂದ ಪಕ್ಕಾ ಸಾಹೇಬನಾಗಿ ಈ ದೇಶದ ನಿಸ್ಕಾರಕ್ಕೆ ಒಂದು ಮಾದರಿಯಾಗಬೇಕೆಂದು ತಂದೆ ಘೋಷರ ಮನೀಷೆಯಾಗಿತ್ತು.

ತಾಯಿಯಾದರೋ ಸಾಹಿತ್ಯ ಕಲೆಗಳಲ್ಲಿ ಪ್ರತಿಭಾಶಾಲಿನಿಯಾದರೂ ವಂಶ ಪಾರಂಪರ್ಯವಾಗಿ ಬಂದ ಹಿಸ್ಟೀರಿಯಾ ರೋಗಕ್ಕೆ ತುತ್ತಾದವರು. ಒಮ್ಮೊಮ್ಮೆಯಂತೂ ರೋಗ ಉಲ್ಬಣಿಸಿ ಅವರು ಅತ್ಯಂತ ಹಿಂಸ್ರರಾಗಿ ಬಿಡುತ್ತಿದ್ದರು.

ಇಂಥಾ ದಂಪತಿಗಳ ಎರಡನೆ ಮಗನಾಗಿ ಜಗದ್ವಿಭೂತಿಯೊಂದು ಜನಿಸಿದ್ದು ಸೋಜಿಗವಲ್ಲದೆ ಮತ್ತೇನು! ಇಂಗ್ಲೆಂಡಿನಲ್ಲಿ ಶ್ರೀ ಅರವಿಂದರು ಪ್ರಚಂಡ ಬುದ್ಧಿಶಾಲಿ ವಿದ್ಯಾರ್ಥಿಯಾಗಿದ್ದರು. ಇಂಗ್ಲೀಷ್, ಫ್ರೆಂಚ್ ಅಲ್ಲದೆ ಅಭಿಜಾತ ಭಾಷೆಗಳಾದ ಗ್ರೀಕ್, ಲ್ಯಾಟಿನ್‌ಗಳಲ್ಲಿಯೂ ಬರೆಯುವಷ್ಟು, ಪ್ರಭುತ್ವವನ್ನು ಅವರು ಅಲ್ಪಾವಧಿಯಲ್ಲಿ ಸಂಪಾದಿಸಿದರು. ಕೇಂಬ್ರಿಜ್ಜಿನಲ್ಲಿ ಟ್ರೈಪಾಸ್ ಆದರು.

ಆದರೆ ಅವರು ಐ.ಸಿ.ಎಸ್. ಆಗುವಲ್ಲಿ ಏನೂ ಆಸಕ್ತಿ ತೋರಿಸಲಿಲ್ಲ. ಕುದುರೆ ಸವಾರಿಯಲ್ಲಿ ಅನುತ್ತೀರ್ಣರಾಗಿ ಬೇಕೆಂದೇ ಐ.ಸಿ.ಎಸ್. ಸಾಹೇಬಿಕೆಯಿಂದ ತಪ್ಪಿಸಿಕೊಂಡಂತೆ ಇತ್ತು. ಏಕೆಂದರೆ ಆಗಲೇ ಅವರ ಮನಸ್ಸು ಈ ದೇಶದ ದುರ್ದೈವ ಮತ್ತು ಅದರ ನಿವೃತ್ತಿಯ ಕಡೆಗೆ ತಿರುಗತೊಡಗಿತ್ತು. ಐಹಿಕ ಸುಖ ಸೌಕರ್ಯಗಳ ಕಡೆಗೆ ಅವರ ಗಮನವೇ ಇದ್ದಿಲ್ಲ. ಕೃಷ್ಣಧನ ಘೋಷರು ಹಣ ಕಳಿಸುವುದು ತಡವಾಗಿ ಅವರು ಎಷ್ಟೋ ವೇಳೆ ಕಷ್ಟಪಡಬೇಕಾಗುತ್ತಿತ್ತು; ಆದರೆ ಅವರು ವಿಚಲಿತರಾಗಿದ್ದೇ ಇಲ್ಲ.

1893ರಲ್ಲಿ ಶ್ರೀ ಅರವಿಂದರು ಭಾರತಕ್ಕೆ ಮರಳಿದರು. ಅವರ ತಂದೆ ಆಗಲೇ ಮೃತರಾಗಿದ್ದರು. ತಾಯಿಯ ಉನ್ಮಾದ ಎಷ್ಟು ಉಲ್ಬಣಿಸಿತ್ತೆಂದರೆ ಮಗನನ್ನು ಅವರು ಗುರುತೇ ಹಿಡಿಯಲಿಲ್ಲ. ಆದರೆ ಆಗಲೇ ಭಾರತಮಾತೆ ಶ್ರೀ ಅರವಿಂದರ ಮಾತೆಯಾಗಿ ಬಿಟ್ಟಿದ್ದಳು. ಇಂಗ್ಲೆಂಡಿನಿಂದ ಈ ದೇಶದಲ್ಲಿಳಿದಾಗಲೇ ಅವರಿಗೊಂದು ಅಪೂರ್ವವಾದ ಅನುಭೂತಿಯಾಗಿತ್ತು. ಬಡೋದೆಯಲ್ಲಿ ನೌಕರಿ ಹಿಡಿದು ಅಲ್ಲಿ ಇಂಗ್ಲೀಷ್ ಸಾಹಿತ್ಯದ ಪ್ರಾಧ್ಯಾಪಕರಾಗಿ ಕೊನೆಗೆ ಸಹಾಯಕ ಪ್ರಿನ್ಸಿಪಾಲರಾದರು.

ಆದರೆ ಅವರ ಗಮನ ಸಂಬಳ, ಬಡತಿ ಇವುಗಳ ಕಡೆ ಇರಲೇ ಇಲ್ಲ. ಅವರು ಅಗಾಧವಾಗಿ ಓದಿದರು. ಈ ದೇಶದ ಯಾವ ಭಾಷೆಯೂ – ಮಾತೃಭಾಷೆ ಬಂಗಾಲಿ ಕೂಡ – ಬಾರದಂತೆ ಅವರ ತಂದೆ ನೋಡಿಕೊಂಡಿದ್ದರಲ್ಲ. ಆದರೆ ಅವರು ಅತ್ಯಂತ ಪ್ರಯತ್ನಪೂರ್ವಕವಾಗಿ ಬಂಗಾಲಿಯನ್ನೂ ಅನಂತರ ಸಂಸ್ಕೃತವನ್ನೂ ಕರತಲಾಮಲಕ ಮಾಡಿಕೊಂಡರು. ಬಂಗಾಲಿಯಲ್ಲಿ ಉತ್ತಮವಾಗಿ ಬರೆಯಲ್ಲಷ್ಟು ಶಕ್ತಿ ಪಡೆದರು. ಆದರೂ ಇಂಗ್ಲೀಷನ್ನೇ ಅವರು ತಮ್ಮ ವಿಚಾರದ ಪ್ರಮುಖ ವಾಹನವಾಗಿ ಮಾಡಿಕೊಂಡಿದ್ದು ಕಾಣುತ್ತದೆ.

ಶ್ರೀ ಅರವಿಂದರು ಬಡೋದೆಯಲ್ಲಿರುವಾಗಲೇ ಉಜ್ವಲ ದೇಶಾಭಿಮಾನಿಗಳಾಗಿದ್ದರು. ಆಗಿನ ಹಿರಿಯ ನಾಯಕರಾದ ಲಿಬರಲ್ ಮತವಾದಿ ರಾನಡೆ, ಗೋಖಲೆ ಮೊದಲಾದ ಸೌಮ್ಯ ರಾಜಕೀಯ ಮುಖಂಡರ ಹಾದಿ ಶ್ರೀ ಅರವಿಂದರಿಗೆ ಸರಿದೋರಲಿಲ್ಲ. ವಿದೇಶಗಳಲ್ಲಿದ್ದಾಗ ಅವರು ಐರ್ಲಂಡ್ ಮತ್ತು ಇಟಲಿಯ ಸ್ವಾತಂತ್ರ್ಯ ಸಂಗ್ರಾಮಗಳ ಉಗ್ರಮಾರ್ಗವನ್ನು ಮೆಚ್ಚಿಕೊಂಡವರಾಗಿದ್ದರು. ಅವರಿಗೆ ಹಿಂಸೆ ಮೆಚ್ಚಿಕೆಯಲ್ಲದ್ದಿದ್ದರೂ ಉನ್ನತ ಧ್ಯೇಯ ಸಾಧನೆಗಾಗಿ ಹಿಂಸೆಯನ್ನುಪಯೋಗಿಸುವುದರಲ್ಲಿ ತಪ್ಪೇನೂ ಇಲ್ಲವೆಂದು ಅವರ ಭಾವನೆಯಾಗಿತ್ತು. ಹೀಗೆ ರಾಜಕೀಯದಲ್ಲಿ ಅವರ ಆಸಕ್ತಿ ಬೆಳೆದ ಹಾಗೆ ಬಡೋದೆಯಲ್ಲಿದ್ದ ಸರಕಾರಿ ನೌಕರಿ ತಮಗೆ ಕಾಲ್ತೊಡಕಾಗುವುದನ್ನು ಕಂಡ ಅವರು ಅದನ್ನು ತೊರೆದು ಬಂಗಾಲಕ್ಕೆ ಮರಳಿದರು. ಕಾಂಗ್ರೆಸ್ಸಿನಲ್ಲಿ ಸೌಮ್ಯ ಉಗ್ರ ಪಂಥಗಳ ನಡುವೆ ನಡೆದಿದ್ದ ಘರ್ಷಣೆಯಲ್ಲಿ ಉಗ್ರ ಪಂಥದ ಪಕ್ಷದಲ್ಲಿ ಹೋರಾಡಿದರು. ಹಿಂಸಾತ್ಮಕ ಕ್ರಾಂತಿಕಾರಿಗಳಿಗೆ ಒಳಗಿಂದೊಳಗೆ ಮಾರ್ಗದರ್ಶನ ಮಾಡಿದ್ದಲ್ಲದೆ ತಮ್ಮ ಪತ್ರಿಕೆಯಲ್ಲಿ ಬಹಿರಂಗವಾಗಿ ಸರಕಾರವನ್ನು ಕಠೋರ ಟೀಕೆಗೊಳಪಡಿಸಿದರು.

ಹಿಂಸಾತ್ಮಕ ಚಟುವಟಿಕೆಗಳಿಗೆ ಅವರ ಸಂಬಂಧ ಜೋಡಿಸಿ ಸರಕಾರ ಅವರನ್ನು ಬಂಧಿಸಿತು. ಆದರೆ ಕೋರ್ಟಿನಲ್ಲಿ ಕೇಸು ನಿಲ್ಲದೆ ಅವರ ಬಿಡುಗಡೆಯಾಯಿತು. ಆದರೆ ಆಗಲೆ ಅವರು ಹನ್ನೆರಡು ತಿಂಗಳು ಸೆರೆಮನೆಯನ್ನು ಅನುಭವಿಸಿಯಾಗಿತ್ತು. 1909ರಲ್ಲಿ ಬಿಡುಗಡೆ ಹೊಂದಿದ ಮೇಲೆ ಶ್ರೀ ಅರವಿಂದರು ಕೆಲಕಾಲ 'ಕರ್ಮಯೋಗಿ' ಎಂಬ ಪತ್ರಿಕೆ ನಡೆಸಿದರು.

ಆದರೆ ಅಲೀಪುರದಲ್ಲಿ ಸೆರೆಯಲ್ಲಿದ್ದಾಗ ಅವರ ಅಂತರಂಗದಲ್ಲಿ ಮಹತ್ವದ ಬದಲಾವಣೆಯಾಗಿತ್ತು. ಅವರಲ್ಲಿ ಯಾವುದೋ ದೈವೀ ವಿಭೂತಿ ಇಳಿದು

ಬಂದಂತಿತ್ತು. ಭಾರತದ ಆಧ್ಯಾತ್ಮಿಕ ಮತ್ತು ಕಾವ್ಯ ಸಾಹಿತ್ಯವನ್ನು ಅವರು ಗಾಢವಾಗಿ ಅಭ್ಯಾಸ ಮಾಡಿದ್ದರ ಫಲ ಈಗ ಕಾಣಿಸಿಕೊಂಡಿತ್ತು. ಪ್ರಪಂಚವೆಲ್ಲ – ತಮ್ಮನ್ನು ಸೆರೆಯಲ್ಲಿರಿಸಿದವರನ್ನೊಳಗೊಂಡು ವಾಸುದೇವ ಮಯವಾಗಿ ಅವರಿಗೆ ಕಾಣಿಸಿಕೊಂಡಂತಾಯಿತು. ಭಾರತದ ಸಮಸ್ಯೆ ಅವರಿಗೆ ಈಗ ಬೇರೆಯೆ ಸ್ವರೂಪದಲ್ಲಿ ಗೋಚರವಾಗುತ್ತಿತ್ತು. ಬಿಡುಗಡೆ ಹೊಂದಿದ ಮೇಲೆ ಅವರು ಉತ್ತರಪಾರಾದಲ್ಲಿ ಮಾಡಿದ ಪ್ರಖ್ಯಾತ ಭಾಷಣದಲ್ಲಿ ಈ ಹೊಸ ದರ್ಶನದ ಮಿಂಚು ಕಾಣಿಸುತ್ತಿದೆ. "ಭಾರತ ರಾಷ್ಟ್ರ ವರ್ಧಮಾನವಾಗುವುದು ಕೇವಲ ಭಾರತದ ದೃಷ್ಟಿಯಿಂದ ಮಾತ್ರವಲ್ಲ, ವಿಶ್ವಕಲ್ಯಾಣ ದೃಷ್ಟಿಯಿಂದ, ಭಾರತದಲ್ಲಿ ನಡೆದಿರುವ ಚಳವಳಿ ಬರಿ ರಾಜಕೀಯ ಹೋರಾಟವಲ್ಲ, ಅದು ಧರ್ಮ, ನಿಷ್ಠೆ, ಶ್ರದ್ಧೆ...".

ಹಾಗೆ ಕೇಳಿದರೆ ಶ್ರೀ ಅರವಿಂದರು ಎಂದೂ ರಾಜಕಾರಣಿಯ ಹಾಗಲ್ಲ, ದೇಶಬಂಧು ಚಿತ್ತರಂಜನದಾಸರು ಅವರನ್ನು ಕೋರ್ಟಿನಲ್ಲಿ ಸಮರ್ಥಿಸುತ್ತ ಹೇಳಿದ ಹಾಗೆ, ಪ್ರವಾದಿಯ ಹಾಗೆಯೆ ಮಾತಾಡುತ್ತಿದ್ದರು. ರಾಜಕಾರಣಿಗಳ ಎರಡರ್ಥದ ಮಾತುಗಳು ಎಂದೂ ಅವರ ಲೇಖನಿಯಿಂದ ಬಂದಿರಲಿಲ್ಲ. ಅವು ನೇರ ಮತ್ತು ಆದರ್ಶನಿಷ್ಠ, ಸತ್ವನಿಷ್ಠವಾಗಿರುತ್ತಿದ್ದವು. ಭಾರತದ ಸ್ವಾತಂತ್ರ್ಯವನ್ನು ಅವರೊಂದು ಆಧ್ಯಾತ್ಮಿಕ ಅವಶ್ಯಕತೆಯೆಂದು ಬಗೆಯುತ್ತಿದ್ದರೇ ವಿನಾ ಐಹಿಕ ಸುಖ, ರಾಷ್ಟ್ರೀಯ ದರ್ಪದ ಸಾಧನವೆಂದು ಕಾಣುತ್ತಿದ್ದಿಲ್ಲ. 1909ರ ನಂತರ ಈ ಮಾತು ಇನ್ನೂ ಸ್ಪಷ್ಟವಾಗಿ ವ್ಯಕ್ತವಾಗುತ್ತ ಹೋದುದಲ್ಲದೆ ರಾಜಕೀಯ ಹೋರಾಟದ ಸ್ವರೂಪದಲ್ಲಿ ತಮ್ಮ ಪಾತ್ರದ ಬಗ್ಗೆಯೆ ಅವರಲ್ಲಿ ಹೊಸದೊಂದು ಭಾವನೆ ಉದಯವಾಯಿತು. ನೇರ ರಾಜಕಾರಣದಿಂದ ಅವರು ದೂರ ಸರಿಯಹತ್ತಿದರು. ದೈವೀ ಭಾವನೆ ಅವರಲ್ಲಿ ತೀವ್ರತರವಾಗಿ ಜಾಗೃತವಾಗುತ್ತಿತ್ತು. ತನ್ನನ್ನು ಪರಮಾತ್ಮನ ಉಪಕರಣವಾಗಿ ಮಾಡಿಕೊಂಡ ಹೊರತು ಮನುಷ್ಯ ಪ್ರಯತ್ನಗಳು ವ್ಯರ್ಥ ಮಾತ್ರವಲ್ಲ, ಅರ್ಥಹೀನವಾಗುತ್ತವೆ. ಆ ದೈವೀ ಅವತರಣವನ್ನು ತಂದುಕೊಳ್ಳುವುದಕ್ಕೆ ಸಾಧನೆ ಬೇಕು, ನಿತಾಂತ ಸಾಧನೆ ಬೇಕು.

ಕೊನೆಗೆ 1910ರಲ್ಲಿ ಅವರು ಕಲಕತ್ತೆಯನ್ನು ತೊರೆದು ಪಾಂಡಿಚೇರಿಗೆ ಹೋದರು. ಈ ನಿಷ್ಕ್ರಮಣ ದೈವೀ ಪ್ರೇರಣೆಯೇ ಆಗಿತ್ತು. ಅಲ್ಲಿ ಅವರು ಮುಂದಿನ 40 ವರ್ಷಗಳನ್ನು ಕಳೆದರು. ಕೊನೆಯ 25 ವರ್ಷಗಳನ್ನಂತೂ ಸಂಪೂರ್ಣವಾಗಿ ಒಂದೇ ಕೋಣೆಯಲ್ಲಿ ಕಳೆದರು. ಅವರು ಯೋಗ ಸಾಧನೆ ಮಾಡಿದರು. ಗಾಢ ಚಿಂತನೆಯಿಂದ ವಿಶ್ವರಹಸ್ಯವನ್ನು ಭೇದಿಸುವ ಪ್ರಯತ್ನ

ಮಾಡಿದರು. ಈ ಚಿಂತನ, ಮನನ, ಯೋಗದೃಷ್ಟಿಗಳಿಂದ ಅವರು ನಿಷ್ಪನ್ನಗೊಳಿಸಿದ ವಿಷಯಗಳು ಮೊದಲು 'ಆರ್ಯ' ಎಂಬ ಪತ್ರಿಕೆಯಲ್ಲಿ ಬರುತ್ತಿದ್ದವು. ಮುಂದೆ ಇವು ಗ್ರಂಥ ರೂಪದಲ್ಲಿ ಪ್ರಕಟವಾದವು.

ಅನೇಕ ಸಹಸ್ರ ಪುಟಗಳನ್ನು ತುಂಬುವಷ್ಟು ಬರಹಗಳನ್ನು ಶ್ರೀ ಅರವಿಂದರು ಬರೆದರು. ಅವರ ನಿರ್ಮಿತಿಯು ಅಕ್ಷಯ ಭಂಡಾರವೇ ಇದ್ದಂತಿದೆ. ಈಗಲೂ ಅವು ಅಷ್ಟಷ್ಟೆ ಪ್ರಕಟವಾಗುತ್ತ ಇವೆ. ಅವರು ಯೋಚಿಸದ ವಿಷಯಗಳೇ ಇಲ್ಲ ಎಂಬಷ್ಟು ವಿಸ್ತಾರವೂ ಆಳವೂ ಆಗಿದೆ ಈ ಗ್ರಂಥಸಾಗರ. ಅವು ನಮ್ಮ ದೇಶದ ಅನೇಕ ಕವಿಗಳನ್ನೂ, ಚಿಂತಕರನ್ನೂ ಬಹುವಾಗಿ ಪ್ರಭಾವಿತಗೊಳಿಸಿವೆ. ವಿಶೇಷವಾಗಿ ಅವರ 'ಸಾವಿತ್ರಿ' ಕಾವ್ಯ ಪ್ರಪಂಚದಲ್ಲೇ ಅದ್ವಿತೀಯವೆಂದು ಭಾವಿಸಲಾಗುತ್ತದೆ. ಮಹಾಭಾರತದ ಒಂದು ಸಾಮಾನ್ಯ ಉಪಾಖ್ಯಾನವನ್ನು ಒಂದು ಪರಿಪೂರ್ಣ ದರ್ಶನದ ವಾಹನವಾಗಿ ಮಾಡಿಕೊಂಡ ಈ ಕಾವ್ಯ ಆದಿಶಕ್ತಿ ಮಾನವಲೋಕಕ್ಕಿಳಿದು ಬಂದು ಬದ್ಧ ಮಾನವ ಕುಲವನ್ನು ದೈವತ್ವಕ್ಕೇರಿಸುವ ಕನಸು ಕಾಣುತ್ತದೆ.

ಶ್ರೀ ಅರವಿಂದರ ಚಿಂತನೆ ಅಮೋಘವಾದ ಇಂಗ್ಲೀಷ್ ಭಾಷಾಶೈಲಿಯಲ್ಲಿ ಹೊರಹೊಮ್ಮಿದೆ. ಅದು ಸುಲಭ ಗ್ರಾಹ್ಯವೆಂದು ಹೇಳುವ ಹಾಗಿಲ್ಲ. ಅವರು ಬಳಸುವ ಶಬ್ದಗಳಲ್ಲಿ ಹೆಚ್ಚಿನವು ಇಂಗ್ಲೀಷ್ ಭಾಷೆಯಲ್ಲಿ ಉಪಯೋಗದಲ್ಲಿದ್ದವೇ ಆದರೂ ಅವುಗಳಿಗೆ ವಿಶೇಷಾರ್ಥಗಳಿರುತ್ತವೆ. ಅವುಗಳನ್ನು ಚೆನ್ನಾಗಿ ಗ್ರಹಿಸಿಕೊಂಡಲ್ಲದೆ ಓದುಗ ದಿಕ್ಕು ತಪ್ಪಿ ಅಲೆಯುವ ಸಂಭವ ಹೆಚ್ಚು.

ಶ್ರೀ ಅರವಿಂದರು ಪಾಶ್ಚಾತ್ಯರು ತತ್ತ್ವಜ್ಞಾನ ಅಥವಾ Philosophy ಎನ್ನುವ ವರ್ಗದ್ದೆಂದು ಹೇಳಲಾಗದು. ತತ್ತ್ವಜ್ಞಾನ ತರ್ಕದ ಆಟ. ಇಂದ್ರಿಯ ಪ್ರಪಂಚಕ್ಕಿಂತ ಅದು ಆಚೆಗೆ ಹೋಗಲಾರದು. ಪ್ರಪಂಚವನ್ನು ನಡೆಸತಕ್ಕ ಶಕ್ತಿ ಅದರಾಚೆಗಿನದು. ಅದು ದರ್ಶನದಿಂದ ಮಾತ್ರ ಗ್ರಾಹ್ಯವಾದದ್ದು. ಕಂಡದ್ದು, ಹೊಳೆದದ್ದೆಲ್ಲ ದರ್ಶನವಾಗಲಾರದು. ಅದಕ್ಕೆ ಮಾನವ ಅಹಂಕಾರವನ್ನು ಪೂರ್ತಿಯಾಗಿ ವರ್ಜಿಸಿ ಪರಮಾತ್ಮ ಸಂಕಲ್ಪಕ್ಕೆ ಪೂರ್ತಿಯಾಗಿ ತನ್ನನ್ನೊಪ್ಪಿಸಿಕೊಂಡು ಬಿಡಬೇಕು. ಇಂಥ ಯೋಗ ಸ್ಥಿತಿಯಲ್ಲಿ ಪರಮಾತ್ಮನ ಸಂಕಲ್ಪ ಮಾನವನಿಗೆ ವೇದ್ಯವಾಗುತ್ತದೆ. ಆ ಅನಾದಿ ಶಕ್ತಿಗೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಳ್ಳುವುದೇ ನಿಜವಾದ ಜ್ಞಾನದ ಮಾರ್ಗವೆಂಬ ಮನವರಿಕೆಯಿಂದ ಶ್ರೀ ಅರವಿಂದರು ಕಾರ್ಯಪ್ರವೃತ್ತರಾಗಿದ್ದರು.

ಇದೇನು ಹೊಸದಲ್ಲ. ಸಮರ್ಪಣ ಭಾವವನ್ನು ನಮ್ಮ ಪುರಾತನ ಸಂತರು ಹೇಳಿಲ್ಲವೆ? ಸತ್ಯವನ್ನು ಬುದ್ಧಿಯಿಂದ, ತರ್ಕದಿಂದ ಸಾಧಿಸಲಾಗದು ಎಂದು ಉಪನಿಷತ್ತು ಹೇಳಿಲ್ಲವೆ? ಶ್ರೀ ಅರವಿಂದರ ಹೆಚ್ಚಳವೇನು? ಶ್ರೀ ಅರವಿಂದರು ಹೆಚ್ಚಳವನ್ನು ಸ್ಥಾಪಿಸುವ ಸ್ಪರ್ಧೆಯಿಂದ ಹೊರಟೇ ಇಲ್ಲ. ಹಿಂದಿನವರು ಹೇಳಿದ್ದನ್ನು ನಿರಾಕರಿಸಲು ಅವರು ಯತ್ನಿಸಿಯೇ ಇಲ್ಲ. ಮನುಷ್ಯ ಇಂದಿನ ಸ್ಥಿತಿಯಲ್ಲಿ ಏನು ಮಾಡಬಲ್ಲ? ಅವನು ಉತ್ಕ್ರಾಂತಿ ಪಥದಲ್ಲಿ ಬಹಳ ದೂರ ನಡೆದು ಬಂದಿದ್ದಾನೆಂಬುದು ನಿಜ. ಆದರೆ ಈಗ ಅವನು ತಡೆದು ನಿಂತಿದ್ದಾನೆ. ಇದುವರೆಗೆ ಅವನು ನಡೆದು ಬಂದ ನಿರರ್ಥಕ ಚಕ್ರಪಥದಿಂದ ಬಿಡುಗಡೆ ಹೊಂದಿ ಹೊಸ ಎತ್ತರಕ್ಕೆ ಅವನು ಏರಬೇಕು. ಅದಕ್ಕೆ ಆಧ್ಯಾತ್ಮ ಶಕ್ತಿ ಸಂಚಯವಾಗಬೇಕು. ಆ ಶಕ್ತಿ ಸಂಚಯವನ್ನು ಮಾಡಿಕೊಳ್ಳುವುದು ಮತ್ತು ತಮ್ಮ ಈ ತಪಸ್ಸಿನ ಫಲಿತಾಂಶಗಳನ್ನು ಮಾನವ ಕುಲಕ್ಕೆ ಕೊಡುವುದು ಶ್ರೀ ಅರವಿಂದರ ಧ್ಯೇಯವಾಯಿತು.

ಭಾರತೀಯ ಮಾರ್ಗದಲ್ಲಿ ಈಗಿನ ಕಾಲಕ್ಕೆ ಅವರಿಗೆ ಕೆಲ ಕೊರತೆಗಳು ಕಂಡವು. ಲೌಕಿಕ ಮತ್ತು ಆಧ್ಯಾತ್ಮಿಕ ಇವು ಬೇರೆ ಬೇರೆಯಾಗಿದ್ದವು. ಈ ಮಾರ್ಗದಲ್ಲಿ ಕೆಲ ವ್ಯಕ್ತಿಗಳು ಮೋಕ್ಷವನ್ನೈದಿದರು. ಆದರೆ ಉಳಿದವರು ಪ್ರಪಂಚದಲ್ಲೆ ಉಳಿದು ಇದರ ದುಃಖಗಳನ್ನನುಭವಿಸಬೇಕಾಗಿದೆ. ಇವೆರಡರಲ್ಲಿ ಸಮನ್ವಯ ಸಾಧಿಸುವುದು ಈಗ ಬೇಕಾಗಿದೆ. ಇಂದಿನ ಆತ್ಮಪ್ರತಿಷ್ಠಾ ಪ್ರಧಾನವಾದ ಸಮಾಜ ಬದಲಾಗಬೇಕು. ಮಾನವರು ಬಲಿಷ್ಠರಾಗಬೇಕು. ಎರಡರಲ್ಲಿ ಏಕವಾಗಬೇಕು. ಆದ್ದರಿಂದ ಮೊದಲು ಮಾನವರ ಪರಿಶುದ್ಧಿಯಾಗಬೇಕು. ಇದು ಆಧ್ಯಾತ್ಮದಿಂದಲೇ ಸಾಧ್ಯ.

ಪ್ರಕೃತಿಯ ಬಂಧನದಿಂದ ಮುಕ್ತನಾಗಿ ಮನುಷ್ಯ ದೈವೀ ಸ್ತರಕ್ಕೆ ಏರಬಹುದಾದ ರೀತಿಯನ್ನು ಶ್ರೀ ಅರವಿಂದರ ಅನನ್ಯ ಗ್ರಂಥವಾದ 'ದಿವ್ಯ ಜೀವನ'(Life Divine)ದಲ್ಲಿ ಕಾಣುತ್ತೇವೆ. ಅವರ ಇನ್ನೊಂದು ಮುಖ್ಯ ಗ್ರಂಥವಾದ 'ಮಾನವ ಕುಲದ ಐಕ್ಯದ ಆದರ್ಶ' (Ideal of Human Unity). ಈವರೆಗೆ ಕುಲ, ಜನಾಂಗ, ರಾಷ್ಟ್ರ ಇತ್ಯಾದಿ ಆಧಾರದಿಂದ ಮಾನವರಲ್ಲಿ ಐಕ್ಯ ಸಾಧಿಸುವ ಯತ್ನ ವ್ಯರ್ಥವಾಗಿದೆ. ಅದೇ ಪ್ರಕಾರ ಮಾನವ ಕುಲವನ್ನು ರಾಷ್ಟ್ರ ಸಂಘದಂಥ ಸಂಸ್ಥೆಗಳ ಮೂಲಕ ಸಾಧಿಸುವ ಯತ್ನಗಳೂ ವಿಫಲವೇ ಆಗಿವೆ. ಇದರಿಂದ ಕೆಲವರ ಪ್ರತಿಷ್ಠೆ, ಕೆಲವರ ಅಡಿಯಾಳ್ತನ ತಪ್ಪಿಲ್ಲ. ಇದಕ್ಕೆ ಕಾರಣವೆಂದರೆ ಮನುಷ್ಯ ಕುಲ ತನ್ನ ಮೂಲ ಪ್ರಕೃತಿಯನ್ನು ಬದಲಿಸಿಕೊಂಡಿಲ್ಲ.

ಮಾನವೀಯ ಐಕ್ಯದ ಕಲ್ಪನೆ ಬಾಹ್ಯವಾಗಿದೆ. ಅದು ಆಂತರಿಕವೂ, ಆತ್ಮಿಕವೂ ಆಗಿದ್ದರೆ ಮಾತ್ರ ಇಡೀ ಮಾನವತೆ ಐಕ್ಯ ಭಾವವನ್ನು ಸಾಧಿಸಲ್ಲದು – ಇದು ಅವರ ಪ್ರತಿಪಾದನೆಯಾಗಿದೆ.

ಇದೂ ಅಲ್ಲದೆ ಕಲೆ, ಸಾಮಾಜಿಕ ರಚನೆ, ರಾಜಕೀಯ, ಅರ್ಥಶಾಸ್ತ್ರ, ಕಾವ್ಯ ಇಂಥ ಅಸಂಖ್ಯ ವಿಚಾರಗಳ ಮೇಲೆ ಶ್ರೀ ಅರವಿಂದರು ಬರೆದಿದ್ದಾರೆ. ಎಲ್ಲವೂ ಈ ಭೌತ ಪ್ರಕೃತಿ ಬದ್ಧ ಪ್ರಪಂಚದಿಂದ ಮನುಷ್ಯನನ್ನು ಮೇಲೆತ್ತಿ ಆನಂದದಲ್ಲಿ ನಿಲ್ಲಿಸುವ ದೃಷ್ಟಿಯನ್ನೊಳಗೊಂಡವುಗಳೇ.

ಶ್ರೀ ಅರವಿಂದರು ಯೋಗಿಗಳ ಚಿಂತನದಲ್ಲಿ ಸಮನ್ವಯ ಮತ್ತು ಮಾನವರ ಸಾಮೂಹಿಕ ಆರೋಹಣ ಮಹತ್ವದ ಅಂಶಗಳಾಗಿವೆ. ಈವರೆಗೆ ವಿಕಾಸವಾದವು ಹೇಳುವ ಜಡ, ಪ್ರಾಣ, ಮನಗಳ ವಿಕಾಸದತ್ತ ಜೀವ ಲೋಕ ಮುನ್ನಡೆದಿದೆ. ಮನುಷ್ಯ ಈಗ ಅದರ ಸೀಮೆಯಲ್ಲಿದ್ದಾನೆ. ಮನಸ್ಸು ಬದ್ಧವಾಗಿರುವುದರಿಂದ ಅದು ಸ್ವಾರ್ಥ ದ್ವೇಷಾದಿಗಳಿಂದ ಪೀಡಿತವಾಗಿದ್ದಾನೆ. ಈ ಮನಸ್ಸಿನ ಸ್ತರದಿಂದ ಆತ ಮೇಲೇರಿ ಮುಂದಿನ ಹಂತವಾದ ಅತಿಮಾನಸ ಸ್ತರಕ್ಕೇರುವ ಯತ್ನ ಮಾಡಬೇಕು. ಆಗ ದೈವೀಕೃಪೆ ಇಳಿದು ಬಂದು ಅವನನ್ನು ಮೇಲಕ್ಕೆತ್ತುತ್ತದೆ. ಅಲ್ಲಿಂದ ಆತ ಇಲ್ಲಿದ್ದೂ ಆನಂದದಲ್ಲಿ ತಲ್ಲೀನನಾಗಿರುತ್ತಾನೆ. ಅದರಲ್ಲಿ ಕಲ್ಮಷಗಳ ಸ್ಪರ್ಶವಿಲ್ಲ.

ಶ್ರೀ ಅರವಿಂದರು ಮಾನವ ಕುಲಕ್ಕೆ ಕೊಡುವ ಸಂದೇಶವೂ ಆಶಾಜ್ಯೋತಿಯೂ ಇದು; ಪೂರ್ಣ ಯೋಗದಿಂದ ತಪಸ್ವಿಗಳು ಮುಕ್ತ ಸ್ಥಿತಿಗೇರುತ್ತಾರೆ. ಹಿಂದಿನ ಭಾರತೀಯ ಆಧ್ಯಾತ್ಮದಲ್ಲಿ ಇದು ಗುರಿ. ಇಲ್ಲಿಗೆ ಮುಗಿಯಿತು. ಆದರೆ ಮುಕ್ತರು, ದಿವ್ಯ ಜೀವನ ಸ್ತರಕ್ಕೇರಿದವರು ಅಲ್ಲಿಯೇ ನಿಲ್ಲದೆ ಕೆಳಗಿಳಿದು ಬಂದು ಭೂಮಿಯಲ್ಲಿ ಕಾರ್ಯ ಕೈಕೊಂಡು ಮಾನವ ಕುಲವನ್ನು ಮೇಲೆತ್ತಬೇಕು. ಆಗ ಭುವಿಯ ಬಾಳು ಅಮಿತ ಶಕ್ತಿ ಜ್ಞಾನ ಪ್ರೇಮ ಆನಂದಗಳಿಂದ ಓತಪ್ರೋತವಾಗುತ್ತದೆ.

ಶ್ರೀ ಅರವಿಂದರು ಮಾನವರಲ್ಲಿ ಮುಂದುವರಿದವರಿಗೆ ಈ ಹೊಸ ಆದರ್ಶವನ್ನು ಹಾಕಿ ಕೊಟ್ಟಿದ್ದಾರೆ. ಮಾನವನ ವೈಯಕ್ತಿಕ ಮಾತ್ರವಲ್ಲ, ಸಾಮೂಹಿಕ ಉನ್ನಯನದ ಆಶ್ವಾಸನೆ ನೀಡಿದ್ದು ಅವರ ವಿಶೇಷ.

**ಸಾಧನ ಪಥದಿಂದ ದೂರವುಳಿಸುವ ತಪ್ಪಿಗಿಂತ ಸಾಧನಪಥದಲ್ಲಿರುವಾಗ ಗೈದ ತಪ್ಪುಗಳು ಹೆಚ್ಚು ಬೋಧಕವಾಗಿರುತ್ತವೆ.**

**– ಶ್ರೀ ಅರವಿಂದರು**

# ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ಹೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ<br>ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926<br>(Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ಶ್ರೀ ಅರವಿಂದೋ ಸೊಸೈಟಿ ಶಾಖೆ, ಜೆ.ಪಿ.ನಗರ ವತಿಯಿಂದ ಕೆಳಕಂಡ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

- 7ನೇ ಸೆಪ್ಟೆಂಬರ್ 2019 ಶನಿವಾರ ಡಾ॥ ಸಿ.ಎನ್. ಪಾಟೀಲ್, ಅಪೋಲೋ ಆಸ್ಪತ್ರೆ, ಬೆಂಗಳೂರು ಇವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ "ಮಂಕುತಿಮ್ಮನ ಕಗ್ಗ" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

- 14ನೇ ಸೆಪ್ಟೆಂಬರ್ 2019 ಶನಿವಾರ ಡಾ॥ ತಿಮ್ಮಪ್ಪ ಹೆಗಡೆ, ನಾರಾಯಣ ಹೃದಯಾಲಯ, ಬೆಂಗಳೂರು ಇವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ "ಕೇನ ಉಪನಿಷತ್ತು" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

- 21ನೇ ಸೆಪ್ಟೆಂಬರ್ 2019 ಶನಿವಾರ ಶ್ರೀ ಸುರೇಷ್ ಮೂನ, ನಿವೃತ್ತ ಶಿಕ್ಷಕರು ಮತ್ತು ಎನ್.ಸಿ.ಸಿ. ಆಫೀಸರ್, ಬೆಂಗಳೂರು ಇವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ "ಇಮ್‌ಪ್ಯಾಕ್ಟ್ ಆಫ್ ಸ್ವಾಮಿ ವಿವೇಕಾನಂದ ಇನ್ ಕನ್ನಡ" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

- 28ನೇ ಸೆಪ್ಟೆಂಬರ್ 2019 ಶನಿವಾರ ಶ್ರೀಮತಿ ದಿವ್ಯ ಕೃಷ್ಣಮೂರ್ತಿ, ಕರ್ನಾಟಕ ಸಂಗೀತ ಕಲಾವಿದೆ, ಬೆಂಗಳೂರು ಇವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ ಭಕ್ತಿಗೀತೆಗಳನ್ನು ಏರ್ಪಡಿಸಲಾಗಿತ್ತು.

- 5ನೇ ಅಕ್ಟೋಬರ್ 2019 ಶನಿವಾರ ಡಾ॥ ಆರ್.ವಿ. ಜಹಗೀರದಾರ, ಕಾರ್ಯನಿರ್ವಾಹಕ ಧರ್ಮದರ್ಶಿ, ಸಾಕ್ಷಿ ಬೆಂಗಳೂರು ಇವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ "ವೇದಿಕ್ ಕಲ್ಚರ್–2 – ಯಜ್ಞ ಇನ್ನರ್ ಮತ್ತು ಔಟರ್ (ಕನ್ನಡದಲ್ಲಿ)" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

- 12ನೇ ಅಕ್ಟೋಬರ್ 2019 ಶನಿವಾರ ಡಾ॥ ಆರ್.ವಿ. ಜಹಗೀರದಾರ, ಕಾರ್ಯನಿರ್ವಾಹಕ ಧರ್ಮದರ್ಶಿ, ಸಾಕ್ಷಿ ಬೆಂಗಳೂರು ಇವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ "ವೇದಿಕ್ ಕಲ್ಚರ್–3 – ಗ್ಲೋರಿ ಆಫ್ ವೇದ (ಕನ್ನಡದಲ್ಲಿ)" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.
- 19ನೇ ಅಕ್ಟೋಬರ್ 2019 ಶನಿವಾರ ವಿಕಲಚೇತನ ವಿದ್ಯಾರ್ಥಿಗಳು, ಸಮರ್ಥನಂ ಟ್ರಸ್ಟ್, ಬೆಂಗಳೂರು ಇವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ "ಗಾಯನ" ಏರ್ಪಡಿಸಲಾಗಿತ್ತು.
- 26ನೇ ಅಕ್ಟೋಬರ್ 2019 ಶನಿವಾರ ಶ್ರೀ ಎಮ್. ಜಯಪ್ರಕಾಶ್ ಮತ್ತು ತಂಡ, ಜ್ಯೋತಿ ಸ್ಕೂಲ್ ಆಫ್ ಮ್ಯೂಸಿಕ್, ಬೆಂಗಳೂರು ಇವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ "ವಾದ್ಯ ಸಂಗೀತ"ವನ್ನು ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.



ನಲು–ನಯದ ಜೊತೆಗೆ ಲಾವಣ್ಯವಿದುವು ಉತ್ಕೃಷ್ಟ ತೇಜ–ತತ್ವ
ಉತ್ಕಟದ ಭಾವದುದ್ವೇಗದಲ್ಲಿ ಸಾಮ್ರಾಜ್ಯ–ಮೇಳ–ಸತ್ವ,
ಹೃದ್ಗತದ ತೀವ್ರ ಬಾಧ್ಯತೆಯ ಬಯಕೆ ಅದು ತೋಷ–ಸತತ–ಸ್ಪಂದ
ಸುಸ್ಮಿತದ ಧಾರೆ–ಧಾರೆಯಭಿಷೇಕ ಈ–ಲೋಕ–ಪಥದಿ ಛಂದ.

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 2 ರೇಣು 3 ಪುಟ 127)**

**RNI No. 22511/1971**
No. of Pages **60 + 4 (Cov. Page)**
KAR Reg No.: RNP/KA/BGS/368/2018-2020
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2020
Licensed to Post at BG PSO, Mysore Road, Bengaluru - 560 026



**ಜೀವನವು ಮತ್ತೆ ಚಿತ್ತವದು ತಮ್ಮ ಸ್ವಪ್ನಗಳ ಪುಟಿತಗೊಳಿಸೆ**
**ಸುಸಂಬದ್ಧದಲಿ ಸಂರಚನೆಗೊಂಡ ಕಾಣ್ಕೆಗಳ ರೂಪವಿರಿಸೆ**
**ಈ ಲೋಕವೀಗ ಆಧಾರ ತಾನು ವಿಕಸನಕೆ ಆದಿಯಾಗಿ**

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 4 ಪುಟ 46)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.